# ಮಾರ್ಗಸೂಚಿಗಳು
# ಕಾರ್ಯಕ್ರಮ ಮತ್ತು ಚಟುವಟಿಕೆಗಳು

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ
ಕರ್ನಾಟಕ ಸರ್ಕಾರ
ಫೆಬ್ರವರಿ 2020

**ಉಲ್ಲೇಖ:** **ಕ.ವಿ.ತಂ.ಅ. ಕರ್ನಾಟಕ ಸರಕಾರ, 2021**
ಮಾರ್ಗಸೂಚಿಗಳು : ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು
ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು,
50 ಪುಟಗಳು

**ಸಂಕಲನ :** **ಪ್ರೊ. ಎಸ್.ಅಯ್ಯಪ್ಪನ್, ಡಾ.ಎ.ಎಂ.ರಮೇಶ್,**
**ಡಾ. ಆನಂದ್ ಆರ್. ಮತ್ತು ಶ್ರೀ ವಿ.ಜಿ.ಉಮೇಶ್,**
ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**ಕನ್ನಡಕ್ಕೆ ಅನುವಾದ :** ಶ್ರೀನಿಧಿ

**ಕ.ವಿ.ತಂ.ಅ.ಕಾರ್ಯಕಾರಿ ಸಮಿತಿ 2020–2023**

**ಪ್ರೊ.ಎಸ್.ಅಯ್ಯಪ್ಪನ್,** ಅಧ್ಯಕ್ಷರು
**ಡಾ.ಇ.ವಿ.ರಮಣ ರೆಡ್ಡಿ,** ಐಎಎಸ್, ಸದಸ್ಯರು
**ಡಾ.ಪ್ರಕಾಶ್ ಎಂ. ಸೊಬರದ್,** ಸದಸ್ಯ ಕಾರ್ಯದರ್ಶಿ
**ಪ್ರೊ.ಎಚ್.ಎ.ರಂಗನಾಥ್,** ಸದಸ್ಯರು
**ಪ್ರೊ.ಕೆ.ಬಾಲವೀರ ರೆಡ್ಡಿ,** ಸದಸ್ಯರು
**ಪ್ರೊ.ಬಿ.ಜಿ.ಮೂಲಿಮನಿ,** ಸದಸ್ಯರು
**ಪ್ರೊ.ಎಸ್.ಕೆ.ಸೈದಾಪುರ್,** ಸದಸ್ಯರು
**ಪ್ರೊ.ವಿ.ಜಿ.ತಳವಾರ್,** ಸದಸ್ಯರು
**ಪ್ರೊ.ಎ.ಎಚ್.ರಾಜಾಸಾಬ್,** ಸದಸ್ಯರು
**ಡಾ.ಎ.ಇ.ಏಕನಾಥ್,** ಸದಸ್ಯರು
**ಡಾ.ಡಿ.ಚೆನ್ನೇ ಗೌಡ,** ಸದಸ್ಯರು
**ಪ್ರೊ.ಕತ್ರೆ ಶಕುಂತಲ,** ಸದಸ್ಯರು
**ಪ್ರೊ.ಎಚ್.ಎಸ್.ಸಾವಿತ್ರಿ,** ವಿಶೇಷ ಆಹ್ವಾನಿತರು
**ಡಾ.ಎ.ಎಂ.ರಮೇಶ್,** ಸಂಚಾಲಕರು

**ಪ್ರಕಟಣೆ**
**ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ**
**ತೋಟಗಾರಿಕಾ ಕಾಲೇಜು ಪ್ರವೇಶದ್ವಾರ, ಜಿಕೆವಿಕೆ ಆವರಣ**
**ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ವಿದ್ಯಾರಣ್ಯಪುರ ಅಂಚೆ, ಬೆಂಗಳೂರು–560097**
**ದೂರವಾಣಿ : 080–2972 1550; ಇ ಮೇಲ್;** ksta.gok@gmail.com; **ಜಾಲತಾಣ :** www.kstacademy.in

ಡಾ॥ ಇ.ವಿ. ರಮಣ ರೆಡ್ಡಿ, ಭಾಆಸೇ
ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ
**DR. E.V. RAMANA REDDY, IAS**
Additional Chief Secretary to Government

GOVERNMENT OF KARNATAKA

ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ
**Department of Electronics, Information Technology**
**Biotechnology and Science & Technology**

# ಸಂದೇಶ

ಸರ್ಕಾರಿ ಮತ್ತು ಸಾಂಸ್ಥಿಕವಲಯದಲ್ಲಿ ಹಲವಾರು ಸಂಸ್ಥೆಗಳ ನೆಲೆಯಾಗಿರುವ ಕರ್ನಾಟಕವು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ದೇಶದಲ್ಲೇ ಅಗ್ರಸ್ಥಾನದಲ್ಲಿದೆ. ಜಾಗತಿಕ ಐಟಿಹಬ್ ಎಂದು ಗುರುತಿಸಲಾಗಿರುವ ಬೆಂಗಳೂರು ನಗರವು ಹಲವಾರುವರ್ಷಗಳಿಂದ ಮುಂಚೂಣಿ ಕ್ಷೇತ್ರಗಳಲ್ಲಿ ಅನೇಕ ಹೊಸ ಉಪಕ್ರಮಗಳನ್ನು ಪೋಷಿಸಿದೆ. ವಿಶ್ವವಿದ್ಯಾಲಯಗಳಲ್ಲಿ ವಿಜ್ಞಾನ ಕಲಿಕೆಯ ಪರಂಪರೆಯಿಂದ ಸ್ಟಾರ್ಟ್ ಅಪ್‌ಗಳ ಮೂಲಕ ನಾವೀನ್ಯತೆಯವರೆಗೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಾಧನಗಳ ಪ್ರಭಾವವು ರಾಜ್ಯದಾದ್ಯಂತ ಗೋಚರಿಸುದೆ. ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗಸಂಸ್ಥೆಯಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, 2005ರಲ್ಲಿ ಪ್ರಾರಂಭವಾದಾಗಿನಿಂದಲೂ, ವಿದ್ಯಾರ್ಥಿಗಳ ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ವಿಜ್ಞಾನ ಸಾಕ್ಷರತೆಯನ್ನು ಹರಡಲು ಹಾಗೂ ಪರಿಕಲ್ಪನೆಗಳು ಮತ್ತು ವಿಚಾರಗಳನ್ನು ಜನಪ್ರಿಯಗೊಳಿಸಲು ಶ್ರಮಿಸುತ್ತಿದೆ.

ವಿಜ್ಞಾನ ವಿಷಯಗಳು, ವಿತರಣೆ, ಅನ್ವಯಗಳು ಮತ್ತು ಉದ್ಯಮಶೀಲತೆಗೆ ಸಂಬಂಧಿಸಿದಂತೆ ಸಾಮಾಜಿಕ ನಿರೀಕ್ಷೆಗಳಲ್ಲಿ ಕಂಡುಬರುತ್ತಿರುವ ಬದಲಾವಣೆಗಳೊಂದಿಗೆ, ಅಕಾಡೆಮಿಯಲ್ಲಿಯೂ ಹೊಸ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳನ್ನು ರೂಪಿಸಲಾಗುತ್ತಿದೆ. ಈನಿಟ್ಟಿನಲ್ಲಿ, ಸಮ್ಮೇಳನಗಳು, ಕಾರ್ಯಾಗಾರಗಳು, ವಿದ್ಯಾರ್ಥಿ ಸ್ಪರ್ಧೆಗಳು, ಸಣ್ಣಅನುದಾನಗಳು, ಪುಸ್ತಕಗಳ ಪ್ರಕಟಣೆ, ಪ್ರಶಸ್ತಿಗಳು, ಕಾರ್ಯನೀತಿ / ಕಾರ್ಯತಂತ್ರದ ಪೇಪರ್‌ಗಳು, ಫೆಲೋಶಿಪ್ ಮತ್ತು ಸದಸ್ಯತ್ವಗಳು, ನಾವೀನ್ಯತಾ ವೇದಿಕೆ, ವಿಜ್ಞಾನ ಪ್ರವಾಸೋದ್ಯಮ, ಇಂಪ್ಯಾಕ್ಟ್ ಅಸೆಸ್‌ಮೆಂಟ್ ಅಧ್ಯಯನಗಳು ಮುಂತಾದ ಹೆಚ್ಚಿನ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

ಚಟುವಟಿಕೆಗಳನ್ನು ಮತ್ತು ಸಂದೇಶಗಳನ್ನು ಪಾಲುದಾರರಲ್ಲಿ ಪಸರಿಸುವ ಸಲುವಾಗಿ, ಉದಯೋನ್ಮುಖ ಅಗತ್ಯಗಳು ಮತ್ತು ಆಕಾಂಕ್ಷೆಗಳಿಗೆ ಅನುಗುಣವಾಗಿ, ಕೆಎಸ್‌ಟಿಎ ಈ ಕಾರ್ಯಕ್ರಮಗಳಿಗೆ ಮಾರ್ಗಸೂಚಿಗಳನ್ನು ರೂಪಿಸಿದೆ. ಈ ಪ್ರಕಟಣೆಗಾಗಿ ನಾನು ಕೆಎಸ್‌ಟಿಎ ತಂಡವನ್ನು ಅಭಿನಂದಿಸಲು ಬಯಸುತ್ತೇನೆ. ವಿಜ್ಞಾನ, ತಂತ್ರಜ್ಞಾನ ಮತ್ತು ಆವಿಷ್ಕಾರಗಳು ನಮ್ಮ ದೈನಂದಿನ ಜೀವನವನ್ನು ಹೆಚ್ಚು ಹೆಚ್ಚಾಗಿ ಸುಧಾರಿಸುವುದರೊಂದಿಗೆ, ಉದ್ದೇಶಿತ ಕಾರ್ಯಕ್ರಮಗಳಿಂದ ರಾಜ್ಯವು ಪ್ರಯೋಜನ ಪಡೆಯುತ್ತದೆ ಎನ್ನುವುದರಲ್ಲಿ ನನಗೆ ಸಂದೇಹವಿಲ್ಲ.

(ಡಾ. ಇ. ವಿ ರಮಣರೆಡ್ಡಿ)

6ನೇ ಮಹಡಿ, ಗೇಟ್ ನಂ.5, ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–560001, ಭಾರತ.
Address : 6th Floor, Gate No. 5, M.S. Building, Dr. B.R. Ambedkar Veedhi, Bengaluru - 560 001, India.
Tel : +91-80-22280562, 22374314, 22032434
Email : itbtsec@karnataka.gov.in

INNOVATE KARNATAKA

# ಮುನ್ನುಡಿ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ (ಕೆಎಸ್ಟಿಎ) ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಡಿಯಲ್ಲಿ ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು, ಇದನ್ನು ಇಸ್ರೋದ ಮಾಜಿ ಅಧ್ಯಕ್ಷರಾದ ದಿವಂಗತ ಪ್ರೊ. ಯು. ಆರ್. ರಾವ್ ಅವರ ಅಧ್ಯಕ್ಷತೆಯಲ್ಲಿ 5ನೇಸೆಪ್ಟೆಂಬರ್, 2005ರಂದು ಸ್ಥಾಪಿಸಲಾಯಿತು. ಕರ್ನಾಟಕ ಸರ್ಕಾರವು ಅಕಾಡೆಮಿ ಸದಸ್ಯರ ಸಮಿತಿಯನ್ನು 2020 ರ ಏಪ್ರಿಲ್ನಲ್ಲಿ ಪ್ರಖ್ಯಾತ ಶಿಕ್ಷಣ ತಜ್ಞರು ಮತ್ತು ವಿಜ್ಞಾನಿಗಳೊಂದಿಗೆ ಪುನರ್ರಚಿಸಿತು.

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗವಾದ, 5ನೇ ಸೆಪ್ಟೆಂಬರ್ 2005ರಂದು ಸ್ಥಾಪನೆಯಾದ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು (ಕೆಎಸ್ಟಿಎ) ರಾಜ್ಯದಲ್ಲಿ ವಿಜ್ಞಾನವನ್ನು ಪ್ರಚಾರಪಡಿಸುವ ಹಾಗೂ ಜನಪ್ರಿಯಗೊಳಿಸುವ ಅಧ್ಯಾದೇಶವನ್ನು ಪಡೆದಿದೆ. 'ಎಲ್ಲರಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಅರಿವು ಮೂಡಿಸುವುದು ಮತ್ತು ಸಶಕ್ತಗೊಳಿಸುವುದು' ಹಾಗೂ 'ವಿಜ್ಞಾನ ಪ್ರಚಾರ, ತಂತ್ರಜ್ಞಾನ ಪ್ರಸಾರ ಮತ್ತು ಸಾಮಾಜಿಕ ಕಲ್ಯಾಣಕ್ಕಾಗಿ ನಾವೀನ್ಯತೆಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುವುದು' ಅಕಾಡೆಮಿಯ ಧ್ಯೇಯವಾಗಿದೆ. ವಿಶೇಷವಾಗಿ ಕನ್ನಡದಲ್ಲಿ ವಿಜ್ಞಾನ ಸಂವಹನದ ಮೂಲಕ ನಾಗರಿಕ ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು; ಗ್ರಾಮೀಣ ಪ್ರದೇಶಗಳನ್ನು ಕೇಂದ್ರವಾಗಿಟ್ಟುಕೊಂಡು ಶಿಕ್ಷಣ ಸಂಸ್ಥೆಗಳು–ಕೃಷಿಕರು–ಉದ್ದಿಮೆಗಳ ಸಂಪರ್ಕ ಏರ್ಪಡಿಸುವ ಮೂಲಕ ತಂತ್ರಜ್ಞಾನ ಪ್ರಸಾರವನ್ನು ಸುಲಭಗೊಳಿಸುವುದು; ಸಾಮಾಜಿಕ ಲಾಭಕ್ಕಾಗಿ ನಾವೀನ್ಯತೆ ಮತ್ತು ಉದ್ಯಮಶೀಲತೆಗಳನ್ನು ಬೆಳೆಸುವುದು; ಪ್ರಶಸ್ತಿಗಳ ಮೂಲಕ ಪ್ರತಿಭೆ ಮತ್ತು ಕೊಡುಗೆಗಳನ್ನು ಗುರುತಿಸುವುದು; ಸಮಾವೇಶಗಳು ಮತ್ತು ಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸುವುದು; ವಿಜ್ಞಾನ ಮತ್ತು ತಂತ್ರಜ್ಞಾನದ ಮುಂಚೂಣಿ ಕ್ಷೇತ್ರಗಳಲ್ಲಿ ಸಾಮರ್ಥ್ಯ ವೃದ್ಧಿಗಾಗಿ ಸಂಪನ್ಮೂಲ ಕೇಂದ್ರವಾಗಿ ಕಾರ್ಯನಿರ್ವಹಿಸುವುದು; ಮತ್ತು ರಾಜ್ಯಕ್ಕೆ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆ ಕಾರ್ಯನೀತಿಯ (ಎಸ್‌ಟಿಐ) ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು ಕೆಎಸ್ಟಿಎಯ ಉದ್ದೇಶಗಳಾಗಿವೆ.

ಮೇಲಿನವುಗಳನ್ನು ಸಾಧಿಸುವ ಸಲುವಾಗಿ, ಕೆಎಸ್ಟಿಎ ಹಲವಾರು ವರ್ಷಗಳಿಂದ ಸಮ್ಮೇಳನಗಳು, ಕಾರ್ಯಾಗಾರಗಳು, ವಿದ್ಯಾರ್ಥಿ ಸ್ಪರ್ಧೆಗಳು, ಸಣ್ಣ ಅನುದಾನಗಳು, ಪುಸ್ತಕಗಳ ಪ್ರಕಟಣೆಯಂತಹ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳನ್ನು ಆಯೋಜಿಸುತ್ತಿದೆಯಲ್ಲದೆ ಪ್ರಶಸ್ತಿಗಳು ಮತ್ತು ಬಹುಮಾನಗಳ ಮೂಲಕ ವಿಜ್ಞಾನಿಗಳು, ತಂತ್ರಜ್ಞರು, ವಿಜ್ಞಾನ ಸಂವಹನಕಾರರು ಮತ್ತು ವಿದ್ಯಾರ್ಥಿ ಸಮುದಾಯದ ಕೊಡುಗೆಗಳನ್ನೂ ಗುರುತಿಸುತ್ತಿದೆ. ಕಾರ್ಯನೀತಿ / ಕಾರ್ಯತಂತ್ರ ಪೇಪರ್ಗಳು, ಫೆಲೋಶಿಪ್ ಮತ್ತು ಸದಸ್ಯತ್ವಗಳು, ನಾವೀನ್ಯತಾ ವೇದಿಕೆ, ವಿಜ್ಞಾನ ಪ್ರವಾಸೋದ್ಯಮ, ಇಂಪ್ಯಾಕ್ಟ್ ಅಸೆಸ್ಮೆಂಟ್ ಅಧ್ಯಯನಗಳು ಮುಂತಾದ ಹೆಚ್ಚಿನ ಕಾರ್ಯಕ್ರಮಗಳನ್ನು ಉದ್ದೇಶಿಸಲಾಗಿದೆ.

ಅಕಾಡೆಮಿಯ ಕಾರ್ಯಕ್ರಮಗಳಿಗೆ ಸಂವಹನ ಮತ್ತು ಪ್ರವೇಶವನ್ನು ಹೆಚ್ಚಿಸುವ ಉದ್ದೇಶದಿಂದ, ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗಿದ್ದು, ಅದು ಜಾಲತಾಣದಲ್ಲೂ ಲಭ್ಯವಿರಲಿದೆ. ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯ ಅಭಿವೃದ್ಧಿ ಇಲಾಖೆಗಳ ಮಾನ್ಯ ಸಚಿವರಾದ ಡಾ. ಸಿ. ಎನ್. ಅಶ್ವಥ್ ನಾರಾಯಣ್ ಹಾಗೂ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ, ಇಲೆಕ್ಟ್ರಾನಿಕ್ಸ್,

ಐಟಿ ಮತ್ತು ಬಿಟಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾದ ಡಾ. ಇ. ವಿ. ರಮಣರೆಡ್ಡಿ ಅವರ ಅಮೂಲ್ಯ ಮಾರ್ಗದರ್ಶನಕ್ಕಾಗಿ ಅವರಿಗೆ ನಮ್ಮ ಕೃತಜ್ಞತೆಯನ್ನು ಸಲ್ಲಿಸಲು ಬಯಸುತ್ತೇವೆ. ಸಂವಹನ ಮತ್ತು ಸಲಹೆಗಳಿಗಾಗಿ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಕೆಎಸ್‌ಟಿಎಯ ಸಿಬ್ಬಂದಿ ವರ್ಗಕ್ಕೂ ಧನ್ಯವಾದಗಳು ಸಲ್ಲುತ್ತವೆ. ಈ ಪ್ರಕಟಣೆಯು ಎಲ್ಲಾ ಪಾಲುದಾರರಿಗೆ, ಅಂದರೆ, ರಾಜ್ಯದಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸುವ ಮತ್ತು ವಿಜ್ಞಾನವನ್ನು ಜೀವನ ವಿಧಾನವನ್ನಾಗಿ ಮಾಡುವ ಅಕಾಡೆಮಿಯ ಪ್ರಯತ್ನಗಳಲ್ಲಿ ಪಾಲುದಾರರಾಗಲು ಬಯಸುವ ಶಿಕ್ಷಣ ತಜ್ಞರು, ಸಂಶೋಧಕರು, ಶಿಕ್ಷಕರು, ಉದ್ಯಮದ ಪ್ರತಿನಿಧಿಗಳು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ಉಪಯುಕ್ತವಾಗಲಿದೆಯೆಂದು ಆಶಿಸಲಾಗಿದೆ.

| | | |
|---|---|---|
| **(ವಿ. ಎಂ. ರಮೇಶ್)** | **(ಪ್ರಕಾಶ್ ಎಂ. ಸೊಬರದ)** | **(ಎಸ್. ಅಯ್ಯಪ್ಪನ್)** |
| ಮುಖ್ಯಕಾರ್ಯ ನಿರ್ವಾಹಕಅಧಿಕಾರಿ | ಸದಸ್ಯಕಾರ್ಯದರ್ಶಿಗಳು | ಅಧ್ಯಕ್ಷರು |

**ಬೆಂಗಳೂರು**

# ಕಾರ್ಯಕ್ರಮಗಳು / ಚಟುವಟಿಕೆಗಳಿಗೆಮಾರ್ಗಸೂಚಿಗಳು


| ಕ್ರ.ಸಂ. | ಕಾರ್ಯಕ್ರಮಗಳು / ಚಟುವಟಿಕೆಗಳು | ಪುಟ |
|---|---|---|
| I | ಸಮ್ಮೇಳನಗಳು | 1 |
| II | ಕೆಎಸ್‌ಟಿಎ ಪ್ರಶಸ್ತಿಗಳು | 7 |
| III | ವಿಜ್ಞಾನಲೋಕ ಮತ್ತು ಇ–ಸುದ್ದಿಪತ್ರ | 23 |
| IV | ಪುಸ್ತಕಗಳ ಪ್ರಕಟಣೆ | 25 |
| V | ಕಾರ್ಯನೀತಿ / ಕಾರ್ಯತಂತ್ರ / ಅಪ್ರೋಚ್ / ಸ್ಟೇಟಸ್ ಪೇಪರ್‌ಗಳಿಗಾಗಿ ಬ್ರೈನ್‌ಸ್ಟಾರ್ಮಿಂಗ್ ಸಮಾವೇಶಗಳು | 27 |
| VI | ಫೆಲೋಶಿಪ್‌ಗಳು, ಸದಸ್ಯತ್ವಗಳು, ಎಮೆರಿಟಸ್ ಕನ್ಸಲ್ಟೆಂಟ್‌ಗಳು ಮತ್ತು ಸಾಂಸ್ಥಿಕ ಸಹಯೋಗ | 29 |
| VII | ಸಣ್ಣ ಅನುದಾನ ಯೋಜನೆ / ಅಲ್ಪಾವಧಿಯ ಅಧ್ಯಯನಗಳು | 41 |
| VIII | ಸ್ನಾತಕೋತ್ತರ ವಿಶೇಷ ಉಪನ್ಯಾಸ ಕಾರ್ಯಾಗಾರಗಳು | 46 |
| IX | ಪ್ರಬಂಧ ಸ್ಪರ್ಧೆಗಳು | 49 |
| X | ವಿಜ್ಞಾನ ಸಂವಹನ ಸ್ಪರ್ಧೆಗಳು | 51 |
| XI | ಮಾಧ್ಯಮಿಕ ಶಾಲಾ ಶಿಕ್ಷಕರಿಗೆ ಕಾರ್ಯಾಗಾರಗಳು | 55 |
| XII | ವಿಜ್ಞಾನ ವೀಡಿಯೊಗಳು ಮತ್ತು ಕ್ಯಾಪ್ಸೂಲ್‌ಗಳ ತಯಾರಿ | 58 |
| XIII | ನಾವೀನ್ಯತಾ ವೇದಿಕೆ | 61 |
| XIV | ಪಿಎಂಇ ಮತ್ತು ಇಂಪ್ಯಾಕ್ಟ್ ಅಸೆಸ್ಮೆಂಟ್ ಅಧ್ಯಯನಗಳು | 64 |
| XV | ವಿಜ್ಞಾನ ಪ್ರವಾಸೋದ್ಯಮ | 66 |

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು

## I. ಸಮ್ಮೇಳನಗಳಿಗೆ ಮಾರ್ಗಸೂಚಿಗಳು

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗವಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ 2005ರಿಂದ ಕಾರ್ಯನಿರ್ವಹಿಸುತ್ತಿದ್ದು, ವಿಜ್ಞಾನ ಸಂವಹನ, ತಂತ್ರಜ್ಞಾನ ಪ್ರಸಾರ, ಸಾಮಾಜಿಕ ಲಾಭಕ್ಕಾಗಿ ನಾವೀನ್ಯತೆ ಮತ್ತು ಉದ್ಯಮಶೀಲತೆಗಳನ್ನು ಬೆಳೆಸುವುದು, ಪ್ರತಿಭೆಗಳನ್ನು ಗುರುತಿಸುವುದು ಮತ್ತು ಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಾಮರ್ಥ್ಯವೃದ್ಧಿ ಹಾಗೂ ರಾಜ್ಯಕ್ಕೆ ಎಸ್‌ಟಿಐ ಕಾರ್ಯನೀತಿ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮೂಲಕ ನಾಗರಿಕ ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಉದ್ದೇಶ ಹೊಂದಿದೆ.

ವಿಜ್ಞಾನ ಸಂಪರ್ಕ ಕಾರ್ಯಕ್ರಮವಾಗಿ ವಿದ್ಯಾರ್ಥಿಗಳು, ಶಿಕ್ಷಕರು, ಉದ್ಯಮದ ಪ್ರತಿನಿಧಿಗಳು ಮತ್ತು ಸಾರ್ವಜನಿಕರಿಗಾಗಿ ಸಮ್ಮೇಳನಗಳನ್ನು ಆಯೋಜಿಸುವ ನಿರ್ದಿಷ್ಟ ಉದ್ದೇಶದಿಂದ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಗಳಿಗೆ ಸಂಬಂಧಿಸಿದ ವಿಷಯಗಳೊಂದಿಗೆ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ ಮತ್ತು ಬೆಂಬಲಿಸುತ್ತದೆ.

### 1. ವಾರ್ಷಿಕ ಸಮ್ಮೇಳನ

ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಗೆ ಸಂಬಂಧಿಸಿದ ಪ್ರಸ್ತುತ ವಿಷಯ ಹಾಗೂ ಸೆಮಿನಾರ್ಗಳು, ಸಂವಹನ ಸಮಾವೇಶಗಳು ಮತ್ತು ಪ್ರದರ್ಶನಗಳ ಬಹುಶಿಸ್ತೀಯ ಚಟುವಟಿಕೆಗಳೊಂದಿಗೆ ನಡೆಯುವ ರಾಜ್ಯ ಮಟ್ಟದ ವಾರ್ಷಿಕ ಸಮ್ಮೇಳನವು ಕೆಎಸ್ಟಿಎಯ ಪ್ರಮುಖ ಕಾರ್ಯಕ್ರಮವಾಗಿದೆ. ಸಾಮಾಜಿಕ ಅಭಿವೃದ್ಧಿಯ ವಿವಿಧ ಕ್ಷೇತ್ರಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಅನ್ವಯಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಇದು ಒಂದು ವೇದಿಕೆಯನ್ನು ಒದಗಿಸುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನದ ವಿವಿಧ ಬೆಳವಣಿಗೆಗಳು ಹಾಗೂ ರಾಜ್ಯದ ಸುಸ್ಥಿರ ಅಭಿವೃದ್ಧಿಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಅನ್ವಯಗಳನ್ನು ಬಳಸಿಕೊಳ್ಳುವುದರ ಕುರಿತು ಪ್ರಮುಖ ವಿಜ್ಞಾನಿಗಳು ಮತ್ತು ವಿದ್ವಾಂಸರ ಒಳನೋಟವುಳ್ಳ ಉಪನ್ಯಾಸಗಳನ್ನು ಸಮ್ಮೇಳನದ ವಿವಿಧ ಅಧಿವೇಶನಗಳಲ್ಲಿ ಆಯೋಜಿಸಲಾಗುತ್ತದೆ. ಪ್ರಮುಖ ವಿಷಯ, ಉಪ ವಿಷಯಗಳು, ಸ್ಥಳ ಮತ್ತು ಉಪನ್ಯಾಸಕರನ್ನು ಕೆಎಸ್ಟಿಎ ಕಾರ್ಯಕಾರಿ ಸಮಿತಿಯು ಎಲ್ಲ ಪಾಲುದಾರರ ಸಲಹೆಯೊಂದಿಗೆ ನಿರ್ಧರಿಸುತ್ತದೆ. ಅಕಾಡೆಮಿಯ ಈ ಪ್ರಮುಖಕಾರ್ಯಕ್ರಮವನ್ನುಪ್ರತಿವರ್ಷಫೆಬ್ರವರಿಅವಧಿಯಲ್ಲಿನಿಗದಿಪಡಿಸಲಾಗಿದೆ.

### 1.1 ಉದ್ದೇಶಗಳು

1.1.1 ಮಾನವ ಕಲ್ಯಾಣಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಕೊಡುಗೆಯ ಬಗ್ಗೆ ನಾಗರಿಕ ಸಮಾಜದ ವಿವಿಧ ಭಾಗಗಳಲ್ಲಿ ಜಾಗೃತಿ ಮೂಡಿಸುವುದು

1.1.2 ಇಲಾಖಾ ಅಧಿಕಾರಿಗಳು, ಬೋಧಕ ಸಿಬ್ಬಂದಿ ಮತ್ತು ಸಂಶೋಧನಾ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ಬೆಳವಣಿಗೆಗಳ ಕುರಿತು ಆಸಕ್ತಿ ಮೂಡಿಸುವುದು

1.1.3 ನಾವೀನ್ಯತೆ ಮತ್ತು ವೈಜ್ಞಾನಿಕ ಪ್ರಗತಿಯ ತಿಳುವಳಿಕೆಯನ್ನು ಬೆಳೆಸುವುದು

1.1.4 ರಾಜ್ಯದ ಒಟ್ಟಾರೆ ಅಭಿವೃದ್ಧಿಗಾಗಿ ಆರ್ಥಿಕತೆಯ ವಿವಿಧ ಕ್ಷೇತ್ರಗಳಲ್ಲಿ ಸುಧಾರಿತ ತಾಂತ್ರಿಕ ಸಾಧನಗಳ ಬಳಕೆಯನ್ನು ಜನಪ್ರಿಯಗೊಳಿಸುವುದು

1.1.5 ರಾಜ್ಯ ಮತ್ತು ದೇಶದಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನದ ಬೆಳವಣಿಗೆಗಳಿಗೆ ನೀಡಿದ ಕೊಡುಗೆಗಾಗಿ ಪ್ರಖ್ಯಾತ ವಿಜ್ಞಾನಿಗಳನ್ನು ಸನ್ಮಾನಿಸುವುದು ಮತ್ತು ಪ್ರತಿಭೆಗಳನ್ನು ಗುರುತಿಸುವುದು

## 1.2 ಕಾರ್ಯಕ್ರಮಗಳು

1.2.1 ಎರಡ ರಿಂದ ಮೂರು ದಿನಗಳ ಸಮ್ಮೇಳನದಲ್ಲಿ, ಪ್ರತಿನಿಧಿಗಳು ತಮ್ಮ ಜ್ಞಾನದ ದಿಗಂತವನ್ನು ವಿಸ್ತರಿಸಿಕೊಳ್ಳಲು ವಿಜ್ಞಾನ ಮತ್ತು ತಂತ್ರಜ್ಞಾನದ ಮುಂಚೂಣಿ ವಿಷಯಗಳ ಬಗ್ಗೆ ಪ್ರಸಿದ್ಧ ವಿಜ್ಞಾನಿಗಳು ಮತ್ತು ಪ್ರಖ್ಯಾತ ತಂತ್ರಜ್ಞರ ವಿಶೇಷ ಉಪನ್ಯಾಸಗಳನ್ನು ಆಯೋಜಿಸಲಾಗುವುದು. ಸಮ್ಮೇಳನದ ಪ್ರತಿನಿಧಿಗಳಲ್ಲಿ ರಾಜ್ಯದಲ್ಲಿನ ಬೋಧಕ ಸಿಬ್ಬಂದಿ, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ವಿವಿಧ ವಿಶ್ವವಿದ್ಯಾನಿಲಯಗಳ ಸ್ನಾತಕೋತ್ತರ ವಿದ್ಯಾರ್ಥಿಗಳು, ಸರ್ಕಾರಿ ಇಲಾಖೆಗಳ ಅಧಿಕಾರಿಗಳು, ಸಂಶೋಧನಾ ಸಂಸ್ಥೆಗಳ ವಿಜ್ಞಾನಿಗಳು ಮಾತ್ರವಲ್ಲದೆ ವಿಜ್ಞಾನ ಬರಹಗಾರರು ಹಾಗೂ ಕೆಲವು ಆಸಕ್ತ ಸಾರ್ವಜನಿಕರು ಕೂಡ ಸೇರಿರುತ್ತಾರೆ.

1.2.2 ತಮ್ಮ ಆಲೋಚನೆಗಳು ಮತ್ತು ಸಂಶೋಧನಾ ಫಲಿತಾಂಶಗಳನ್ನು ಸಂಶೋಧನಾ ಪೋಸ್ಟರ್ ಪ್ರಸ್ತುತಿಗಳ ರೂಪದಲ್ಲಿ ಪ್ರಸ್ತುತಪಡಿಸಲು ಸಮ್ಮೇಳನವು ಪ್ರತಿನಿಧಿಗಳಿಗೆ ಒಂದು ವೇದಿಕೆಯನ್ನೂ ಒದಗಿಸುತ್ತದೆ. ಭೌತ ಮತ್ತು ಗಣಿತ ವಿಜ್ಞಾನಗಳು; ರಾಸಾಯನಿಕ ವಿಜ್ಞಾನಗಳು; ಜೀವ ವಿಜ್ಞಾನಗಳು; ಅಂತರ್ಶಿಸ್ತೀಯ ವಿಜ್ಞಾನಗಳು ಮತ್ತು ಇಂಜಿನಿಯರಿಂಗ್ ವಿಜ್ಞಾನಗಳಿಗೆ (ಎಲ್ಲ ಶಾಖೆಗಳನ್ನೂ ಒಳಗೊಂಡಂತೆ) ಸಂಬಂಧಿಸಿದ ಯಾವುದೇ ಅಂಶಗಳ ಕುರಿತು ರಾಜ್ಯದ ವಿಜ್ಞಾನಿಗಳು / ಸಂಶೋಧಕರು, ಬೋಧಕ ಸಿಬ್ಬಂದಿ ಹಾಗೂ ಸ್ನಾತಕೋತ್ತರ / ಸಂಶೋಧನಾ ವಿದ್ಯಾರ್ಥಿಗಳು ಪೋಸ್ಟರ್‌ಗಳನ್ನು ಪ್ರಸ್ತುತಪಡಿಸಬಹುದು. ಆಯ್ದ ಸಾರಾಂಶಗಳ ಸಂಗ್ರಹವನ್ನು ಐಎಸ್‌ಬಿಎನ್ ಸಂಖ್ಯೆಯೊಂದಿಗೆ ಸಮ್ಮೇಳನದ ಸಂದರ್ಭದಲ್ಲಿ ಹೊರತರಲಾಗುತ್ತದೆ ಮತ್ತು ಎಲ್ಲ ಪ್ರತಿನಿಧಿಗಳಿಗೂ ವಿತರಿಸಲಾಗುತ್ತದೆ.

1.2.3 ವೈಜ್ಞಾನಿಕ ಸಂಶೋಧನೆಯಲ್ಲಿ ಉತ್ಕೃಷ್ಟತೆಯನ್ನು ಉತ್ತೇಜಿಸಲು, ಕೆಎಸ್‌ಟಿಎ ಕಾರ್ಯಕಾರಿ ಸಮಿತಿಯ ಸದಸ್ಯರು ಮತ್ತು ತಜ್ಞರನ್ನು ಒಳಗೊಂಡ ಸಮಿತಿಯು ಸ್ವಂತಿಕೆ, ವಸ್ತುನಿಷ್ಠತೆ, ಉಪಯುಕ್ತತೆ ಮತ್ತು ಪ್ರಸ್ತುತಿಗೆ ಸಂಬಂಧಿಸಿದಂತೆ ಅತ್ಯುತ್ತಮ ಪೋಸ್ಟರ್ಗಳ ಮೌಲ್ಯಮಾಪನ ಮಾಡುತ್ತದೆ. ಭೌತ ಮತ್ತು ಗಣಿತ ವಿಜ್ಞಾನಗಳು; ರಾಸಾಯನಿಕ ವಿಜ್ಞಾನಗಳು; ಜೀವ ವಿಜ್ಞಾನಗಳು; ಅಂತರ್ಶಿಸ್ತೀಯ ವಿಜ್ಞಾನಗಳು ಮತ್ತು ಎಂಜಿನಿಯರಿಂಗ್ ವಿಜ್ಞಾನಗಳಂತಹ ಪ್ರತಿ ವಿಭಾಗದಲ್ಲೂ ನಗದು ಬಹುಮಾನಗಳು ಹೀಗಿರಲಿವೆ: ಪ್ರಥಮ ಬಹುಮಾನ: ರೂ. 15,000/–; ಎರಡನೇಬಹುಮಾನ: ರೂ. 10,000/–; ಮತ್ತು ಎರಡು ಸಮಾಧಾನಕರ ಬಹುಮಾನಗಳು : ತಲಾ ರೂ. 5,000

## 1.3 ಸಾರಾಂಶಮತ್ತುಪೋಸ್ಟರ್ಗಳಸಲ್ಲಿಕೆ ಮತ್ತು ಮೌಲ್ಯಮಾಪನಕ್ಕಾಗಿ ಮಾರ್ಗಸೂಚಿಗಳು:

1.3.1 ವಿಜ್ಞಾನ ಮತ್ತು ತಂತ್ರಜ್ಞಾನದ ವಿವಿಧ ಶಾಖೆಗಳ ತಜ್ಞರ ಸಮಿತಿಯು ಸಾರಾಂಶಗಳನ್ನು ಪರಿಶೀಲಿಸುತ್ತದೆ ಮತ್ತು ಭೌತ ಮತ್ತು ಗಣಿತ ವಿಜ್ಞಾನಗಳು; ರಾಸಾಯನಿಕ ಮತ್ತು ಜೀವ ವಿಜ್ಞಾನಗಳು; ಅಂತರ್ಶಿಸ್ತೀಯ ವಿಜ್ಞಾನಗಳು ಮತ್ತು ಇಂಜಿನಿಯರಿಂಗ್ ವಿಜ್ಞಾನಗಳಿಗೆ (ಇಂಜಿನಿಯರಿಂಗ್‌ನ ವಿವಿಧ ಶಾಖೆಗಳನ್ನು ಒಳಗೊಂಡಂತೆ) ಸಂಬಂಧಿಸಿದವೆಂದು ವರ್ಗೀಕರಿಸುತ್ತದೆ. ಇದಲ್ಲದೆ, ಪ್ರತಿ ಪೋಸ್ಟರ್ಗೂ ಪ್ರತ್ಯೇಕ ಐಡಿಗಳನ್ನು ನೀಡಬೇಕು

1.3.2 ಪೋಸ್ಟರ್ ಪ್ರಸ್ತುತಿ ಸ್ಪರ್ಧೆಯನ್ನು ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಮತ್ತು ಡಾಕ್ಟರೇಟ್ ಅಭ್ಯರ್ಥಿಗಳಿಗೆ / ಸಂಶೋಧನಾ ವಿದ್ಯಾರ್ಥಿಗಳಿಗೆ ಸೀಮಿತಗೊಳಿಸಬೇಕು. ಇದಲ್ಲದೆ, ಮೊದಲ ಲೇಖಕರು ವಿದ್ಯಾರ್ಥಿ (ಸ್ನಾತಕ, ಸ್ನಾತಕೋತ್ತರ ಅಥವಾ ಪಿಎಚ್ಡಿ) ಅಥವಾ ಯುವ ಸಂಶೋಧಕರೇ ಆಗಿರಬೇಕು ಎಂದು ಸೂಚಿಸಲಾಗಿದೆ.

1.3.3 ಸಮ್ಮೇಳನದಲ್ಲಿ ತಮ್ಮ ಸಂಶೋಧನಾ ಪೋಸ್ಟರ್ಗಳನ್ನು ಪ್ರದರ್ಶಿಸಲು ಆಯ್ದ ಸಾರಾಂಶಗಳ ಲೇಖಕರನ್ನು ಆಹ್ವಾನಿಸಬಹುದು

1.3.4 ಸಲ್ಲಿಸಿದ ಸಾರಾಂಶ / ಪೋಸ್ಟರ್ ಅನ್ನು ಬೇರೆಡೆ ಪ್ರಕಟಿಸಲಾಗಿಲ್ಲ ಎಂದು ಹೇಳುವ ಸ್ವಯಂ ಪ್ರಮಾಣೀಕರಣ / ಘೋಷಣೆಯನ್ನು ಲೇಖಕರಿಂದ ಪಡೆಯಬೇಕು. ಇದಲ್ಲದೆ, ಯಾವ ವಿಭಾಗದ ಅಡಿಯಲ್ಲಿ (ಭೌತ ಮತ್ತು ಗಣಿತ ವಿಜ್ಞಾನಗಳು; ರಾಸಾಯನಿಕ ಮತ್ತು ಜೀವ ವಿಜ್ಞಾನಗಳು; ಅಂತರ್ಶಿಸ್ತೀಯ ವಿಜ್ಞಾನಗಳು ಮತ್ತು ಅದರ ಶಾಖೆಗಳನ್ನು ಒಳಗೊಂಡಂತೆ ಇಂಜಿನಿಯರಿಂಗ್ ವಿಜ್ಞಾನಗಳು) ಅವರು ಸಾರಾಂಶ / ಪೋಸ್ಟರ್‌ಅನ್ನು ಸಲ್ಲಿಸಲು ಬಯಸುತ್ತಾರೆ ಎಂಬುದನ್ನು ನಿರ್ದಿಷ್ಟಪಡಿಸಲು ಲೇಖಕರಿಗೆ ಸೂಚನೆ ನೀಡಬೇಕು.

1.3.5 ಪೋಸ್ಟರ್ ನಿರೂಪಕರು ಪೋಸ್ಟರ್ ಪ್ರದರ್ಶನವನ್ನು ಉದ್ಘಾಟಿಸುವ ಮೊದಲು ಪೋಸ್ಟರ್ಗಳನ್ನು ಹಾಕಬೇಕು ಮತ್ತು ಸಮಾರೋಪ ಕಾರ್ಯಕ್ರಮದ ನಂತರ ಅವನ್ನು ತೆಗೆಯಬೇಕು

1.3.6 ಏಕಕಾಲದಲ್ಲಿ ಎಲ್ಲ ಪೋಸ್ಟರ್ ನಿರೂಪಕರನ್ನೂ ಒಟ್ಟುಗೂಡಿಸುವುದನ್ನು ತಪ್ಪಿಸಲು ಪ್ರತಿ ವಿಭಾಗದ ಪೋಸ್ಟರ್ಗಳ ಮೌಲ್ಯಮಾಪನಕ್ಕಾಗಿ ಪ್ರತ್ಯೇಕ ಕಾಲಾವಧಿಯನ್ನು ನಿಗದಿಪಡಿಸಬೇಕು

1.3.7 ಕೆಎಸ್ಟಿಎ ಸದಸ್ಯರೂ ಸೇರಿದಂತೆ, ಪ್ರತಿ ವಿಭಾಗದಲ್ಲೂ 2 ತಜ್ಞರನ್ನು ಒಳಗೊಂಡ ಪ್ರತ್ಯೇಕ ವಿಷಯ ಪರಿಣತ ತಜ್ಞರ ಸಮಿತಿಗಳನ್ನು ರಚಿಸಬೇಕು. ಪ್ರಸ್ತುತಪಡಿಸಲಾದ ಉತ್ತಮ ಪೋಸ್ಟರ್‌ಗಳ ಸಂಖ್ಯೆಯನ್ನು ಅವಲಂಬಿಸಿ, ಪ್ರತಿ ತಜ್ಞ ಸಮಿತಿಯು ಆಯಾ ವಿಷಯಗಳಿಂದ 3–5 ಅತ್ಯುತ್ತಮ ಪೋಸ್ಟರ್‌ಗಳನ್ನು ಮೌಖಿಕ ಪ್ರಸ್ತುತಿಗಾಗಿ ಆಯ್ಕೆ ಮಾಡಬೇಕು. ಉದ್ಘಾಟನಾ ಕಾರ್ಯಕ್ರಮದ ನಂತರ ಮೌಲ್ಯಮಾಪನ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕು

1.3.8 ಶಾರ್ಟ್‌ಲಿಸ್ಟ್ ಮಾಡಲಾದ ಪೋಸ್ಟರ್‌ಗಳ ಲೇಖಕರಿಗೆ ಆಯ್ಕೆಯ ಬಗ್ಗೆ ಮೊದಲ ದಿನದ ಸಂಜೆಯ ಹೊತ್ತಿಗೆ ಮಾಹಿತಿ ನೀಡಬೇಕು. ಪೋಸ್ಟರ್ನ ಮೊದಲ ಲೇಖಕರು (ಯುವ ಸಂಶೋಧಕರು ಮಾತ್ರ) 5 ನಿಮಿಷಗಳ ಅವಧಿಗೆ ಮೌಖಿಕ ಪ್ರಸ್ತುತಿಯನ್ನು ನೀಡುತ್ತಾರೆ.

1.3.9 ಸಾರಾಂಶ ಮತ್ತು ಪೋಸ್ಟರ್ಗಳ ಮೌಲ್ಯಮಾಪನಕ್ಕಾಗಿ ವಿಷಯ ತಜ್ಞರಿಗೆ ಗೌರವ ಧನ ನೀಡಲಾಗುವುದು

1.3.10 ಸ್ಥಳೀಯ ಆವಿಷ್ಕಾರಗಳು ಮತ್ತು ಐಟಿಕೆಗಳನ್ನು (ಸ್ಥಳೀಯ ತಾಂತ್ರಿಕ ಜ್ಞಾನ) ಸಮ್ಮೇಳನದಲ್ಲಿ ಪ್ರದರ್ಶಿಸಲಾಗುವುದು

## 1.4 ಕೆಎಸ್‌ಟಿಎ ಪ್ರಶಸ್ತಿಗಳು ಹಾಗೂ ಫೆಲೋಶಿಪ್‌ಗಳು ಮತ್ತು ಸದಸ್ಯತ್ವ

ನಿಗದಿತ ಪ್ರಕ್ರಿಯೆಗಳ ಮೂಲಕ ಗುರುತಿಸಲಾದ ಹಾಗೂ ಕೆಎಸ್ಟಿಎ ಕಾರ್ಯಕಾರಿ ಸಮಿತಿಯಿಂದ ಅನುಮೋದಿತವಾದ, ಕೊಡುಗೆಗಳಿಗಾಗಿ ಪ್ರಸಿದ್ಧ ಶಿಕ್ಷಣ ತಜ್ಞರು, ವಿಜ್ಞಾನಿಗಳು ಮತ್ತು ತಂತ್ರಜ್ಞರಿಗೆ ವಾರ್ಷಿಕ ಸಮ್ಮೇಳನದಲ್ಲಿ ಈ ಕೆಳಗಿನ ಪ್ರಶಸ್ತಿಗಳು ಮತ್ತು ಫೆಲೋಶಿಪ್‌ಗಳನ್ನು ನೀಡಲಾಗುವುದು:

1.4.1 ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕೃಷಿ ಮತ್ತು ವೈದ್ಯವಿಜ್ಞಾನದಲ್ಲಿ ಜೀವಮಾನದ ಸಾಧನೆಗಾಗಿ ಪ್ರೊ. ಸಿ. ಎನ್. ಆರ್. ರಾವ್ – ಕೆಎಸ್‌ಟಿಎ ಪ್ರಶಸ್ತಿ

1.4.2 ಕನ್ನಡದಲ್ಲಿ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕೃಷಿ ಮತ್ತು ವೈದ್ಯವಿಜ್ಞಾನ ಸಂವಹನಕ್ಕಾಗಿ ಜೀವಮಾನ ಸಾಧನೆ ಪ್ರಶಸ್ತಿ

1.4.3 ವಿಜ್ಞಾನ, ತಂತ್ರಜ್ಞಾನ, ಕೃಷಿ ಮತ್ತು ವೈದ್ಯಕೀಯ ಪುಸ್ತಕಗಳಿಗೆ ಪ್ರಶಸ್ತಿಗಳು

1.4.4 ಕಿರಿಯ ಸಾಧಕರಿಗಾಗಿ (ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು) ಮತ್ತು ಜನಸಾಮಾನ್ಯರಿಂದ ನಾವೀನ್ಯತೆಗಾಗಿ ಪ್ರಶಸ್ತಿಗಳು

1.4.5 ವಾರ್ಷಿಕ ಸ್ಪರ್ಧೆಗಳಲ್ಲಿ ಬಹುಮಾನಗಳು

## 1.5 ಸಮ್ಮೇಳನದ ನಿರೀಕ್ಷಿತ ಫಲಿತಾಂಶ

**ಕೆಎಸ್ಟಿಎ ಸಮ್ಮೇಳನದ ನಿರೀಕ್ಷಿತ ಫಲಿತಾಂಶಗಳು ಹೀಗಿವೆ:**

1.5.1 ಬೋಧಕ ಸಿಬ್ಬಂದಿ, ಸಂಶೋಧನಾ ವಿದ್ಯಾರ್ಥಿಗಳು, ಸ್ನಾತಕೋತ್ತರ ವಿಜ್ಞಾನ ವಿದ್ಯಾರ್ಥಿಗಳು ಮತ್ತು ಆಸಕ್ತ ಸಾರ್ವಜನಿಕರಿಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಮುಂಚೂಣಿ ವಿಷಯಗಳ ಬಗ್ಗೆ ಮಾಹಿತಿ ದೊರಕುತ್ತದೆ

1.5.2 ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಮುಂದುವರಿದ ಸಂಶೋಧನೆ ನಡೆಸಲು ವಿದ್ಯಾರ್ಥಿಗಳಲ್ಲಿ ಆಸಕ್ತಿ ಸೃಷ್ಟಿಯಾಗುತ್ತದೆ

1.5.3 ಆಧುನಿಕ ಜಗತ್ತನ್ನು ಅಭಿವೃದ್ಧಿಪಡಿಸಲು ವಿಜ್ಞಾನ ಮತ್ತು ತಂತ್ರಜ್ಞಾನವು ಹೇಗೆ ಸಹಾಯ ಮಾಡುತ್ತದೆ ಎಂಬುದರ ಬಗ್ಗೆ ಪ್ರತಿನಿಧಿಗಳಿಗೆ ಒಂದು ಇಣುಕುನೋಟ ದೊರಕುತ್ತದೆ

1.5.4 ಉದಯೋನ್ಮುಖ ಮತ್ತು ಮುಂಚೂಣಿ ತಂತ್ರಜ್ಞಾನಗಳ ಬಗ್ಗೆ ಅರಿವು ಮತ್ತು ಸಂಶೋಧನೆಯಲ್ಲಿ ಹೊಸ ಪ್ರವೃತ್ತಿಗಳ ಬಗ್ಗೆ ಅರಿವು ಮೂಡುತ್ತದೆ

1.5.5 ವೈಜ್ಞಾನಿಕವಾಗಿ ಜಾಗೃತರಾದ ಮತ್ತು ತಿಳುವಳಿಕೆ ಹೊಂದಿರುವ ಸಾರ್ವಜನಿಕರು ನಾಗರಿಕ ಸಮಾಜದ ಎಲ್ಲ ಸ್ತರಗಳಲ್ಲೂ ಬೆಳೆಯುತ್ತಾರೆ

1.5.6 ನಮ್ಮ ದೈನಂದಿನ ಜೀವನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಮೂಲಕ ಜ್ಞಾನ ಸಮಾಜವನ್ನು ಸಶಕ್ತಗೊಳಿಸಲಾಗುತ್ತದೆ

## 2. ವಿಜ್ಞಾನ ಸಮಾವೇಶ (ಕನ್ನಡದಲ್ಲಿ ವಿಜ್ಞಾನ ಸಮ್ಮೇಳನ)

ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಕನ್ನಡ ಮಾತನಾಡುವ ಸಾರ್ವಜನಿಕರಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಯ ಬಗ್ಗೆ ಅರಿವು ಮೂಡಿಸುವ ನಿರ್ದಿಷ್ಟ ಉದ್ದೇಶದೊಂದಿಗೆ, ಕೆಎಸ್ಟಿಎ ಕನ್ನಡದ ಮಾಧ್ಯಮದಲ್ಲಿ ವಾರ್ಷಿಕ ವಿಜ್ಞಾನ ಸಮ್ಮೇಳನವನ್ನು ಆಯೋಜಿಸುತ್ತದೆ (ವಿಜ್ಞಾನ ಸಮಾವೇಶ). ಪ್ರಮುಖ ವಿಷಯ, ಉಪ ವಿಷಯಗಳು, ಸ್ಥಳ ಮತ್ತು ಉಪನ್ಯಾಸಕರನ್ನು ಕೆಎಸ್ಟಿಎ ಕಾರ್ಯಕಾರಿ ಸಮಿತಿಯು ಎಲ್ಲ ಪಾಲುದಾರರ ಸಲಹೆಯೊಂದಿಗೆ ನಿರ್ಧರಿಸುತ್ತದೆ.

## 2.1 ಉದ್ದೇಶಗಳು

2.1.1 ಮಾನವ ಕಲ್ಯಾಣಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಕೊಡುಗೆಯ ಬಗ್ಗೆ ನಾಗರಿಕ ಸಮಾಜದ ವಿವಿಧ ಭಾಗಗಳಲ್ಲಿ ಜಾಗೃತಿ ಮೂಡಿಸುವುದು

2.1.2 ಇಲಾಖಾ ಅಧಿಕಾರಿಗಳು, ಬೋಧಕ ಸಿಬ್ಬಂದಿ ಮತ್ತು ಸಂಶೋಧನಾ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ಬೆಳವಣಿಗೆಗಳ ಕುರಿತು ಆಸಕ್ತಿ ಮೂಡಿಸುವುದು

2.1.3 ನಾವೀನ್ಯತೆ ಮತ್ತು ವೈಜ್ಞಾನಿಕ ಪ್ರಗತಿಯ ತಿಳುವಳಿಕೆಯನ್ನು ಬೆಳೆಸುವುದು

2.1.4 ರಾಜ್ಯದ ಒಟ್ಟಾರೆ ಅಭಿವೃದ್ಧಿಗಾಗಿ ಆರ್ಥಿಕತೆಯ ವಿವಿಧ ಕ್ಷೇತ್ರಗಳಲ್ಲಿ ಸುಧಾರಿತ ತಾಂತ್ರಿಕ ಸಾಧನಗಳ ಬಳಕೆಯನ್ನು ಜನಪ್ರಿಯಗೊಳಿಸುವುದು

2.1.5 ರಾಜ್ಯ ಮತ್ತು ದೇಶದಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನದ ಬೆಳವಣಿಗೆಗಳಿಗೆ ನೀಡಿದ ಕೊಡುಗೆಗಾಗಿ ಪ್ರಖ್ಯಾತ ವಿಜ್ಞಾನಿಗಳನ್ನು ಸನ್ಮಾನಿಸುವುದು ಮತ್ತು ಪ್ರತಿಭೆಗಳನ್ನು ಗುರುತಿಸುವುದು

**2.2 ಕಾರ್ಯಕ್ರಮಗಳು**

2.2.1 ಎರಡುದಿನಗಳಸಮ್ಮೇಳನದಲ್ಲಿ, ಪ್ರತಿನಿಧಿಗಳು ತಮ್ಮ ಜ್ಞಾನದ ದಿಗಂತವನ್ನು ವಿಸ್ತರಿಸಿಕೊಳ್ಳಲು ವಿಜ್ಞಾನ ಮತ್ತು ತಂತ್ರಜ್ಞಾನದ ಮುಂಚೂಣಿ ವಿಷಯಗಳ ಬಗ್ಗೆ ಪ್ರಸಿದ್ಧ ವಿಜ್ಞಾನಿಗಳು ಮತ್ತು ಪ್ರಖ್ಯಾತ ತಂತ್ರಜ್ಞರ ವಿಶೇಷ ಉಪನ್ಯಾಸಗಳನ್ನು ಆಯೋಜಿಸಲಾಗುವುದು.

2.2.2 ರಾಜ್ಯದೊಳಗಿನ ವಿಜ್ಞಾನಿಗಳು ಮತ್ತು ವಿಜ್ಞಾನ ಸಂವಹನಕಾರರೊಂದಿಗೆ, ಕನ್ನಡದಲ್ಲಿ ಸಂವಹನಕ್ಕೆ ಒತ್ತು ನೀಡಲಾಗುತ್ತದೆ. ಸಮ್ಮೇಳನದ ಪ್ರತಿನಿಧಿಗಳಲ್ಲಿ ರಾಜ್ಯದಲ್ಲಿನ ಬೋಧಕ ಸಿಬ್ಬಂದಿ, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ವಿವಿಧ ವಿಶ್ವವಿದ್ಯಾನಿಲಯಗಳ ಸ್ನಾತಕೋತ್ತರ ವಿದ್ಯಾರ್ಥಿಗಳು, ಸರ್ಕಾರಿ ಇಲಾಖೆಗಳ ಅಧಿಕಾರಿಗಳು, ಸಂಶೋಧನಾ ಸಂಸ್ಥೆಗಳ ವಿಜ್ಞಾನಿಗಳು ಮಾತ್ರವಲ್ಲದೆ ವಿಜ್ಞಾನ ಬರಹಗಾರರು ಹಾಗೂ ಆಸಕ್ತ ಸಾರ್ವಜನಿಕರು ಕೂಡ ಸೇರಿರುತ್ತಾರೆ.

2.2.3 ವಿಜ್ಞಾನ ಬರಹಗಾರರು ಮತ್ತು ವರದಿಗಾರರು ಸೇರಿದಂತೆ ಅನೌಪಚಾರಿಕ ವಿಜ್ಞಾನ ಮತ್ತು ತಂತ್ರಜ್ಞಾನ ಪಾಲುದಾರರ ಸನ್ಮಾನದೊಂದಿಗೆ, ಗ್ರಾಮೀಣ ಪ್ರದೇಶದ ನವ ನಿರ್ಮಿತಿಕಾರರ ವಿಶೇಷ ಸಭೆ ಹಾಗೂ ಸಾಂಪ್ರದಾಯಿಕ ಜ್ಞಾನದ ಪ್ರದರ್ಶನವು ಈ ಕಾರ್ಯಕ್ರಮದ ಮುಖ್ಯಾಂಶಗಳಾಗಿವೆ.

2.2.4 ಕನ್ನಡದಲ್ಲಿ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕೃಷಿ ಮತ್ತು ವೈದ್ಯವಿಜ್ಞಾನ ಸಂವಹನಕ್ಕಾಗಿ ಜೀವಮಾನ ಸಾಧನೆ ಪ್ರಶಸ್ತಿಯನ್ನು ಸಮ್ಮೇಳನದಲ್ಲಿ ನೀಡಲಾಗುವುದು

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು

## II. ಕೆಎಸ್‌ಟಿಎ ಪ್ರಶಸ್ತಿಗಳಿಗಾಗಿ ಮಾರ್ಗಸೂಚಿಗಳು

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗವಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ 2005ರಿಂದ ಕಾರ್ಯನಿರ್ವಹಿಸುತ್ತಿದ್ದು, ವಿಜ್ಞಾನ ಸಂವಹನ, ತಂತ್ರಜ್ಞಾನ ಪ್ರಸಾರ, ಸಾಮಾಜಿಕ ಲಾಭಕ್ಕಾಗಿ ನಾವೀನ್ಯತೆ ಮತ್ತು ಉದ್ಯಮಶೀಲತೆಗಳನ್ನು ಬೆಳೆಸುವುದು, ಪ್ರತಿಭೆಗಳನ್ನು ಗುರುತಿಸುವುದು ಮತ್ತು ಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಾಮರ್ಥ್ಯ ವೃದ್ಧಿ ಹಾಗೂ ರಾಜ್ಯಕ್ಕೆ ಎಸ್ಟಿಐ ಕಾರ್ಯನೀತಿ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮೂಲಕ ನಾಗರಿಕ ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಉದ್ದೇಶ ಹೊಂದಿದೆ.

ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕೃಷಿ ಮತ್ತು ವೈದ್ಯವಿಜ್ಞಾನ (ಸ್ಟೀಮ್) ಕ್ಷೇತ್ರಗಳಲ್ಲಿ ಅತ್ಯುತ್ತಮ ಕೊಡುಗೆಗಳನ್ನು ಗುರುತಿಸಲು ಮತ್ತು ಸಮಾಜದ ಪ್ರಯೋಜನಕ್ಕಾಗಿ ಸ್ಟೀಮ್ ಸಂವಹನದಲ್ಲಿ ಶ್ರೇಷ್ಠತೆಯನ್ನು ಸಂಪರ್ಕ ಕಾರ್ಯಕ್ರಮದಂತೆ ಬಳಸಲು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಈ ಕೆಳಗಿನ ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ಸ್ಥಾಪಿಸಿದೆ:

1.0 ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕೃಷಿ ಮತ್ತು ವೈದ್ಯವಿಜ್ಞಾನದಲ್ಲಿ ಜೀವಮಾನದ ಸಾಧನೆಗಾಗಿ ಪ್ರೊ. ಸಿ. ಎನ್. ಆರ್. ರಾವ್ – ಕೆಎಸ್‌ಟಿಎ ಪ್ರಶಸ್ತಿ

2.0 ಕನ್ನಡದಲ್ಲಿ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕೃಷಿ ಮತ್ತು ವೈದ್ಯವಿಜ್ಞಾನ ಸಂವಹನಕ್ಕಾಗಿ ಜೀವಮಾನ ಸಾಧನೆ ಪ್ರಶಸ್ತಿ

3.0 ವಿಜ್ಞಾನ, ತಂತ್ರಜ್ಞಾನ, ಕೃಷಿ ಮತ್ತು ವೈದ್ಯಕೀಯ ಪುಸ್ತಕಗಳಿಗೆ ಪ್ರಶಸ್ತಿಗಳು

4.0 ಕಿರಿಯ ಸಾಧಕರಿಗಾಗಿ (ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು) ಮತ್ತು

5.0 ಜನಸಾಮಾನ್ಯರಿಂದ ನಾವೀನ್ಯತೆಗಾಗಿ ಪ್ರಶಸ್ತಿಗಳು

### 1. ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕೃಷಿ ಮತ್ತು ವೈದ್ಯವಿಜ್ಞಾನದಲ್ಲಿ ಜೀವಮಾನದ ಸಾಧನೆಗಾಗಿ ಪ್ರೊ. ಸಿ. ಎನ್. ಆರ್. ರಾವ್ – ಕೆಎಸ್‌ಟಿಎ ಪ್ರಶಸ್ತಿ

ಸ್ಟೀಮ್ ಕ್ಷೇತ್ರಕ್ಕೆ ಅವರ ಅತ್ಯುತ್ತಮ ಕೊಡುಗೆಗಳನ್ನು ಗುರುತಿಸಿ ಕರ್ನಾಟಕ ಮೂಲದ ಒಬ್ಬ ನಿಪುಣ ಹಿರಿಯ ವಿಜ್ಞಾನಿ/ತಂತ್ರಜ್ಞರನ್ನು ಕೆಎಸ್‌ಟಿಎ ವಾರ್ಷಿಕ ಸಮ್ಮೇಳನದಲ್ಲಿ ಗೌರವಿಸಲಾಗುವುದು. ಆಯ್ಕೆಯಾದ ವಿಜ್ಞಾನಿ / ತಂತ್ರಜ್ಞರನ್ನು ಕೆಎಸ್‌ಟಿಎ ವಾರ್ಷಿಕ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಅಥವಾ ಇನ್ನಿತರ ಪ್ರಮುಖ ಕಾರ್ಯಕ್ರಮದಲ್ಲಿ ಚಿನ್ನದ ಪದಕ, ರೂ. 2.00 ಲಕ್ಷ ನಗದು ಮತ್ತು ಪ್ರಶಸ್ತಿಪತ್ರ ಹಾಗೂ ಸನ್ಮಾನದೊಂದಿಗೆ ಗೌರವಿಸಲಾಗುವುದು.

ಪ್ರಶಸ್ತಿ ಪುರಸ್ಕೃತರನ್ನು ವಾರ್ಷಿಕ ಸಮ್ಮೇಳನಕ್ಕೆ ಆಹ್ವಾನಿಸಲಾಗುತ್ತದೆ ಮತ್ತು ಅಗತ್ಯವಿರುವಂತೆ ಇಕಾನಮಿ ವರ್ಗದ ದೇಶೀಯ ವಿಮಾನ ಪ್ರಯಾಣ ದರ ಅಥವಾ ಪ್ರಥಮ ದರ್ಜೆ ರೈಲು ಪ್ರಯಾಣ ದರವನ್ನು ಮತ್ತು ಸಮ್ಮೇಳನದ ಸಂದರ್ಭದಲ್ಲಿ ವಸತಿ ಸೌಲಭ್ಯವನ್ನು ಒದಗಿಸಲಾಗುತ್ತದೆ. ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಅವರ ಭಾಷಣವನ್ನೂ ಆಯೋಜಿಸಲಾಗುತ್ತದೆ.

## 1.1 ಅರ್ಹತೆ

1.1.1 ನಾಮನಿರ್ದೇಶಿತರು ಹಿರಿಯ ವಿಜ್ಞಾನಿ / ತಂತ್ರಜ್ಞರಾಗಿರಬೇಕು, ಅವರು 60 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರಾಗಿರಬೇಕು ಮತ್ತು ಸ್ಟೀಮ್ ಕ್ಷೇತ್ರದಲ್ಲಿ ಅವರ ವೃತ್ತಿ ಮತ್ತು ಸೇವೆಯಾದ್ಯಂತ ಕನಿಷ್ಠ 20 ವರ್ಷಗಳ ಅವಧಿಯವರೆಗೆ ಗಮನಾರ್ಹವಾದ ಮೂಲ ಕೊಡುಗೆಗಳನ್ನು ನೀಡಿರಬೇಕು.

1.1.2 ನಾಮನಿರ್ದೇಶಿತರು ಜನ್ಮ ಅಥವಾ ನಿವಾಸ ಅಥವಾ ಸೇವೆಯಿಂದಾಗಿ ಕರ್ನಾಟಕ ಮೂಲದವರಾಗಿರಬೇಕು. ಈ ಪ್ರಶಸ್ತಿಗೆ ನಾಮನಿರ್ದೇಶನಗೊಳ್ಳುವ ಸಮಯದಲ್ಲಿ ಅವರು ಭಾರತ ಅಥವಾ ವಿದೇಶದಲ್ಲಿ ಬೇರೆಲ್ಲಿಯಾದರೂ ವಾಸಿಸುತ್ತಿರಬಹುದು.

## 1.2 ನಾಮನಿರ್ದೇಶನ / ಪ್ರಶಸ್ತಿಗೆ ಮಾನದಂಡ

1.2.1 ನಾಮನಿರ್ದೇಶಿತರು ಪೀರ್–ರಿವ್ಯೂಡ್ ಜರ್ನಲ್‌ಗಳಲ್ಲಿನ ವಿದ್ವತ್ಪೂರ್ಣ ಸಂಶೋಧನಾ ಪ್ರಕಟಣೆಗಳು, ವಿಮರ್ಶಾ ಲೇಖನಗಳು, ಹೆಸರಾಂತ ಸಂಸ್ಥೆಗಳಿಂದ ಮುದ್ರಿತವಾಗಿ ಪ್ರಕಟವಾದ ಪುಸ್ತಕಗಳ ರಚನೆ ಮತ್ತು / ಅಥವಾ ಸಂಪಾದನೆಯಿಂದ ಪ್ರಮಾಣೀಕೃತವಾದಂತೆ ಸ್ಟೀಮ್ (ಮೂಲ ಮತ್ತು / ಅಥವಾ ಅನ್ವಯಿಕ ಕ್ಷೇತ್ರಗಳು) ಅಡಿಯಲ್ಲಿ ಅವರ ವಿಶೇಷ ಕ್ಷೇತ್ರಕ್ಕೆ ಗಮನಾರ್ಹ ಮತ್ತು ಸ್ಥಿರವಾದ ಕೊಡುಗೆಗಳನ್ನು ನೀಡಿರಬೇಕು ಮತ್ತು/ಅಥವಾ ಮಾನ್ಯತೆ ಪಡೆದ ಪ್ರಾಧಿಕಾರಗಳಿಂದ ಪೇಟೆಂಟ್ ಪರವಾನಗಿಯನ್ನು ಪಡೆದಿರಬೇಕು.

1.2.2 ಹೆಚ್ಚುವರಿಯಾಗಿ, ಕಿರಿಯ ವಿದ್ವಾಂಸರಿಗೆ ತರಬೇತಿ ಮತ್ತು ಮಾರ್ಗದರ್ಶನ ನೀಡುವುದು ಹಾಗೂ ಸಮಾಜದ ಒಳಿತಿಗಾಗಿ ಅಗತ್ಯ–ಆಧಾರಿತ ಮತ್ತು ನವೀನ ಪರಿಹಾರಗಳನ್ನು ಪ್ರಚುರಪಡಿಸುವುದು ಸೇರಿದಂತೆ ಸ್ಟೀಮ್ನ ಅಭಿವೃದ್ಧಿ ಮತ್ತು / ಅಥವಾ ಅದರ ಅಡಿಯಲ್ಲಿನ ಸಮಸ್ಯೆಗಳ ತಿಳಿವಳಿಕೆಗಾಗಿ ನಾಮನಿರ್ದೇಶಿತರು ಮಹತ್ವದ ಕೊಡುಗೆಗಳನ್ನು ನೀಡಿರಬೇಕು.

1.2.3 ಪ್ರಶಸ್ತಿಯನ್ನು ಒಬ್ಬ ವ್ಯಕ್ತಿಗೆ ಒಮ್ಮೆ ಮಾತ್ರ ನೀಡಲಾಗುತ್ತದೆ ಮತ್ತು ಮರಣೋತ್ತರ ಪ್ರಶಸ್ತಿಗಳನ್ನು ಪರಿಗಣಿಸಲಾಗುವುದಿಲ್ಲ

1.2.4 ಕರ್ನಾಟಕ ಸರ್ಕಾರ ಅಥವಾ ಕೆಎಸ್‌ಟಿಎಯಂತಹುದೇ ಉದ್ದೇಶಗಳನ್ನು ಹೊಂದಿರುವ ಮತ್ತೊಂದು ಸಂಸ್ಥೆ ಈಗಾಗಲೇ ಸ್ಥಾಪಿಸಿರುವ ಮತ್ತು ಕರ್ನಾಟಕ ಸರ್ಕಾರದಿಂದ ಧನಸಹಾಯ ಪಡೆದಿರುವ ಇಂತಹುದೇ ಜೀವಮಾನದ ಪ್ರಶಸ್ತಿಯನ್ನು ಈಗಾಗಲೇ ಪಡೆದವರಿಗೆ ಈ ಪ್ರಶಸ್ತಿಯನ್ನು ಸಾಮಾನ್ಯವಾಗಿ ನೀಡಲಾಗುವುದಿಲ್ಲ.

1.2.5 ಪ್ರಶಸ್ತಿಗಳ ಘೋಷಣೆಯನ್ನು ಪ್ರತಿವರ್ಷ ಜೂನ್ ತಿಂಗಳಿನಲ್ಲಿ ಕೆಎಸ್ಟಿಎ ಜಾಲತಾಣದಲ್ಲಿ ಮತ್ತು ಪ್ರಮುಖ ಪತ್ರಿಕೆಗಳಲ್ಲಿ ಸುದ್ದಿಯಾಗಿ ಪ್ರಕಟಿಸಲಾಗುತ್ತದೆ. ನಾಮನಿರ್ದೇಶನಗಳು / ಅರ್ಜಿಗಳನ್ನು ಪ್ರಕಟಣೆಯ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಸಲ್ಲಿಸಬೇಕು.

## 2. ಕನ್ನಡದಲ್ಲಿ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕೃಷಿ ಮತ್ತು ವೈದ್ಯ ವಿಜ್ಞಾನ ಸಂವಹನಕ್ಕಾಗಿ ಜೀವಮಾನ ಸಾಧನೆ ಪ್ರಶಸ್ತಿ

ಕನ್ನಡದಲ್ಲಿ ಸ್ಟೀಮ್ ಅನ್ನು ಜನಪ್ರಿಯಗೊಳಿಸುವ ಅವರ ಅತ್ಯುತ್ತಮ ಕೊಡುಗೆಗಳನ್ನು ಗುರುತಿಸಿ ಕನ್ನಡದಲ್ಲಿ ಸಾಧನೆ ಮಾಡಿರುವ ಒಬ್ಬ ಹಿರಿಯ ವಿಜ್ಞಾನ ಸಂವಹನಕಾರರನ್ನು ಕೆಎಸ್‌ಟಿಎ ಕನ್ನಡ ವಿಜ್ಞಾನ ಮತ್ತು

ತಂತ್ರಜ್ಞಾನ ಸಮ್ಮೇಳನದಲ್ಲಿ ಕನ್ನಡದಲ್ಲಿ ಸ್ಟೀಮ್ ಸಂವಹನಕ್ಕಾಗಿ ಜೀವಮಾನ ಸಾಧನೆ ಪ್ರಶಸ್ತಿಯೊಂದಿಗೆ ಗೌರವಿಸಲಾಗುವುದು. ಆಯ್ಕೆಯಾದ ಪುರಸ್ಕೃತರನ್ನು ಕೆಎಸ್‌ಟಿಎ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಅಥವಾ ಇನ್ನಿತರ ಪ್ರಮುಖ ಕಾರ್ಯಕ್ರಮದಲ್ಲಿ ಚಿನ್ನದ ಪದಕ, ರೂ. 1.00 ಲಕ್ಷನಗದು ಮತ್ತು ಪ್ರಶಸ್ತಿಪತ್ರ ಹಾಗೂ ಸನ್ಮಾನದೊಂದಿಗೆ ಗೌರವಿಸಲಾಗುವುದು.

ಪ್ರಶಸ್ತಿ ಪುರಸ್ಕೃತರನ್ನು ಕೆಎಸ್ಟಿಎ ಕನ್ನಡ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನಕ್ಕೆ ಆಹ್ವಾನಿಸಲಾಗುತ್ತದೆ ಮತ್ತು ಅಗತ್ಯವಿರುವಂತೆ ಇಕಾನಮಿ ವರ್ಗದ ದೇಶೀಯ ವಿಮಾನ ಪ್ರಯಾಣ ದರ ಅಥವಾ ಪ್ರಥಮ ದರ್ಜೆ ರೈಲು ಪ್ರಯಾಣ ದರವನ್ನು ಮತ್ತು ಸಮ್ಮೇಳನದ ಸಂದರ್ಭದಲ್ಲಿ ವಸತಿ ಸೌಲಭ್ಯವನ್ನು ಒದಗಿಸಲಾಗುತ್ತದೆ. ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಅವರ ಭಾಷಣವನ್ನೂ ಆಯೋಜಿಸಲಾಗುತ್ತದೆ.

## 2.1 ಅರ್ಹತೆ

2.1.1 ನಾಮ ನಿರ್ದೇಶಿತರು ಹಿರಿಯ ಸಂವಹನಕಾರ / ಪತ್ರಕರ್ತ / ಸಂಪಾದಕ / ವಿಜ್ಞಾನಿ / ತಂತ್ರಜ್ಞರಾಗಿರಬೇಕು, ಅವರು 60 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರಾಗಿರಬೇಕು ಮತ್ತು ಕನ್ನಡದಲ್ಲಿ ಸ್ಟೀಮ್ ಸಂವಹನ ಕ್ಷೇತ್ರದಲ್ಲಿ ಅವರ ವೃತ್ತಿ/ಅಥವಾ ಸೇವೆ/ಜೀವಮಾನದಾದ್ಯಂತ ಕನಿಷ್ಠ 20 ವರ್ಷಗಳ ಅವಧಿಯವರೆಗೆ ಗಮನಾರ್ಹವಾದ ಮೂಲ ಕೊಡುಗೆಗಳನ್ನು ನೀಡಿರಬೇಕು.

2.1.2 ನಾಮನಿರ್ದೇಶಿತರು ಜನ್ಮ ಅಥವಾ ನಿವಾಸ ಅಥವಾ ಸೇವೆಯಿಂದಾಗಿ ಕರ್ನಾಟಕ ಮೂಲದವರಾಗಿರಬೇಕು. ಈ ಪ್ರಶಸ್ತಿಗೆ ನಾಮನಿರ್ದೇಶನಗೊಳ್ಳುವ ಸಮಯದಲ್ಲಿ ಅವರು ಭಾರತ ಅಥವಾ ವಿದೇಶದಲ್ಲಿ ಬೇರೆಲ್ಲಿಯಾದರೂ ವಾಸಿಸುತ್ತಿರಬಹುದು.

2.2 ನಾಮನಿರ್ದೇಶನ / ಪ್ರಶಸ್ತಿಗೆಮಾನದಂಡ

2.2.1 ವೈಜ್ಞಾನಿಕ ಮನೋಧರ್ಮ/ತಿಳಿವಳಿಕೆ/ತರಬೇತಿ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಅನ್ವಯಗಳನ್ನು ಉತ್ತೇಜಿಸಲು, ಇತರ ಭಾಷೆಗಳಿಂದ ಕನ್ನಡಕ್ಕೆ ಸ್ಟೀಮ್ನ ಯಾವುದೇ ಶಾಖೆಗೆ ಸಂಬಂಧಿಸಿದ ಪ್ರಕಟಿತ ಕೃತಿಗಳು ಮತ್ತು/ಅಥವಾ ಅನುವಾದಿತ ಪ್ರಕಟಣೆಗಳಿಂದ ಪ್ರಮಾಣೀಕೃತವಾದಂತೆ, ನಾಮನಿರ್ದೇಶಿತರು ಕನ್ನಡದಲ್ಲಿ ಸ್ಟೀಮ್ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಜ್ಞಾನ / ತಂತ್ರಜ್ಞಾನ ಸಂವಹನದಲ್ಲಿ ಗಮನಾರ್ಹ ಮತ್ತು ಸ್ವಂತಿಕೆಯುಳ್ಳ ಸ್ಥಿರ ದಾಖಲೆಯನ್ನು ಪ್ರದರ್ಶಿಸಿರಬೇಕು

2.2.2 ಡಿಜಿಟಲ್ / ಆಡಿಯೊ–ವಿಷುಯಲ್ ಮತ್ತು ಅನೌಪಚಾರಿಕ ಮಾಧ್ಯಮಗಳ ಮೂಲಕ ಕನ್ನಡದಲ್ಲಿ ಮಾಡಲಾದ ಅರ್ಹವಾದ ಸಂವಹನಗಳನ್ನು ಕೂಡ ಗುರುತಿಸಲಾಗುವುದು ಮತ್ತು ಪ್ರಶಸ್ತಿಗಾಗಿ ಪ್ರೋತ್ಸಾಹಿಸಲಾಗುವುದು

2.2.3 ಪ್ರಶಸ್ತಿಯನ್ನು ಒಬ್ಬ ವ್ಯಕ್ತಿಗೆ ಒಮ್ಮೆ ಮಾತ್ರ ನೀಡಲಾಗುತ್ತದೆ ಮತ್ತು ಮರಣೋತ್ತರ ಪ್ರಶಸ್ತಿಗಳನ್ನು ಪರಿಗಣಿಸಲಾಗುವುದಿಲ್ಲ

2.2.4 ಕರ್ನಾಟಕ ಸರ್ಕಾರ ಅಥವಾ ಕೆಎಸ್‌ಟಿಎಯಂತಹುದೇ ಉದ್ದೇಶಗಳನ್ನು ಹೊಂದಿರುವ ಮತ್ತೊಂದು ಸಂಸ್ಥೆ ಈಗಾಗಲೇ ಸ್ಥಾಪಿಸಿರುವ ಮತ್ತು ಕರ್ನಾಟಕ ಸರ್ಕಾರದಿಂದ ಧನಸಹಾಯ ಪಡೆದಿರುವ ಇಂತಹುದೇ ಜೀವಮಾನದ ಪ್ರಶಸ್ತಿಯನ್ನು ಈಗಾಗಲೇ ಪಡೆದವರಿಗೆ ಈ ಪ್ರಶಸ್ತಿಯನ್ನು ಸಾಮಾನ್ಯವಾಗಿ ನೀಡಲಾಗುವುದಿಲ್ಲ.

2.2.5 ಪ್ರಶಸ್ತಿಗಳ ಘೋಷಣೆಯನ್ನು ಪ್ರತಿವರ್ಷ ಜೂನ್ ತಿಂಗಳಿನಲ್ಲಿ ಕೆಎಸ್‌ಟಿಎ ಜಾಲತಾಣದಲ್ಲಿ ಮತ್ತು ಪ್ರಮುಖ ಪತ್ರಿಕೆಗಳಲ್ಲಿ ಸುದ್ದಿಯಾಗಿ ಪ್ರಕಟಿಸಲಾಗುತ್ತದೆ. ನಾಮನಿರ್ದೇಶನಗಳು / ಅರ್ಜಿಗಳನ್ನು ಪ್ರಕಟಣೆಯ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಸಲ್ಲಿಸಬೇಕು

2.3 ಕೆಎಸ್‌ಟಿಎ ಪ್ರಶಸ್ತಿಗಳು ಮತ್ತು ಫೆಲೋಶಿಪ್ ಆಯ್ಕೆ ಸಮಿತಿಯ (ಎಎಫ್ಎಸ್ಸಿ) ರಚನೆ ಮತ್ತು ಜೀವಮಾನ ಸಾಧನೆ ಪ್ರಶಸ್ತಿಗಳಿಗಾಗಿ ನಾಮನಿರ್ದೇಶನಗಳು

2.3.1 ದಿನಪತ್ರಿಕೆಗಳಲ್ಲಿ ಸುದ್ದಿಯಾಗಿ ಪ್ರಕಟಣೆ ಮತ್ತು ಕೆಎಸ್‌ಟಿಎ ಜಾಲತಾಣದಲ್ಲಿ ಪ್ರಕಟಿಸುವ ಮೂಲಕ ಕೆಎಸ್‌ಟಿಎ ಮೇಲಿನ ಎರಡು ವಿಭಾಗಗಳಲ್ಲಿನ ಜೀವಮಾನ ಸಾಧನೆ ಪ್ರಶಸ್ತಿಗಳಿಗೆ ನಾಮನಿರ್ದೇಶನಗಳನ್ನು ವರ್ಷಕ್ಕೊಮ್ಮೆ ಆಹ್ವಾನಿಸುತ್ತದೆ (ಅನುಬಂಧ I ಮತ್ತು II)

2.3.2 ಕಾರ್ಯಕಾರಿ ಸಮಿತಿಯ ಮೂವರು ಸದಸ್ಯರು (ವರ್ಷಕ್ಕೊಮ್ಮೆ ಸರದಿಯ ಆಧಾರದ ಮೇಲೆ) ಮತ್ತು ಮೂವರು ಬಾಹ್ಯ ಪರಿಣತರನ್ನು (ಸ್ಟೀಮ್ ಕ್ಷೇತ್ರದಿಂದ ಇಬ್ಬರು ಮತ್ತು ಒಬ್ಬ ಹೆಸರಾಂತ ವಿಜ್ಞಾನ ಸಂವಹನಕಾರರು, ಒಂದು ವರ್ಷದ ಅವಧಿಗೆ) ಒಳಗೊಂಡಿರುವ ಕೆಎಸ್ಟಿಎ ಪ್ರಶಸ್ತಿಗಳು ಮತ್ತು ಫೆಲೋಶಿಪ್ ಆಯ್ಕೆ ಸಮಿತಿಗೆ ಕೆಎಸ್‌ಟಿಎ ಅಧ್ಯಕ್ಷರು ಅಧ್ಯಕ್ಷರಾಗಿಯೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸಂಚಾಲಕರಾಗಿಯೂ ಇರುತ್ತಾರೆ.

2.3.3 ಈ ಸಮಿತಿಯು ಮೇಲಿನ ಎರಡು ವಿಭಾಗಗಳಲ್ಲಿ ಜೀವಮಾನ ಸಾಧನೆ ಪ್ರಶಸ್ತಿಗಳಿಗೆ ನಾಮ ನಿರ್ದೇಶನ ಗಳನ್ನು ಪರಿಶೀಲಿಸುತ್ತದೆ ಮತ್ತು ಶಿಫಾರಸುಗಳನ್ನು ಕೆಎಸ್‌ಟಿಎ ಕಾರ್ಯಕಾರಿ ಸಮಿತಿಗೆ ಸಲ್ಲಿಸುತ್ತದೆ, ಹಾಗೂ ಕೆಎಸ್‌ಟಿಎ ಕಾರ್ಯಕಾರಿ ಸಮಿತಿಯ– ನಿರ್ಧಾರವು ಅಂತಿಮವಾಗಿರುತ್ತದೆ.

**ಅನುಬಂಧ I**

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**(ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ)**

**ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕೃಷಿ ಮತ್ತು ವೈದ್ಯವಿಜ್ಞಾನದಲ್ಲಿ ಜೀವಮಾನದ ಸಾಧನೆಗಾಗಿ ಪ್ರೊ. ಸಿ. ಎನ್. ಆರ್. ರಾವ್– ಕೆಎಸ್‌ಟಿಎ ಜೀವಮಾನ ಸಾಧನೆ ಪ್ರಶಸ್ತಿಗಾಗಿ ನಾಮನಿರ್ದೇಶನ**

| ಭಾವಚಿತ್ರ |
|---|

## ಪ್ರೊಫಾರ್ಮಾ

ಸ್ಟೀಮ್‌ನಲ್ಲಿ ________ ವರ್ಷದ ಪ್ರೊ. ಸಿ. ಎನ್. ಆರ್. ರಾವ್ – ಕೆಎಸ್‌ಟಿಎ ಜೀವಮಾನ ಸಾಧನೆ ಪ್ರಶಸ್ತಿಗಾಗಿ ............................................... ಅವರ ನಾಮನಿರ್ದೇಶನ

## 1. ವೈಯಕ್ತಿಕ ವಿವರಗಳು

1.1 ಹೆಸರು

1.2 ಹುಟ್ಟಿದ ದಿನಾಂಕ*

1.3 ಹುಟ್ಟಿದ ಸ್ಥಳ ಮತ್ತು ರಾಜ್ಯ

1.4 ಕರ್ನಾಟಕದಲ್ಲಿ ವಾಸ್ತವ್ಯದ ಅವಧಿ**

1.5 ಪ್ರಸ್ತುತ ಸ್ಥಾನ

1.6 ವಿಳಾಸ: (ಕಚೇರಿ ಮತ್ತು ನಿವಾಸ

1.7 ದೂರವಾಣಿಸಂಖ್ಯೆ:(ಕಚೇರಿ:ನಿವಾಸ:ಮತ್ತುಮೊಬೈಲ್)

1.8 ಇ–ಮೇಲ್

ಸೂಚನೆ: * ವಯಸ್ಸಿನ ಪುರಾವೆ ಲಗತ್ತಿಸಿ

** ಕರ್ನಾಟಕದಲ್ಲಿ ವಾಸ್ತವ್ಯದ ಅವಧಿಯನ್ನು ಸ್ಪಷ್ಟವಾಗಿ ಸೂಚಿಸುವ ಸ್ವಯಂ–ದೃಢೀಕರಿಸಿದ ನಿವಾಸ ಪ್ರಮಾಣ ಪತ್ರವನ್ನು ಲಗತ್ತಿಸಿ. ಕರ್ನಾಟಕದಲ್ಲಿ ಜನಿಸದವರಿಗೆ ಮಾತ್ರ ಅನ್ವಯಿಸುತ್ತದೆ (ಅನುಬಂಧ –I ರಂತೆ)

## 2. ಶೈಕ್ಷಣಿಕ ಅರ್ಹತೆಗಳು

(ಇತ್ತೀಚಿನದರಿಂದ ಪ್ರಾರಂಭಿಸಿ, ಶೈಕ್ಷಣಿಕ ಅರ್ಹತೆಗಳನ್ನು ಸೂಚಿಸಿ)

| ಅವಧಿ | ಅರ್ಹತೆ: | ವಿಶ್ವವಿದ್ಯಾಲಯ / ಸಂಸ್ಥೆ / ಮಂಡಳಿ | ವಿಷಯ / ಕ್ಷೇತ್ರ |
|---|---|---|---|

## 3. ವೃತ್ತಿಜೀವನ

ಇತ್ತೀಚಿನದರಿಂದ ಪ್ರಾರಂಭಿಸಿ, ಕಳೆದ 20 ವರ್ಷಗಳ ವೃತ್ತಿಜೀವನವನ್ನು ಸೂಚಿಸಿ.

| ಅವಧಿ | ವರ್ಷಗಳು | ಸಂಸ್ಥೆ | ಹುದ್ದೆ | ಕೆಲಸದ ಸ್ವರೂಪ / ಜವಾಬ್ದಾರಿ |
|---|---|---|---|---|

## 4. ವೃತ್ತಿಜೀವನದ ಕಿರುಪರಿಚಯ / ಜೀವನ ಚಿತ್ರಣ

(ಬರಹ 300 ಪದಗಳನ್ನು ಮೀರಬಾರದು. ಬರಹವನ್ನು ದಯವಿಟ್ಟು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳೆರಡರಲ್ಲೂ ಸಲ್ಲಿಸಿ)

**5.** **ಪ್ರಕಟಣೆಗಳು** (ವರ್ಷದ ಡಿಸೆಂಬರ್ 31 ರಂದು ಅಥವಾ ಮೊದಲು ಪ್ರಕಟವಾದವು ಮಾತ್ರ)

**5.1** **ಪ್ರಕಟಣೆಗಳ ಸಾರಾಂಶ** (ದಯವಿಟ್ಟು ಸಂಖ್ಯೆಗಳನ್ನು ಮಾತ್ರ ಸೂಚಿಸಿ)

| **ಪ್ರಕಟಣೆಗಳು** | | **ಸಂಖ್ಯೆಗಳು** |
|---|---|---|
| a. | ಜರ್ನಲ್‌ಗಳಲ್ಲಿ ಪ್ರಕಟವಾದ ಪ್ರಬಂಧಗಳು | |
| b. | ಸಮ್ಮೇಳನಗಳು / ಸೆಮಿನಾರ್‌ಗಳಲ್ಲಿ ಮಂಡಿಸಿದ ಪ್ರಬಂಧಗಳು | |
| c. | ಸುದ್ದಿಪತ್ರ / ಬುಲೆಟಿನ್‌ಗಳಲ್ಲಿ ಪ್ರಕಟವಾದ ಲೇಖನಗಳು | |
| d. | ಪುಸ್ತಕಗಳು | |
| e. | ಪುಸ್ತಕಗಳಲ್ಲಿನ ಅಧ್ಯಾಯಗಳು | |
| f. | ವರದಿಗಳು | |
| g. | ಸಾಮಾನ್ಯ / ಜನಪ್ರಿಯ ಲೇಖನಗಳು | |
| h. | ಇತರ ಪ್ರಕಾರದ ಪ್ರಕಟಣೆಗಳು, ಯಾವುದಾದರೂ ಇದ್ದರೆ | |
| I | ಅಂಗೀಕೃತ ಪೇಟೆಂಟ್‌ಗಳು | |
| j. | ಒಟ್ಟು ಉಲ್ಲೇಖಗಳು / h– ಸೂಚ್ಯಂಕ / i– ಸೂಚ್ಯಂಕ | |

5.2 **ಕನ್ನಡ ಪ್ರಕಟಣೆಗಳ ವಿವರಗಳು:** (ದಯವಿಟ್ಟು ಕೆಳಗೆ ಸೂಚಿಸಿದಂತೆ ವಿವರಗಳನ್ನು ನೀಡಿ)

5.2.1 **ಕನ್ನಡ ಜರ್ನಲ್‌ಗಳಲ್ಲಿ ಪ್ರಕಟವಾದ ಪ್ರಬಂಧಗಳು** (ಶೀರ್ಷಿಕೆ, ಲೇಖಕ ಮತ್ತು ಸಹ–ಲೇಖಕರು, ಜರ್ನಲ್, ಸಂಪುಟ, ಪ್ರಕಟಣೆಯ ವರ್ಷ ಮತ್ತು ಪುಟ ಸಂಖ್ಯೆಗಳು ಹಾಗೂ ಒಟ್ಟು ಉಲ್ಲೇಖ)

5.2.2 **ಸಮ್ಮೇಳನಗಳು / ಸೆಮಿನಾರ್‌ಗಳಲ್ಲಿ ಮಂಡಿಸಿದ ಕನ್ನಡ ಪ್ರಬಂಧಗಳು** (ಶೀರ್ಷಿಕೆ, ಸಮ್ಮೇಳನ / ಸೆಮಿನಾರ್, ದಿನಾಂಕ ಮತ್ತು ಸ್ಥಳ, ಪುಟ ಸಂಖ್ಯೆಗಳು)

5.2.3 **ಸುದ್ದಿಪತ್ರ / ಬುಲೆಟಿನ್‌ಗಳಲ್ಲಿ ಪ್ರಕಟವಾದ ಕನ್ನಡ ಲೇಖನಗಳು** (ಶೀರ್ಷಿಕೆ, ಲೇಖಕ ಮತ್ತು ಸಹ–ಲೇಖಕರು, ಜರ್ನಲ್, ಸಂಪುಟ, ಪ್ರಕಟಣೆಯ ವರ್ಷ ಮತ್ತು ಪುಟ ಸಂಖ್ಯೆಗಳು)

5.2.4 **ಕನ್ನಡ ಪುಸ್ತಕಗಳು / ಅಧ್ಯಾಯಗಳು** (ಪುಸ್ತಕ / ಅಧ್ಯಾಯದ ಶೀರ್ಷಿಕೆ, ಲೇಖಕ ಮತ್ತು ಸಹ–ಲೇಖಕರು, ಸಂಪುಟ, ಪ್ರಕಟಣೆಯ ವರ್ಷ ಮತ್ತು ಪುಟ ಸಂಖ್ಯೆಗಳು)

5.2.5 **ಕನ್ನಡದ ವರದಿಗಳು / ಜನಪ್ರಿಯ ಲೇಖನಗಳು ಮತ್ತು ಇತರ ಪ್ರಕಾರದ ಪ್ರಕಟಣೆಗಳು, ಯಾವುದಾದರೂ ಇದ್ದರೆ** (ಶೀರ್ಷಿಕೆ, ಲೇಖಕ ಮತ್ತು ಸಹ–ಲೇಖಕರು, ಪ್ರಕಾಶಕರು, ವರ್ಷ)

5.2.6 **ಎಲೆಕ್ಟ್ರಾನಿಕ್ ಮತ್ತು ಸೋಷಿಯಲ್ ಮೀಡಿಯಾ ಹಾಗೂ ಅನೌಪಚಾರಿಕ ಸಂವಹನದ ಮೂಲಕ ವಿಜ್ಞಾನ ಪ್ರಸಾರದ ಚಟುವಟಿಕೆಗಳು**

6. **ಕನ್ನಡದಲ್ಲಿ ವಿಜ್ಞಾನ ಸಂವಹನ ಸಂಶೋಧನೆಗಾಗಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ (ಸ್ನಾತಕೋತ್ತರ ಮತ್ತು ಪಿಎಚ್.ಡಿ)** (ಪದವಿ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಇನ್ನೂ ಕೆಲಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ)

**8.** **ವೃತ್ತಿಪರ ಸಂಸ್ಥೆಗಳ ಫೆಲೋಶಿಪ್ / ಸದಸ್ಯತ್ವ (ವೃತ್ತಿಜೀವನದಲ್ಲಿ ಮಾತ್ರ)**

**9.** **ಕನ್ನಡದಲ್ಲಿ ವಿಜ್ಞಾನ ಸಂವಹನಕ್ಕಾಗಿ ವೃತ್ತಿಜೀವನದಲ್ಲಿ ಪಡೆದ ಪ್ರಶಸ್ತಿಗಳು ಮತ್ತು ಸನ್ಮಾನ ಪತ್ರಗಳು** (ವಿದ್ಯಾರ್ಥಿ ಜೀವನದಲ್ಲಿ ಮತ್ತು ಇತರ ಚಟುವಟಿಕೆಗಳಿಗಾಗಿ ಪಡೆದ ಪ್ರಶಸ್ತಿಗಳನ್ನು ದಯವಿಟ್ಟು ಸೇರಿಸಬೇಡಿ)

**10.** **ಇಬ್ಬರು ರೆಫರಿಗಳ ವಿವರಗಳು** (ಪತ್ರಗಳನ್ನು ಅನುಬಂಧ–IIರಂತೆ ಲಗತ್ತಿಸಬೇಕು)

| ಹೆಸರು ಮತ್ತು ಹುದ್ದೆ | ವಿಳಾಸ | ಸಂಶೋಧನೆಯ ಕ್ಷೇತ್ರಗಳು | ರೆಫರಿಯೊಂದಿಗೆ ಸಂಬಂಧ |
|---|---|---|---|
| | | | |
| | | | |

**11.** **ಕನ್ನಡದ ಐದು ಪ್ರಮುಖ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಕಟಣೆಗಳ ವಿವರಗಳು** (ಅಂತಹ ಎಲ್ಲ ಪ್ರಕಟಣೆಗಳ ಪ್ರತಿಗಳನ್ನೂ ಅನುಬಂಧ –3 ರಂತೆ ಲಗತ್ತಿಸಬೇಕು)
(ಶೀರ್ಷಿಕೆ, ಲೇಖಕ ಮತ್ತು ಸಹ–ಲೇಖಕರು, ಜರ್ನಲ್, ಸಂಪುಟ, ಪ್ರಕಟಣೆಯ ವರ್ಷ ಮತ್ತು ಪುಟ ಸಂಖ್ಯೆಗಳನ್ನು ಇದು ಒಳಗೊಂಡಿರಬೇಕು)

**12.** **ಪ್ರಶಸ್ತಿಗಾಗಿ ನಿಮ್ಮ ನಾಮನಿರ್ದೇಶನವನ್ನು ಸಮರ್ಥಿಸಲು ನೀವು ಒದಗಿಸಲು ಬಯಸುವ ಇನ್ನಿತರ ಯಾವುದೇ ಮಾಹಿತಿ** (ಪೂರಕ ಕಡತಗಳು, ಯಾವುದಾದರೂ ಇದ್ದರೆ, ಅನುಬಂಧ IVರಂತೆ ಲಗತ್ತಿಸಬೇಕು)

**13.** **ಘೋಷಣೆ**

_____ ವರ್ಷದ ಕೆಎಸ್‌ಟಿಎ ........................................ರಾಜ್ಯ ಪ್ರಶಸ್ತಿಗಾಗಿ ನಾಮನಿರ್ದೇಶನಕ್ಕಾಗಿ ನಾನು, ................................................., ಈ ಪ್ರೊಫಾರ್ಮಾದಲ್ಲಿ ಒದಗಿಸಿರುವ ಎಲ್ಲ ಮಾಹಿತಿಯೂ ನನಗೆ ತಿಳಿದ ಮಟ್ಟಿಗೆ ಸತ್ಯವಾದದ್ದು ಎಂದು ಈ ಮೂಲಕ ಘೋಷಿಸುತ್ತೇನೆ. ಅಗತ್ಯವಿದ್ದರೆ ನಾನು ಮೂಲ ದಾಖಲೆಗಳನ್ನು ಒದಗಿಸುತ್ತೇನೆ.

ದಿನಾಂಕ:

**ಗಮನಿಸಿ:**

- ನಾಮನಿರ್ದೇಶನಗಳನ್ನು ಹಾರ್ಡ್ ಕಾಪಿ ರೂಪದಲ್ಲಿ ಮಾತ್ರ ಕಳುಹಿಸಬೇಕು.
- ಅಗತ್ಯಬಿದ್ದಾಗ ಮೂಲ ದಾಖಲೆಗಳನ್ನು ಸಲ್ಲಿಸಬೇಕು.
- ಯಾವುದೇ ರೂಪದಲ್ಲಿ ಪ್ರಚಾರ ಮಾಡುವುದು ಅನರ್ಹತೆಗೆ ಕಾರಣವಾಗುತ್ತದೆ.
- ಆಯ್ಕೆ ಸಮಿತಿಯ ನಿರ್ಧಾರವು ಅಂತಿಮ ಮತ್ತು ಒಪ್ಪತಕ್ಕದ್ದಾಗಿರುತ್ತದೆ

**14.** **ನಾಮನಿರ್ದೇಶನಗಳನ್ನು ಕೆಎಸ್‌ಟಿಎ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಕಳುಹಿಸಬೇಕು**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ (ಕೆಎಸ್ಟಿಎ)
ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ, ತೋಟಗಾರಿಕೆ ವಿಜ್ಞಾನಗಳ ಕಾಲೇಜು ಆವರಣ,
ಜಿಕೆವಿಕೆ ಕ್ಯಾಂಪಸ್, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ,
ದೊಡ್ಡಬೆಟ್ಟಹಳ್ಳಿ ಬಡಾವಣೆ, ವಿದ್ಯಾರಣ್ಯಪುರ, ಬೆಂಗಳೂರು – 560097

**ಅನುಬಂಧ II**

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**(ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ)**

**ಕನ್ನಡದಲ್ಲಿ ಸ್ಟೀಮ್ ಸಂವಹನದಲ್ಲಿ ಕೆಎಸ್‌ಟಿಎ ಜೀವಮಾನ ಸಾಧನೆ ಪ್ರಶಸ್ತಿಗೆ ನಾಮನಿರ್ದೇಶನ**

## ಪ್ರೊಫಾರ್ಮಾ

ಭಾವಚಿತ್ರ

..............................................ಗಾಗಿ ನಾಮನಿರ್ದೇಶನ __________ ವರ್ಷದಲ್ಲಿ ಕನ್ನಡದಲ್ಲಿ ವಿಜ್ಞಾನ ಸಂವಹನಕ್ಕಾಗಿ ಕೆಎಸ್‌ಟಿಎ ಜೀವಮಾನ ಸಾಧನೆ ಪ್ರಶಸ್ತಿ

**1. ವೈಯಕ್ತಿಕ ವಿವರಗಳು**

| | | |
|---|---|---|
| 1.1 | ಹೆಸರು | |
| 1.2 | ಹುಟ್ಟಿದ ದಿನಾಂಕ* | |
| 1.3 | ಹುಟ್ಟಿದ ಸ್ಥಳ ಮತ್ತು ರಾಜ್ಯ | |
| 1.4 | ಕರ್ನಾಟಕದಲ್ಲಿ ವಾಸ್ತವ್ಯದ ಅವಧಿ** | |
| 1.5 | ಪ್ರಸ್ತುತ ಸ್ಥಾನ | |
| 1.6 | ವಿಳಾಸ: (ಕಚೇರಿ ಮತ್ತು ನಿವಾಸ | |
| 1.7 | ದೂರವಾಣಿ ಸಂಖ್ಯೆ: (ಕಚೇರಿ: ನಿವಾಸ: ಮತ್ತು ಮೊಬೈಲ್) | |
| 1.8 | ಇ–ಮೇಲ್ | |

**ಸೂಚನೆ:** * ವಯಸ್ಸಿನ ಪುರಾವೆ ಲಗತ್ತಿಸಿ

** ಕರ್ನಾಟಕದಲ್ಲಿ ವಾಸ್ತವ್ಯದ ಅವಧಿಯನ್ನು ಸ್ಪಷ್ಟವಾಗಿ ಸೂಚಿಸುವ ಸ್ವಯಂ–ದೃಢೀಕರಿಸಿದ ನಿವಾಸ ಪ್ರಮಾಣಪತ್ರವನ್ನು ಲಗತ್ತಿಸಿ. ಕರ್ನಾಟಕದಲ್ಲಿ ಜನಿಸದವರಿಗೆ ಮಾತ್ರ ಅನ್ವಯಿಸುತ್ತದೆ (ಅನುಬಂಧ –Iರಂತೆ)

**2. ಶೈಕ್ಷಣಿಕ ಅರ್ಹತೆಗಳು**

(ಇತ್ತೀಚಿನದರಿಂದ ಪ್ರಾರಂಭಿಸಿ, ಶೈಕ್ಷಣಿಕ ಅರ್ಹತೆಗಳನ್ನು ಸೂಚಿಸಿ)

| ಅವಧಿ | ಅರ್ಹತೆ: | ವಿಶ್ವವಿದ್ಯಾಲಯ / ಸಂಸ್ಥೆ / ಮಂಡಳಿ | ವಿಷಯ / ಕ್ಷೇತ್ರ |
|---|---|---|---|

**3. ವೃತ್ತಿಜೀವನ**

ಇತ್ತೀಚಿನದರಿಂದ ಪ್ರಾರಂಭಿಸಿ, ಕಳೆದ 20 ವರ್ಷಗಳ ವೃತ್ತಿಜೀವನವನ್ನು ಸೂಚಿಸಿ.

| ಅವಧಿ | ವರ್ಷಗಳು | ಸಂಸ್ಥೆ | ಹುದ್ದೆ | ಕೆಲಸದ ಸ್ವರೂಪ / ಜವಾಬ್ದಾರಿ |
|---|---|---|---|---|

**4. ವೃತ್ತಿಜೀವನದ ಕಿರುಪರಿಚಯ / ಜೀವನ ಚಿತ್ರಣ**

(ಬರಹ 300 ಪದಗಳನ್ನು ಮೀರಬಾರದು. ಬರಹವನ್ನು ದಯವಿಟ್ಟು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳೆರಡರಲ್ಲೂ ಸಲ್ಲಿಸಿ)

5. **ಪ್ರಕಟಣೆಗಳು** (ವರ್ಷದ ಡಿಸೆಂಬರ್ 31 ರಂದು ಅಥವಾ ಮೊದಲು ಪ್ರಕಟವಾದವು ಮಾತ್ರ)

5.1 **ಪ್ರಕಟಣೆಗಳ ಸಾರಾಂಶ** (ದಯವಿಟ್ಟು ಸಂಖ್ಯೆಗಳನ್ನು ಮಾತ್ರ ಸೂಚಿಸಿ)

| ಪ್ರಕಟಣೆಗಳು | | ಸಂಖ್ಯೆಗಳು |
|---|---|---|
| a. | ಜರ್ನಲ್‌ಗಳಲ್ಲಿ ಪ್ರಕಟವಾದ ಪ್ರಬಂಧಗಳು | |
| b. | ಸಮ್ಮೇಳನಗಳು / ಸೆಮಿನಾರ್‌ಗಳಲ್ಲಿ ಮಂಡಿಸಿದ ಪ್ರಬಂಧಗಳು | |
| c. | ಸುದ್ದಿಪತ್ರ / ಬುಲೆಟಿನ್‌ಗಳಲ್ಲಿ ಪ್ರಕಟವಾದ ಲೇಖನಗಳು | |
| d. | ಪುಸ್ತಕಗಳು | |
| e. | ಪುಸ್ತಕಗಳಲ್ಲಿನ ಅಧ್ಯಾಯಗಳು | |
| f. | ವರದಿಗಳು | |
| g. | ಸಾಮಾನ್ಯ / ಜನಪ್ರಿಯ ಲೇಖನಗಳು | |
| h. | ಇತರ ಪ್ರಕಾರದ ಪ್ರಕಟಣೆಗಳು, ಯಾವುದಾದರೂ ಇದ್ದರೆ | |
| I | ಅಂಗೀಕೃತ ಪೇಟೆಂಟ್‌ಗಳು | |
| j. | ಒಟ್ಟು ಉಲ್ಲೇಖಗಳು / h– ಸೂಚ್ಯಂಕ / i– ಸೂಚ್ಯಂಕ | |

5.2 **ಕನ್ನಡ ಪ್ರಕಟಣೆಗಳ ವಿವರಗಳು:** (ದಯವಿಟ್ಟು ಕೆಳಗೆ ಸೂಚಿಸಿದಂತೆ ವಿವರಗಳನ್ನು ನೀಡಿ)

5.2.1 **ಕನ್ನಡ ಜರ್ನಲ್‌ಗಳಲ್ಲಿ ಪ್ರಕಟವಾದ ಪ್ರಬಂಧಗಳು** (ಶೀರ್ಷಿಕೆ, ಲೇಖಕ ಮತ್ತು ಸಹ–ಲೇಖಕರು, ಜರ್ನಲ್, ಸಂಪುಟ, ಪ್ರಕಟಣೆಯ ವರ್ಷ ಮತ್ತು ಪುಟ ಸಂಖ್ಯೆಗಳು ಹಾಗೂ ಒಟ್ಟು ಉಲ್ಲೇಖ)

5.2.2 **ಸಮ್ಮೇಳನಗಳು / ಸೆಮಿನಾರ್‌ಗಳಲ್ಲಿ ಮಂಡಿಸಿದ ಕನ್ನಡ ಪ್ರಬಂಧಗಳು** (ಶೀರ್ಷಿಕೆ, ಸಮ್ಮೇಳನ / ಸೆಮಿನಾರ್, ದಿನಾಂಕ ಮತ್ತು ಸ್ಥಳ, ಪುಟ ಸಂಖ್ಯೆಗಳು)

5.2.3 **ಸುದ್ದಿಪತ್ರ / ಬುಲೆಟಿನ್‌ಗಳಲ್ಲಿ ಪ್ರಕಟವಾದ ಕನ್ನಡ ಲೇಖನಗಳು** (ಶೀರ್ಷಿಕೆ, ಲೇಖಕ ಮತ್ತು ಸಹ–ಲೇಖಕರು, ಜರ್ನಲ್, ಸಂಪುಟ, ಪ್ರಕಟಣೆಯ ವರ್ಷ ಮತ್ತು ಪುಟ ಸಂಖ್ಯೆಗಳು)

5.2.4 **ಕನ್ನಡ ಪುಸ್ತಕಗಳು / ಅಧ್ಯಾಯಗಳು** (ಪುಸ್ತಕ / ಅಧ್ಯಾಯದ ಶೀರ್ಷಿಕೆ, ಲೇಖಕ ಮತ್ತು ಸಹ–ಲೇಖಕರು, ಸಂಪುಟ, ಪ್ರಕಟಣೆಯ ವರ್ಷ ಮತ್ತು ಪುಟ ಸಂಖ್ಯೆಗಳು)

5.2.5 **ಕನ್ನಡದ ವರದಿಗಳು / ಜನಪ್ರಿಯ ಲೇಖನಗಳು ಮತ್ತು ಇತರ ಪ್ರಕಾರದ ಪ್ರಕಟಣೆಗಳು, ಯಾವುದಾದರೂ ಇದ್ದರೆ** (ಶೀರ್ಷಿಕೆ, ಲೇಖಕ ಮತ್ತು ಸಹ–ಲೇಖಕರು, ಪ್ರಕಾಶಕರು, ವರ್ಷ)

5.2.6 **ಎಲೆಕ್ಟ್ರಾನಿಕ್ ಮತ್ತು ಸೋಷಿಯಲ್ ಮೀಡಿಯಾ ಹಾಗೂ ಅನೌಪಚಾರಿಕ ಸಂವಹನದ ಮೂಲಕ ವಿಜ್ಞಾನ ಪ್ರಸಾರದ ಚಟುವಟಿಕೆಗಳು**

6. **ಕನ್ನಡದಲ್ಲಿ ವಿಜ್ಞಾನ ಸಂವಹನ ಸಂಶೋಧನೆಗಾಗಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ (ಸ್ನಾತಕೋತ್ತರ ಮತ್ತು ಪಿಎಚ್.ಡಿ)** (ಪದವಿ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಇನ್ನೂ ಕೆಲಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ)

7. **ವೃತ್ತಿಪರ ಸಂಸ್ಥೆಗಳ ಫೆಲೋಶಿಪ್ / ಸದಸ್ಯತ್ವ (ವೃತ್ತಿಜೀವನದಲ್ಲಿ ಮಾತ್ರ)**

8. **ಕನ್ನಡದಲ್ಲಿ ವಿಜ್ಞಾನ ಸಂವಹನಕ್ಕಾಗಿ ವೃತ್ತಿಜೀವನದಲ್ಲಿ ಪಡೆದ ಪ್ರಶಸ್ತಿಗಳು ಮತ್ತು ಸನ್ಮಾನ ಪತ್ರಗಳು** (ವಿದ್ಯಾರ್ಥಿ ಜೀವನದಲ್ಲಿ ಮತ್ತು ಇತರ ಚಟುವಟಿಕೆಗಳಿಗಾಗಿ ಪಡೆದ ಪ್ರಶಸ್ತಿಗಳನ್ನು ದಯವಿಟ್ಟು ಸೇರಿಸಬೇಡಿ)

9. **ಇಬ್ಬರು ರೆಫರಿಗಳ ವಿವರಗಳು** (ಪತ್ರಗಳನ್ನು ಅನುಬಂಧ–IIರಂತೆ ಲಗತ್ತಿಸಬೇಕು)

| ಹೆಸರು ಮತ್ತು ಹುದ್ದೆ | ವಿಳಾಸ | ಸಂಶೋಧನೆಯ ಕ್ಷೇತ್ರಗಳು | ರೆಫರಿಯೊಂದಿಗೆ ಸಂಬಂಧ |
|---|---|---|---|
| | | | |
| | | | |

10. **ಕನ್ನಡದ ಐದು ಪ್ರಮುಖ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಕಟಣೆಗಳ ವಿವರಗಳು** (ಅಂತಹ ಎಲ್ಲ ಪ್ರಕಟಣೆಗಳ ಪ್ರತಿಗಳನ್ನೂ ಅನುಬಂಧ –3 ರಂತೆ ಲಗತ್ತಿಸಬೇಕು)
(ಶೀರ್ಷಿಕೆ, ಲೇಖಕ ಮತ್ತು ಸಹ–ಲೇಖಕರು, ಜರ್ನಲ್, ಸಂಪುಟ, ಪ್ರಕಟಣೆಯ ವ$\mu$'$\acute{}$ ಮತ್ತು ಪುಟ ಸಂಖ್ಯೆಗಳನ್ನು ಇದು ಒಳಗೊಂಡಿರಬೇಕು)

11. **ಪ್ರಶಸ್ತಿಗಾಗಿ ನಿಮ್ಮ ನಾಮನಿರ್ದೇಶನವನ್ನು ಸಮರ್ಥಿಸಲು ನೀವು ಒದಗಿಸಲು ಬಯಸುವ ಇನ್ನಿತರ ಯಾವುದೇ ಮಾಹಿತಿ** (ಪೂರಕ ಕಡತಗಳು, ಯಾವುದಾದರೂ ಇದ್ದರೆ, ಅನುಬಂಧ IVರಂತೆ ಲಗತ್ತಿಸಬೇಕು)

12. **ಘೋಷಣೆ**

_____ ವರ್ಷದ ಕೆಎಸ್‌ಟಿಎ .......................................ರಾಜ್ಯ ಪ್ರಶಸ್ತಿಗಾಗಿ ನಾಮನಿರ್ದೇಶನಕ್ಕಾಗಿ ನಾನು, .................................................., ಈ ಪ್ರೊಫಾರ್ಮಾದಲ್ಲಿ ಒದಗಿಸಿರುವ ಎಲ್ಲ ಮಾಹಿತಿಯೂ ನನಗೆ ತಿಳಿದ ಮಟ್ಟಿಗೆ ಸತ್ಯವಾದದ್ದು ಎಂದು ಈ ಮೂಲಕ ಘೋಷಿಸುತ್ತೇನೆ. ಅಗತ್ಯವಿದ್ದರೆ ನಾನು ಮೂಲ ದಾಖಲೆಗಳನ್ನು ಒದಗಿಸುತ್ತೇನೆ.

ದಿನಾಂಕ:
ಸ್ಥಳ: ಸಹಿ

**13. ನಾಮನಿರ್ದೇಶನಗಳನ್ನು ಕೆಎಸ್‌ಟಿಎ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಕಳುಹಿಸಬೇಕು**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ (ಕೆಎಸ್‌ಟಿಎ)
ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ, ತೋಟಗಾರಿಕೆ ವಿಜ್ಞಾನಗಳ ಕಾಲೇಜು ಆವರಣ,
ಜಿಕೆವಿಕೆ ಕ್ಯಾಂಪಸ್, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ,
ದೊಡ್ಡಬೆಟ್ಟಹಳ್ಳಿ ಬಡಾವಣೆ, ವಿದ್ಯಾರಣ್ಯಪುರ, ಬೆಂಗಳೂರು – 560097

**3 ವಿಜ್ಞಾನ, ತಂತ್ರಜ್ಞಾನ, ಕೃಷಿ ಮತ್ತು ವೈದ್ಯಕೀಯ ವಿಭಾಗಗಳಲ್ಲಿ ಅತ್ಯುತ್ತಮ ಕನ್ನಡ ಪುಸ್ತಕಗಳಿಗೆ ಪ್ರಶಸ್ತಿ**

ವಿಜ್ಞಾನ, ತಂತ್ರಜ್ಞಾನ, ಕೃಷಿ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಕನ್ನಡ ಪುಸ್ತಕಗಳ ರಚನೆ ಮತ್ತು ಪ್ರಕಟಣೆಯನ್ನು ಉತ್ತೇಜಿಸುವ ಸಲುವಾಗಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಅತ್ಯುತ್ತಮ ಪುಸ್ತಕ ಪ್ರಶಸ್ತಿಗಳ ಯೋಜನೆಯನ್ನು ಸ್ಥಾಪಿಸಿದೆ.

3.1 ಮೇಲಿನ ನಾಲ್ಕು ವಿಭಾಗಗಳಲ್ಲಿ ದ್ವೈವಾರ್ಷಿಕ ಪ್ರಶಸ್ತಿಗಳನ್ನು ಆಯ್ದ ಲೇಖಕರಿಗೆ ಸನ್ಮಾನ, ರೂ 25,000/– ನಗದು ಬಹುಮಾನ ಮತ್ತು ಪ್ರಮಾಣಪತ್ರದೊಂದಿಗೆ ನೀಡಲಾಗುವುದು.

3.2 ಪ್ರಶಸ್ತಿಗಳ ಘೋಷಣೆಯನ್ನು ಪ್ರತಿವರ್ಷ ಜೂನ್ ತಿಂಗಳಿನಲ್ಲಿ ಕೆಎಸ್‌ಟಿಎ ಜಾಲತಾಣದಲ್ಲಿ ಮತ್ತು ಪ್ರಮುಖ ಪತ್ರಿಕೆಗಳಲ್ಲಿ ಸುದ್ದಿಯಾಗಿ ಪ್ರಕಟಿಸಲಾಗುತ್ತದೆ. ಆಸಕ್ತ ಲೇಖಕರು ವಿಜ್ಞಾನ, ತಂತ್ರಜ್ಞಾನ, ಕೃಷಿ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ತಮ್ಮ ಪ್ರಕಟಿತ ಪುಸ್ತಕಗಳ ನಾಲ್ಕು ಪ್ರತಿಗಳನ್ನು ಮೂರು ತಿಂಗಳ ಅವಧಿಯೊಳಗೆ ನಿಗದಿತ ಅರ್ಜಿಯೊಂದಿಗೆ ಸಲ್ಲಿಸಬೇಕು.

3.3 ಕಳೆದ ಎರಡು ವರ್ಷಗಳಲ್ಲಿ ಪ್ರಕಟವಾದ ಪುಸ್ತಕಗಳನ್ನು ಪ್ರಶಸ್ತಿಗಳಿಗಾಗಿ ಸಲ್ಲಿಸಬಹುದು; ಮಾಧ್ಯಮಿಕ ಶಾಲೆ, ಪಿಯುಸಿ, ಪದವಿ, ಸ್ನಾತಕೋತ್ತರ ಅಥವಾ ಇನ್ನಾವುದೇ ಕೋರ್ಸ್‌ಗಳ ಪಠ್ಯಕ್ರಮಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಪರಿಗಣಿಸಲಾಗುವುದಿಲ್ಲ; ಲೇಖಕರು ಒಂದು ಕ್ಷೇತ್ರದಲ್ಲಿ ಗರಿಷ್ಠ ಎರಡು ಪುಸ್ತಕಗಳನ್ನು ಸಲ್ಲಿಸಬಹುದು ಮತ್ತು ಈ ಹಿಂದೆ ಯಾವುದೇ ಕ್ಷೇತ್ರದಲ್ಲಿ ಕೆಎಸ್‌ಟಿಎ ಪ್ರಶಸ್ತಿ ಪಡೆದ ಲೇಖಕರನ್ನು ಪರಿಗಣಿಸಲಾಗುವುದಿಲ್ಲ

3.4 ತಜ್ಞರಸಮಿತಿಯು ಪ್ರವೇಶಗಳನ್ನು ಪರಿಶೀಲಿಸುತ್ತದೆ ಮತ್ತು ಪ್ರತಿ ವರ್ಷದ ಅತ್ಯುತ್ತಮ ಪುಸ್ತಕಗಳ ಪಟ್ಟಿಯನ್ನು ಸಂಬಂಧಪಟ್ಟ ವರ್ಷದ ಜನವರಿಯ ನಂತರ ಕಾರ್ಯಕಾರಿ ಸಮಿತಿಗೆ ಕಳುಹಿಸುತ್ತದೆ. ಪ್ರಶಸ್ತಿಗಳ ಘೋಷಣೆಯನ್ನು ಕೆಎಸ್‌ಟಿಎ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಮತ್ತು ಕೆಎಸ್‌ಟಿಎ ವಾರ್ಷಿಕ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು

**ಅರ್ಜಿ ನಮೂನೆ**

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**(ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ)**

## ಅತ್ಯುತ್ತಮ ಕನ್ನಡ ಪುಸ್ತಕ ಪ್ರಶಸ್ತಿಗಳಿಗಾಗಿ ಅರ್ಜಿಯ ವಿವರ

1. ಲೇಖಕರ ಹೆಸರು:
2. ವಿಳಾಸ:

   ಇಮೇಲ್

   ದೂರವಾಣಿ ಸಂಖ್ಯೆ.

   ಫ್ಯಾಕ್ಸ್
3. ಪುಸ್ತಕ/ಗಳ ಶೀರ್ಷಿಕೆ:
4. ಪ್ರಕಟಣೆಯ ವರ್ಷ:
5. ಪುಟಗಳ ಸಂಖ್ಯೆ:
6. ಪ್ರಕಾಶಕರು:
7. ಪುಸ್ತಕವು ಯಾವುದೇ ಮಂಡಳಿ / ವಿಶ್ವವಿದ್ಯಾಲಯದ ನಿಗದಿತ ಪಠ್ಯಪುಸ್ತಕವೇ? (ಹೌದು ಅಥವಾ ಇಲ್ಲ ಎಂದು ನಿರ್ದಿಷ್ಟಪಡಿಸಿ)
8. ಕ್ಷೇತ್ರ:
9. ನೀವು ಈ ಹಿಂದೆ ಕೆಎಸ್‌ಟಿಎ ಪ್ರಶಸ್ತಿ ಪಡೆದಿದ್ದೀರಾ? (ಹೌದು ಅಥವಾ ಇಲ್ಲ ಎಂದು ನಿರ್ದಿಷ್ಟಪಡಿಸಿ)
10. ನೀವು ಎಂದಾದರೂ ಬಂಧನಕ್ಕೆ / ಕಾನೂನು ಕ್ರಮಕ್ಕೆ ಒಳಗಾಗಿದ್ದೀರಾ / ನ್ಯಾಯಾಲಯದಿಂದ ತಪ್ಪಿತಸ್ಥರೆಂದು ಘೋಷಿಸಲ್ಪಟ್ಟಿದ್ದೀರಾ? (ಹೌದು ಅಥವಾ ಇಲ್ಲ ಎಂದು ನಿರ್ದಿಷ್ಟಪಡಿಸಿ)

**ಘೋಷಣೆ**

ಮೇಲೆ ನೀಡಲಾದ ಮಾಹಿತಿಯು ನನ್ನ ಜ್ಞಾನ ಮತ್ತು ನಂಬಿಕೆಗೆ ಅನುಗುಣವಾಗಿ ಸತ್ಯ, ಸಂಪೂರ್ಣ ಮತ್ತು ಸರಿಯಾಗಿದೆ ಎಂದು ನಾನು ಈ ಮೂಲಕ ಘೋಷಿಸುತ್ತೇನೆ. ಪಕ್ಷಪಾತ ತೋರಿಸಲು ಪ್ರಭಾವ ಬೀರುವ ಯಾವುದೇ ಪ್ರಯತ್ನವನ್ನು ಅನರ್ಹತೆ ಎಂದು ಪರಿಗಣಿಸಲಾಗುತ್ತದೆ ಮತ್ತು ಅಂತಹ ವ್ಯಕ್ತಿಯ ಪುಸ್ತಕವನ್ನು ಯಾವುದೇ ಮಾಹಿತಿಯಿಲ್ಲದೆ ತಿರಸ್ಕರಿಸಲಾಗುತ್ತದೆ ಎನ್ನುವುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ.

ಸ್ಥಳ:

ದಿನಾಂಕ: (ಹೆಸರು)

ಸಹಿ

**4 ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಜನಸಾಮಾನ್ಯರಿಂದ ನಾವೀನ್ಯತೆಗಾಗಿ ಪ್ರಶಸ್ತಿಗಳು**

ವಿಜ್ಞಾನ ಮತ್ತು ತಂತ್ರಜ್ಞಾನ ಅಥವಾ ಆರ್ಥಿಕತೆಯ ಯಾವುದೇ ವಿಭಾಗದಿಂದ ಹೊರಹೊಮ್ಮುವ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಜನರ ಜೀವನವನ್ನು ಪರಿವರ್ತಿಸಲು ಸಹಾಯ ಮಾಡಿರುವ ಅಥವಾ ಉದ್ಯಮಗಳು ಮತ್ತು ಉದ್ಯೋಗಾವಕಾಶಗಳನ್ನು ಸಶಕ್ತಗೊಳಿಸಿದ ಅನುಕರಣೀಯ ಆವಿಷ್ಕಾರಗಳು / ಪರಿಹಾರಗಳನ್ನು ಪ್ರತಿವರ್ಷವೂ ಗುರುತಿಸಲಾಗುತ್ತದೆ. ಅರ್ಜಿದಾರ ನವನಿರ್ಮಿತಿಕಾರರು ಕರ್ನಾಟಕ ಮೂಲದವರಾಗಿದ್ದು (ಜನನ ಅಥವಾ ನಿವಾಸದ ಪ್ರಕಾರ), ಜಗತ್ತಿನ ಎಲ್ಲಿಯಾದರೂ ಇರಬಹುದು.

4.1 ಪ್ರಶಸ್ತಿಯ ಮೂರು ವಿಭಾಗಗಳು ಹೀಗಿವೆ : ಪದವಿಮಟ್ಟದಲ್ಲಿ ಅತ್ಯುತ್ತಮ ನಾವೀನ್ಯತೆಗಾಗಿ ಡಾ. ಎಸ್.ಕೆ. ಶಿವಕುಮಾರ್ಪ್ರಶಸ್ತಿ (3); ಸ್ನಾತಕೋತ್ತರ ಮಟ್ಟದಲ್ಲಿ ಅತ್ಯುತ್ತಮ ನಾವೀನ್ಯತೆಗಾಗಿ ಪ್ರೊ. ಯು. ಆರ್. ರಾವ್ ಪ್ರಶಸ್ತಿ (3); ಮತ್ತು ಜನಸಾಮಾನ್ಯರ ಅತ್ಯುತ್ತಮ ನಾವೀನ್ಯತೆಗಾಗಿ ಕೆಎಸ್‌ಟಿಎ ಪ್ರಶಸ್ತಿ (3). ಪ್ರತಿಯೊಂದು ಪ್ರಶಸ್ತಿಯೂ ಸನ್ಮಾನಪತ್ರ, ತಲಾ ರೂ 10,000 ನಗದು ಬಹುಮಾನ ಮತ್ತು ಪ್ರಮಾಣಪತ್ರವನ್ನು ಒಳಗೊಂಡಿವೆ.

4.2 ಪ್ರಶಸ್ತಿಗಳ ಘೋಷಣೆಯನ್ನು ಪ್ರತಿವರ್ಷ ಆಗಸ್ಟ್ ತಿಂಗಳಿನಲ್ಲಿ ಕೆಎಸ್‌ಟಿಎ ಜಾಲತಾಣದಲ್ಲಿ ಮತ್ತು ಪ್ರಮುಖ ಪತ್ರಿಕೆಗಳಲ್ಲಿ ಸುದ್ದಿಯಾಗಿ ಪ್ರಕಟಿಸಲಾಗುತ್ತದೆ.ಆಸಕ್ತರು, ಮೂರು ತಿಂಗಳ ಅವಧಿಯೊಳಗೆ, ತಮ್ಮ ಆವಿಷ್ಕಾರಗಳ ಸಾರಾಂಶವನ್ನು ನಿಗದಿತ ಅರ್ಜಿ ನಮೂನೆಯಲ್ಲಿ ಸಲ್ಲಿಸಬೇಕು; ನಾಮನಿರ್ದೇಶನಗಳೊಂದಿಗೆ ಸಂಬಂಧಿತ ದಾಖಲೆಗಳೂ ಇರಬೇಕು

4.3 ಅಕಾಡೆಮಿಯ ತಜ್ಞರ ಸಮಿತಿಯು ಪ್ರವೇಶಗಳನ್ನು ಪರಿಶೀಲಿಸುತ್ತದೆ ಮತ್ತು ಪ್ರತಿ ವಿಭಾಗದ ಅತ್ಯುತ್ತಮ ಆವಿಷ್ಕಾರಗಳ ಪಟ್ಟಿಯನ್ನು ಪ್ರತಿವರ್ಷ ಡಿಸೆಂಬರ್ ವೇಳೆಗೆ ಕಾರ್ಯಕಾರಿ ಸಮಿತಿಗೆ ಕಳುಹಿಸುತ್ತದೆ. ಪ್ರಶಸ್ತಿಗಳ ಘೋಷಣೆಯನ್ನು ಕೆಎಸ್‌ಟಿಎ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಮತ್ತು ಕೆಎಸ್‌ಟಿಎ ವಾರ್ಷಿಕ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು

**ಅರ್ಜಿ ನಮೂನೆ**

## ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**(ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ)**

## ನಾವೀನ್ಯತೆಗಳಿಗಾಗಿ ಅರ್ಜಿಯ ವಿವರ
## ಪದವಿ ವಿದ್ಯಾರ್ಥಿಗಳಿಗೆ (ಡಾ ಎಸ್. ಕೆ. ಶಿವಕುಮಾರ್ ಪ್ರಶಸ್ತಿ) ಮತ್ತು
## ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ (ಪ್ರೊ. ಯು. ಆರ್. ರಾವ್ ಪ್ರಶಸ್ತಿ) ನಾವೀನ್ಯತೆಗಾಗಿ ಪ್ರಶಸ್ತಿಗಳು

1. ಪೂರ್ಣ ಹೆಸರು:
2. ಹುಟ್ಟಿದ ದಿನಾಂಕ ಮತ್ತು ವಯಸ್ಸು:
3. ಪ್ರಸ್ತುತ ಅಧ್ಯಯನದ ವರ್ಷ:
4. ದೂರವಾಣಿ, ಮೊಬೈಲ್ ಮತ್ತು ಇಮೇಲ್ ಐಡಿ ಸೇರಿದಂತೆ ಅರ್ಜಿದಾರರ ಅಂಚೆ ವಿಳಾಸ:
5. ಸಂಸ್ಥೆಯ ಹೆಸರು ಮತ್ತು ವಿಳಾಸ:

6. ನವೀನ ಯೋಜನೆಯ ವಿವರಗಳು:

   ಇದು ಪದವಿ (   ) ಅಥವಾ ಸ್ನಾತಕೋತ್ತರ (   ) ಯೋಜನೆಯ ಭಾಗವೇ?

7. ನವೀನ ಯೋಜನಾ ಕಾರ್ಯವನ್ನು ಕೈಗೊಳ್ಳಲಾದ ಸಂಸ್ಥೆ:

8. ಯೋಜನೆಗಾಗಿ ನೀವು ಯಾವುದೇ ಅನುದಾನವನ್ನು ಪಡೆದಿದ್ದೀರಾ? ಒಂದುವೇಳೆ ಪಡೆದಿದ್ದರೆ, ಧನಸಹಾಯ ನೀಡಿದ ಏಜೆನ್ಸಿಯ ಹೆಸರು:

9. ಉದ್ದೇಶಿತ ಯೋಜನೆಗಾಗಿ ನೀವು ಯಾವುದೇ ಪ್ರಶಸ್ತಿಯನ್ನು ಪಡೆದಿದ್ದೀರಾ?:

10. ಮೇಲ್ವಿಚಾರಕ / ಮಾರ್ಗದರ್ಶಿಯ ಹೆಸರು ಮತ್ತು ಸಂಪರ್ಕ ವಿವರಗಳು ದೂರವಾಣಿ, ಮೊಬೈಲ್, ಇಮೇಲ್ ಇತ್ಯಾದಿಗಳೊಂದಿಗೆ.:

11. ನವೀನ ಯೋಜನೆಯ ಶೀರ್ಷಿಕೆ:

12. ಸೃಜನಶೀಲತೆ ಮತ್ತು ವೆಚ್ಚವಾದ ಒಟ್ಟು ಮೊತ್ತವನ್ನು ತೋರಿಸುವಂತೆ ನವೀನ ಯೋಜನೆಯ ವೈಶಿಷ್ಟ್ಯಗಳನ್ನು 100 ಪದಗಳೊಳಗೆ ವಿವರಿಸಿ:

13. ನವೀನ ಪ್ರೋಟೋಟೈಪ್ ಮಾದರಿ ಅಥವಾ ಅಭಿವೃದ್ಧಿಪಡಿಸಲಾದ ಉತ್ಪನ್ನದ ಪ್ರಮುಖ ಲಕ್ಷಣಗಳು, ನವೀನ ಅಂಶಗಳು, ವಿನ್ಯಾಸದ ವೈಶಿಷ್ಟ್ಯ ಮತ್ತು ಸಮಾಜಕ್ಕೆ ಉಪಯುಕ್ತತೆಗಳನ್ನು 250 ಪದಗಳೊಳಗೆ ವಿವರಿಸಿ (ದಯವಿಟ್ಟು ಪ್ರತ್ಯೇಕ ಪುಟವನ್ನು ಅನುಬಂಧವಾಗಿ ಲಗತ್ತಿಸಿ):

14. ನೀವು ಎಂದಾದರೂ ಬಂಧನಕ್ಕೆ / ಕಾನೂನು ಕ್ರಮಕ್ಕೆ ಒಳಗಾಗಿದ್ದೀರಾ / ನ್ಯಾಯಾಲಯದಿಂದ ತಪ್ಪಿತಸ್ಥರೆಂದು ಘೋಷಿಸಲ್ಪಟ್ಟಿದ್ದೀರಾ?:

    (ಹೌದು ಅಥವಾ ಇಲ್ಲ ಎಂದು ನಿರ್ದಿಷ್ಟಪಡಿಸಿ)

**ಘೋಷಣೆ**

ಮೇಲೆ ನೀಡಲಾದ ಮಾಹಿತಿಯು ನನ್ನ ಜ್ಞಾನ ಮತ್ತು ನಂಬಿಕೆಗೆ ಅನುಗುಣವಾಗಿ ಸತ್ಯ, ಸಂಪೂರ್ಣ ಮತ್ತು ಸರಿಯಾಗಿದೆ ಎಂದು ನಾನು ಈ ಮೂಲಕ ಘೋಷಿಸುತ್ತೇನೆ. ಪಕ್ಷಪಾತ ತೋರಿಸಲು ಪ್ರಭಾವ ಬೀರುವ ಯಾವುದೇ ಪ್ರಯತ್ನವನ್ನು ಅನರ್ಹತೆ ಎಂದು ಪರಿಗಣಿಸಲಾಗುತ್ತದೆ ಮತ್ತು ಅಂತಹ ವ್ಯಕ್ತಿಯ ನವೀನ ಯೋಜನೆಯನ್ನು ಯಾವುದೇ ಮಾಹಿತಿಯಿಲ್ಲದೆ ತಿರಸ್ಕರಿಸಲಾಗುತ್ತದೆ ಎನ್ನುವುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ.

ಸ್ಥಳ: (ಹೆಸರು)

ದಿನಾಂಕ: ಸಹಿ

**ಅರ್ಜಿ ನಮೂನೆ**

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**(ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ)**

## ಜನಸಾಮಾನ್ಯರಿಂದ ನಾವೀನ್ಯತೆಗಳಿಗಾಗಿ ಅರ್ಜಿಯ ವಿವರ

1. ಪೂರ್ಣ ಹೆಸರು:
2. ಹುಟ್ಟಿದ ದಿನಾಂಕ ಮತ್ತು ವಯಸ್ಸು:
3. ಪ್ರಸ್ತುತ ಕೆಲಸದ ಸ್ಥಳ (ಯಾವುದಾದರೂ ಇದ್ದರೆ), ವಿವರಗಳೊಂದಿಗೆ;
4. ದೂರವಾಣಿ, ಮೊಬೈಲ್ ಮತ್ತು ಇಮೇಲ್ ಸೇರಿದಂತೆ ಅರ್ಜಿದಾರರ ಹೆಸರು ಮತ್ತು ಸಂಪರ್ಕ ವಿಳಾಸ:
5. ಯೋಜನಾ ಕಾರ್ಯವನ್ನು ಯಾವುದಾದರೂ ಸಂಸ್ಥೆಯಲ್ಲಿ ಕೈಗೊಳ್ಳಲಾಗಿದೆಯೇ??:
6. ಯೋಜನೆಗಾಗಿ ನೀವು ಯಾವುದೇ ಅನುದಾನವನ್ನು ಪಡೆದಿದ್ದೀರಾ? ಒಂದುವೇಳೆ ಪಡೆದಿದ್ದರೆ, ಧನಸಹಾಯ ನೀಡಿದ ಏಜೆನ್ಸಿಯ ಹೆಸರು:
7. ಉದ್ದೇಶಿತ ಯೋಜನೆಗಾಗಿ ನೀವು ಯಾವುದೇ ಪ್ರಶಸ್ತಿಯನ್ನು ಪಡೆದಿದ್ದೀರಾ?:
8. ನವೀನ ಯೋಜನೆಯ ಶೀರ್ಷಿಕೆ:
9. ಸೃಜನಶೀಲತೆ ಮತ್ತು ವೆಚ್ಚವಾದ ಒಟ್ಟು ಮೊತ್ತವನ್ನು ತೋರಿಸುವಂತೆ ನವೀನ ಯೋಜನೆಯ ವೈಶಿಷ್ಟ್ಯಗಳನ್ನು 100 ಪದಗಳೊಳಗೆ ವಿವರಿಸಿ:
10. ನವೀನ ಪ್ರೋಟೋಟೈಪ್ ಮಾದರಿ ಅಥವಾ ಅಭಿವೃದ್ಧಿಪಡಿಸಲಾದ ಉತ್ಪನ್ನದ ಪ್ರಮುಖ ಲಕ್ಷಣಗಳು, ನವೀನ ಅಂಶಗಳು, ವಿನ್ಯಾಸದ ವೈಶಿಷ್ಟ್ಯ ಮತ್ತು ಸಮಾಜಕ್ಕೆ ಉಪಯುಕ್ತತೆಗಳನ್ನು 250 ಪದಗಳೊಳಗೆ ವಿವರಿಸಿ (ದಯವಿಟ್ಟು ಪ್ರತ್ಯೇಕ ಪುಟವನ್ನು ಅನುಬಂಧವಾಗಿ ಲಗತ್ತಿಸಿ):
11. ನೀವು ಎಂದಾದರೂ ಬಂಧನಕ್ಕೆ / ಕಾನೂನು ಕ್ರಮಕ್ಕೆ ಒಳಗಾಗಿದ್ದೀರಾ / ನ್ಯಾಯಾಲಯದಿಂದ ತಪ್ಪಿತಸ್ಥರೆಂದು ಘೋಷಿಸಲ್ಪಟ್ಟಿದ್ದೀರಾ?
    (ಹೌದು ಅಥವಾ ಇಲ್ಲ ಎಂದು ನಿರ್ದಿಷ್ಟಪಡಿಸಿ)

**ಘೋಷಣೆ**

ಮೇಲೆ ನೀಡಲಾದ ಮಾಹಿತಿಯು ನನ್ನ ಜ್ಞಾನ ಮತ್ತು ನಂಬಿಕೆಗೆ ಅನುಗುಣವಾಗಿ ಸತ್ಯ, ಸಂಪೂರ್ಣ ಮತ್ತು ಸರಿಯಾಗಿದೆ ಎಂದು ನಾನು ಈ ಮೂಲಕ ಘೋಷಿಸುತ್ತೇನೆ. ಯೋಜನೆಯ ಕೆಲಸವು ಯಾವುದೇ ಸಂಸ್ಥೆಯಲ್ಲಿ ನಡೆದಿರಬಾರದು, ಹಾಗೂ ಪಕ್ಷಪಾತ ತೋರಿಸಲು ಪ್ರಭಾವ ಬೀರುವ ಯಾವುದೇ ಪ್ರಯತ್ನವನ್ನು ಅನರ್ಹತೆ ಎಂದು ಪರಿಗಣಿಸಲಾಗುತ್ತದೆ ಮತ್ತು ಅಂತಹ ವ್ಯಕ್ತಿಯ ನವೀನ ಯೋಜನೆಯನ್ನು ಯಾವುದೇ ಮಾಹಿತಿಯಿಲ್ಲದೆ ತಿರಸ್ಕರಿಸಲಾಗುತ್ತದೆ ಎನ್ನುವುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ.

ಸ್ಥಳ: (ಹೆಸರು)

ದಿನಾಂಕ: ಸಹಿ

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು

## III. ವಿಜ್ಞಾನ ಲೋಕ ಮತ್ತು ಇ–ಸುದ್ದಿಪತ್ರಕ್ಕಾಗಿ ಮಾರ್ಗಸೂಚಿಗಳು

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗವಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ 2005ರಿಂದ ಕಾರ್ಯನಿರ್ವಹಿಸುತ್ತಿದ್ದು, ವಿಜ್ಞಾನ ಸಂವಹನ, ತಂತ್ರಜ್ಞಾನ ಪ್ರಸಾರ, ಸಾಮಾಜಿಕ ಲಾಭಕ್ಕಾಗಿ ನಾವೀನ್ಯತೆ ಮತ್ತು ಉದ್ಯಮಶೀಲತೆಗಳನ್ನು ಬೆಳೆಸುವುದು, ಪ್ರತಿಭೆಗಳನ್ನು ಗುರುತಿಸುವುದು ಮತ್ತು ಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಾಮರ್ಥ್ಯ ವೃದ್ಧಿ ಹಾಗೂ ರಾಜ್ಯಕ್ಕೆ ಎಸ್ಟಿಐ ಕಾರ್ಯನೀತಿ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮೂಲಕ ನಾಗರಿಕ ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಉದ್ದೇಶ ಹೊಂದಿದೆ.

ವಿಜ್ಞಾನ ಸಂವಹನಕ್ಕೆ ಪ್ರಕಟಣೆಗಳು ಪ್ರಮುಖವಾಗಿರುವುದರಿಂದ, ಅಕಾಡೆಮಿಯು ರಾಜ್ಯವ್ಯಾಪಿ ವಿತರಣೆಯಿರುವ ವಿಜ್ಞಾನ ಲೋಕ ದ್ವೈಮಾಸಿಕ ಕನ್ನಡ ಪತ್ರಿಕೆಯನ್ನು ಒಂದು ದಶಕಕ್ಕೂ ಹೆಚ್ಚು ಸಮಯದಿಂದ ಪ್ರಕಟಿಸುತ್ತಿದೆ. ತ್ರೈಮಾಸಿಕ ಇ–ಸುದ್ದಿಪತ್ರ, ವಿಜ್ಞಾನ ವಾಹಿನಿಯನ್ನು ಕೆಎಸ್ಟಿಎ ಜಾಲತಾಣದಲ್ಲಿ ಜೂನ್ 2020ರಿಂದ ಪ್ರಾರಂಭಿಸಲಾಗಿದೆ.

**1. ವಿಜ್ಞಾನಲೋಕ**

1.1 ವಿಜ್ಞಾನಲೋಕ ದ್ವೈಮಾಸಿಕ ಕನ್ನಡ ಪತ್ರಿಕೆಯ ಸ್ವರೂಪ ಹೀಗಿರುತ್ತದೆ : ವಿಷಯ ಸೂಚಿ, ಸಂಪಾದಕೀಯ ಸಮಿತಿ ಇತ್ಯಾದಿಗಳೊಂದಿಗೆ ಮೊದಲ ಪುಟ; ಸಂಪಾದಕೀಯದ ಒಂದು ಪುಟ (ಮುಖ್ಯ ಸಂಪಾದಕ ಮತ್ತು ಅತಿಥಿ ಸಂಪಾದಕರು ಪರ್ಯಾಯವಾಗಿ); ಆಹ್ವಾನಿತ ವಿಮರ್ಶಾ ಲೇಖನ (6 ಪುಟಗಳು); ಆಹ್ವಾನಿತ ಜನಪ್ರಿಯ ವಿಜ್ಞಾನ ಲೇಖನಗಳು (ತಲಾ ನಾಲ್ಕು ಪುಟಗಳ 6 ಲೇಖನಗಳು); ಪುಸ್ತಕ ವಿಮರ್ಶೆಯ ಒಂದು ಪುಟ; ವಿಜ್ಞಾನ ರಸಪ್ರಶ್ನೆಯ ಒಂದು ಪುಟ; ಪ್ರಸ್ತುತ ವಿಜ್ಞಾನ ಸುದ್ದಿಗಳ 2 ಪುಟಗಳು; ಹೆಸರಾಂತ ವಿಜ್ಞಾನಿಗಳ ಜೀವನಚಿತ್ರದ ಒಂದು ಪುಟ; ಕರ್ನಾಟಕದ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಪರಿಚಯದ 2 ಪುಟಗಳು; ಮತ್ತು ಓದುಗರ ಪ್ರತಿಕ್ರಿಯೆಯ ಒಂದು ಪುಟ, ಒಟ್ಟಾರೆಯಾಗಿ ಪ್ರತಿ ಸಂಚಿಕೆಗೆ 40 ಪುಟಗಳು

1.2 ವಿಶ್ವವಿದ್ಯಾನಿಲಯಗಳು, ಸಂಶೋಧನಾ ಸಂಸ್ಥೆಗಳು, ಉದ್ಯಮ, ಪ್ರಗತಿಪರ ಉದ್ಯಮಿಗಳು, ಶ್ರೇಷ್ಠ ಮಾಧ್ಯಮ ಬರಹಗಾರರು ಮತ್ತಿತರರು ಸೇರಿದಂತೆ ವಿವಿಧ ವಿಜ್ಞಾನ ಕ್ಷೇತ್ರಗಳಲ್ಲಿನ ಬರಹಗಾರರ ಡೇಟಾಬೇಸ್ ಅನ್ನು ಅಕಾಡೆಮಿಯ ಅಭಿವೃದ್ಧಿಪಡಿಸಬಹುದು; ಗುಣಮಟ್ಟದ ಛಾಯಾಚಿತ್ರಗಳ ಭಂಡಾರವನ್ನು ಅಭಿವೃದ್ಧಿಪಡಿಸುವುದು

1.3 ವಿಶ್ವದೆಲ್ಲೆಡೆ ಇರಬಹುದಾದ ಕರ್ನಾಟಕ ಮೂಲದ ವಿಜ್ಞಾನಿಗಳನ್ನು ಆಹ್ವಾನಿಸುವ ಕ್ರಮಗಳು, ಮತ್ತು ಲೇಖನಗಳು ಇಂಗ್ಲಿಷಿನಲ್ಲಿದ್ದರೆ ಅವುಗಳ ಅನುವಾದ

1.4 ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳು ಸೇರಿದಂತೆ ಯುವ ಬರಹಗಾರರನ್ನು ಆಕರ್ಷಿಸುವ ಮತ್ತು ಪ್ರೋತ್ಸಾಹಿಸುವ ಕ್ರಮಗಳು; ಅಗತ್ಯ ಆಧಾರಿತ ಮಾರ್ಗದರ್ಶನ ಮತ್ತು ಕಾರ್ಯಾಗಾರಗಳು

1.5 ಅಕಾಡೆಮಿಯ ಕಾರ್ಯಕಾರಿ ಸಮಿತಿಯ ಸದಸ್ಯರು ಪ್ರತಿವರ್ಷ 2–3 ಲೇಖನಗಳನ್ನು ನೀಡುತ್ತಾರೆ, ಹಾಗೆಯೇ ಪತ್ರಿಕೆಗೆ ಹೆಚ್ಚಿನ ಬರಹಗಾರರನ್ನು ಪರಿಚಯಿಸುತ್ತಾರೆ

1.6 ಪ್ರತಿ ವರ್ಷದ ಪ್ರಮುಖ ಲೇಖನಗಳಿರುವ ವಿಶೇಷ ಸಂಚಿಕೆಯ ಪ್ರಕಟಣೆ

1.7 ಓದುಗರ ಪ್ರತಿಕ್ರಿಯೆಯನ್ನು ಪಡೆದ ನಂತರ, ಅಗತ್ಯವಿದ್ದರೆ, ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯಿಂದ ಪತ್ರಿಕೆಯ ಚಂದಾದಾರಿಕೆಗಾಗಿ ನಿರ್ದೇಶನದೊಂದಿಗೆ, ಪತ್ರಿಕೆಯನ್ನು ಶಿಕ್ಷಣ ಸಂಸ್ಥೆಗಳಿಗೆ ವಿತರಿಸುವುದು

1.8 ಪತ್ರಿಕೆಯನ್ನು ಚಂದಾ ಆಧಾರಿತವನ್ನಾಗಿಸುವುದು : ಬಿಡಿಪ್ರತಿಗೆ ರೂ. 50/–; ವೈಯಕ್ತಿಕ ಮತ್ತು ಸಾಂಸ್ಥಿಕ ಚಂದಾದಾರರಿಗೆ ಕ್ರಮವಾಗಿ ರೂ. 300/– ಮತ್ತು ರೂ. 500/– ವಾರ್ಷಿಕ ಚಂದಾ; ಪತ್ರಿಕೆಯ ಆಜೀವ ಚಂದಾದಾರಿಕೆಗಾಗಿ ರೂ. 4,000/– ಮತ್ತು ರೂ. 5,000/–

1.9 ಕಾಲಕಾಲಕ್ಕೆ ಬರಹಗಾರರ ಗೌರವಧನದಲ್ಲಿ ರೂ. 2,000/– ವರೆಗೆ ಹೆಚ್ಚಳ; ಮತ್ತು ಅಕಾಡೆಮಿಯ ಸಂಪಾದಕೀಯ ಸಮಿತಿ ಅನುಮೋದಿಸಿದಂತೆ

1.10 ದೇಶ ಮತ್ತು ರಾಜ್ಯದ ಇತರ ವಿಜ್ಞಾನ ಪತ್ರಿಕೆಗಳೊಂದಿಗೆ ನೆಟ್ವರ್ಕಿಂಗ್

## 2. ವಿಜ್ಞಾನವಾಹಿನಿ

2.1 ಕನ್ನಡ ಮತ್ತು ಇಂಗ್ಲಿಷ್ನಲ್ಲಿ, ಕೆಎಸ್ಟಿಎ ಜಾಲತಾಣದಲ್ಲಿ, ಪ್ರಕಟವಾಗುವ ವಿಜ್ಞಾನ ವಾಹಿನಿ ತ್ರೈಮಾಸಿಕ ಇ–ಸುದ್ದಿಪತ್ರದ ಸ್ವರೂಪ ಹೀಗಿರುತ್ತದೆ: ವಿಷಯಸೂಚಿ ಮತ್ತು ಅಧ್ಯಕ್ಷರ ಟಿಪ್ಪಣಿಯೊಂದಿಗೆ ಮೊದಲ ಪುಟ; ಕಾರ್ಯಕಾರಿ ಸಮಿತಿಯ ಸದಸ್ಯರಿಂದ ಆಹ್ವಾನಿತ ಲೇಖನಗಳ 4–6 ಪುಟಗಳು; ಘಟನೆಗಳು ಮತ್ತು ಅಕಾಡೆಮಿಯ ಮುಂಬರುವ ಕಾರ್ಯಕ್ರಮಗಳ 2 ಪುಟಗಳು; ಪ್ರಪಂಚದೆಲ್ಲೆಡೆಯ ಪ್ರಸ್ತುತ ವಿಜ್ಞಾನ ಸುದ್ದಿಗಳ ಒಂದು ಪುಟ, ಒಟ್ಟಾರೆಯಾಗಿ ಪ್ರತಿ ಸಂಚಿಕೆಗೆ 10 ಪುಟಗಳು

2.2 ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೆರವಿನೊಂದಿಗೆ ಸಂಪಾದಕರು ಸೂಕ್ತವಾದ ತುಣುಕುಗಳು ಮತ್ತು ಛಾಯಾಚಿತ್ರಗಳನ್ನು ಸಂಯೋಜಿಸುತ್ತಾರೆ; ಇದು ಆಂತರಿಕ ಇ–ಪ್ರಕಟಣೆಯಾಗಿರುವುದರಿಂದ, ಯಾವುದೇ ಬಾಹ್ಯ ವೆಚ್ಚಗಳು ಇರುವುದಿಲ್ಲ

## 3. ಆಡಳಿತ / ಹಣಕಾಸು

3.1 ವಜ್ಞಾನಲೋಕಕ್ಕಾಗಿ, ಬರಹಗಾರರುಮತ್ತು ವಿಷಯಗಳನ್ನು ಗುರುತಿಸುವ; ವಿಷಯ ಅಭಿವೃದ್ಧಿ, ಪತ್ರಿಕೆಯ ಪ್ರಸ್ತುತಿ ಮತ್ತು ಸಂಬಂಧಿತ ಅಂಶಗಳ ಪ್ರಕ್ರಿಯೆಯಲ್ಲಿ ಪ್ರಧಾನ ಸಂಪಾದಕರು ಮತ್ತು ಸಂಪಾದಕೀಯ ಸಮಿತಿಯು ಭಾಗಿಯಾಗಲಿದೆ

3.2 ಪತ್ರಿಕೆಯ ಮುದ್ರಣ ಮತ್ತು ಪ್ರಕಟಣೆಯ ಪ್ರಕ್ರಿಯೆಯು ಕರ್ನಾಟಕ ಸರ್ಕಾರದ ನಿಗದಿತ ಕಾರ್ಯವಿಧಾನಗಳ ಪ್ರಕಾರ ನಡೆಯಲಿದೆ

3.3 ಸಂಪಾದಕೀಯ ಸಮಿತಿಯು ಶಿಫಾರಸು ಮಾಡಿದಂತೆ ಪತ್ರಿಕೆಯ ತಯಾರಿ ಮತ್ತು ಪ್ರಕಟಣೆಗೆ ಕೆಎಸ್ಟಿಎ ನೀಡುವ ಹಣಕಾಸಿನ ನೆರವು ನಿಬಂಧನೆಗಳ ಪ್ರಕಾರ ಇರುತ್ತದೆ

3.4 2021 ರ ಏಪ್ರಿಲ್ನಿಂದ, ಚಂದಾದಾರಿಕೆ ಸೇರಿದಂತೆ ವಿತರಣೆ ಮತ್ತು ಮಾರಾಟದ ಕಾರ್ಯವಿಧಾನಗಳು ಮೇಲೆ ವಿವರಿಸಿದಂತೆ ಇರಲಿವೆ

3.5 ಹಕ್ಕುಸ್ವಾಮ್ಯಗಳು ಮತ್ತು ಇತರ ನಿಬಂಧನೆಗಳ ವಿಷಯದಲ್ಲಿ ಮುದ್ರಣ ಮಾಧ್ಯಮದ ತಯಾರಿ ಮತ್ತು ವಿತರಣೆಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ನಿಯಮಗಳು ಮತ್ತು ಷರತ್ತುಗಳು ಅನ್ವಯವಾಗುತ್ತವೆ

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು

## IV. ಪುಸ್ತಕಗಳ ಪ್ರಕಟಣೆಗೆ ಮಾರ್ಗಸೂಚಿಗಳು

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗವಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ 2005ರಿಂದ ಕಾರ್ಯನಿರ್ವಹಿಸುತ್ತಿದ್ದು, ವಿಜ್ಞಾನ ಸಂವಹನ, ತಂತ್ರಜ್ಞಾನ ಪ್ರಸಾರ, ಸಾಮಾಜಿಕ ಲಾಭಕ್ಕಾಗಿ ನಾವೀನ್ಯತೆ ಮತ್ತು ಉದ್ಯಮಶೀಲತೆಗಳನ್ನು ಬೆಳೆಸುವುದು, ಪ್ರತಿಭೆಗಳನ್ನು ಗುರುತಿಸುವುದು ಮತ್ತು ಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಾಮರ್ಥ್ಯ ವೃದ್ಧಿ ಹಾಗೂ ರಾಜ್ಯಕ್ಕೆ ಎಸ್ಟಿಐ ಕಾರ್ಯನೀತಿ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮೂಲಕ ನಾಗರಿಕ ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಉದ್ದೇಶ ಹೊಂದಿದೆ.

ವಿಜ್ಞಾನ ಸಂವಹನದಲ್ಲಿ ಪುಸ್ತಕಗಳ ಮಹತ್ವವನ್ನು ಗಮನದಲ್ಲಿಟ್ಟುಕೊಂಡು, ಪ್ರಖ್ಯಾತ ವಿಜ್ಞಾನ ಬರಹಗಾರರ ಕೃತಿಗಳ ರೂಪುರೇಷೆ / ಸಾರಾಂಶ ಮತ್ತು ಹಸ್ತಪ್ರತಿಗಳ ಪರಿಶೀಲನೆಯನ್ನು ಸಾಧ್ಯವಾಗಿಸುವ ಮೂಲಕ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳ ಪ್ರಕಟಣೆಯನ್ನು ಉತ್ತೇಜಿಸುತ್ತದೆ.

**1. ಸಾಮಾನ್ಯ ಸೂಚನೆಗಳು**

1.1 ಪ್ರಖ್ಯಾತ ವಿಜ್ಞಾನಿಗಳ ಭಾಷಣ ಸೇರಿದಂತೆ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಪ್ರಮುಖ ಸಮ್ಮೇಳನಗಳ ನಡೆವಳಿಗಳನ್ನು ಅಕಾಡೆಮಿಯು ಪ್ರಕಟಿಸುತ್ತದೆ

1.2 ವೈಯಕ್ತಿಕ ಲೇಖಕರ ಪುಸ್ತಕಗಳಿಗೆ ಸಂಬಂಧಿಸಿದಂತೆ, ಆಸಕ್ತ ಲೇಖಕರು 1000 ಪದಗಳಿಗೆ ಮೀರದಂತೆ ಪ್ರಸ್ತಾವಿತ ಪುಸ್ತಕಗಳ ರೂಪುರೇಷೆ / ಸಾರಾಂಶವನ್ನು ವರ್ಷವಿಡೀ ಸಲ್ಲಿಸಬಹುದು

1.3 ಪ್ರಸ್ತಾವಿತ ಪುಸ್ತಕಗಳ ರೂಪುರೇಷೆ / ಸಾರಾಂಶವನ್ನು ಪ್ರಖ್ಯಾತ ವಿಜ್ಞಾನ ಬರಹಗಾರರು ಪರಿಶೀಲಿಸುತ್ತಾರೆ ಮತ್ತು ಪ್ರಕಟಣೆಗಾಗಿ ಪುಸ್ತಕದ ಸೂಕ್ತತೆಯನ್ನು ಮೂರು ತಿಂಗಳೊಳಗೆ ಲೇಖಕರಿಗೆ ತಿಳಿಸಲಾಗುತ್ತದೆ.

1.4 ಮುಂದುವರಿದು, ಲೇಖಕರು ಕೃತಿಯ ಪ್ರಕಟಣೆಗಾಗಿ ಪ್ರಕಾಶಕರನ್ನು ಕೆಎಸ್‌ಟಿಎಯ ಈ ಪ್ರಶಂಸಾ ಪತ್ರದೊಂದಿಗೆ ಸಂಪರ್ಕಿಸಬಹುದು. ಪ್ರಖ್ಯಾತ ವಿಜ್ಞಾನ ಬರಹಗಾರರ ಸಂಭಾವ್ಯ ಮಾರ್ಗದರ್ಶನವನ್ನು ಒದಗಿಸುವುದಕ್ಕೂ ಅಕಾಡೆಮಿಯು ಸಹಕರಿಸುತ್ತದೆ

1.5 ಮಾರ್ಗದರ್ಶನಕ್ಕಾಗಿ, ಪ್ರಕಾಶಕರನ್ನು ಸಂಪರ್ಕಿಸುವ ಮೊದಲು, ಅಗತ್ಯವಿದ್ದರೆ, ಶಿಫಾರಸು ಮಾಡಲಾದ ಶೀರ್ಷಿಕೆಗಳ ಹಸ್ತಪ್ರತಿಗಳನ್ನು ಲೇಖಕರು ಹೆಚ್ಚಿನ ಮಾರ್ಗದರ್ಶನಕ್ಕಾಗಿ ಸಲ್ಲಿಸಬಹುದು

1.6 ಮೂರು ವಿಮರ್ಶಕರಿಂದ ರೂಪುರೇಷೆ / ಸಾರಾಂಶದ ಮೌಲ್ಯಮಾಪನಕ್ಕಾಗಿ ಗೌರವಧನವಾಗಿ, ಕೆಎಸ್‌ಟಿಎ ರೂ. 3,000/– (ತಲಾ ರೂ. 1,000/–); ಮತ್ತು ಪ್ರತಿಯೊಂದು ಹಸ್ತಪ್ರತಿಯ ಪರಿಶೀಲನೆ ಮತ್ತು ಅರ್ಜಿದಾರ ಲೇಖಕರಿಗೆ ಮಾರ್ಗದರ್ಶನಕ್ಕಾಗಿ ಪ್ರತಿ ಮಾರ್ಗದರ್ಶಕರಿಗೆ ರೂ. 5,000/– ಗೌರವಧನವನ್ನು ನೀಡುತ್ತದೆ

1.7 ಈ ಪ್ರಕ್ರಿಯೆಯುಯುವ / ಹೊಸ / ಸಂಭಾವ್ಯಬರಹಗಾರರಿಗೆ, ರೂಪುರೇಷೆ / ಸಾರಾಂಶ ಹಂತ ಮತ್ತು ಹಸ್ತಪ್ರತಿ ವಿಮರ್ಶೆ ಹಂತದಲ್ಲಿ, ಆಸಕ್ತ ಪ್ರಕಾಶಕರನ್ನು ಸಂಪರ್ಕಿಸಲು ಅನುಕೂಲ ಮಾಡಿಕೊಡುವ ಉದ್ದೇಶ ಹೊಂದಿದೆ. ಆದಾಗ್ಯೂ, ಕೆಎಸ್‌ಟಿಎ ವೈಯಕ್ತಿಕ ಲೇಖಕರ ಪುಸ್ತಕಗಳ ಪ್ರಕಟಣೆಯನ್ನು ಕೈಗೊಳ್ಳುವುದಿಲ್ಲ

**2 ಹೊರತುಪಡಿಸುವಿಕೆಗಳು**

2.1 ತಾಂತ್ರಿಕ ವರದಿಗಳು, ಈ ಹಿಂದೆ ಪ್ರಕಟವಾದ ಕೃತಿಗಳು (ಹಿಂದೆ ಪ್ರಕಟವಾದ ಲೇಖನಗಳ ಸಂಗ್ರಹ ಸೇರಿದಂತೆ) ಮತ್ತು ಯಾವುದೇ ರೀತಿಯ ಸರ್ಕಾರಿ ನಡವಳಿಗಳ ಪ್ರಕಟಣೆ

2.2 ಶೈಕ್ಷಣಿಕ ಪಿರಮಿಡ್‌ನಲ್ಲಿ ಯಾವುದೇ ಮಟ್ಟದ ಅನುವಾದಿತ ಪಠ್ಯ ಪುಸ್ತಕಗಳು

2.3 ಹಿಂದೆ ತಿರಸ್ಕರಿಸಲಾದ ಹಸ್ತಪ್ರತಿಯ ಮರುಸಲ್ಲಿಕೆ

2.4 ಯಾವುದೇ ಕ್ಷೇತ್ರದಲ್ಲಿ ಪ್ರಬಂಧದ ಅನುವಾದ ಮತ್ತು ಯಾವುದೇ ರೀತಿಯ ಕೃತಿಚೌರ್ಯವು ಲೇಖಕರನ್ನು ಜೀವಮಾನದ ಅವಧಿಗೆ ಅನರ್ಹಗೊಳಿಸುತ್ತದೆ

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು

## V. ಕಾರ್ಯನೀತಿ / ಕಾರ್ಯತಂತ್ರ / ಅಪ್ರೋಚ್ / ಸ್ಟೇಟಸ್ ಪೇಪರ್‌ಗಳಿಗಾಗಿ ಬ್ರೈನ್‌ಸ್ಟಾರ್ಮಿಂಗ್ ಸಮಾವೇಶಗಳಿಗಾಗಿ ಮಾರ್ಗಸೂಚಿಗಳು

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗವಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ 2005ರಿಂದ ಕಾರ್ಯನಿರ್ವಹಿಸುತ್ತಿದ್ದು, ವಿಜ್ಞಾನ ಸಂವಹನ, ತಂತ್ರಜ್ಞಾನ ಪ್ರಸಾರ, ಸಾಮಾಜಿಕ ಲಾಭಕ್ಕಾಗಿ ನಾವೀನ್ಯತೆ ಮತ್ತು ಉದ್ಯಮಶೀಲತೆಗಳನ್ನು ಬೆಳೆಸುವುದು, ಪ್ರತಿಭೆಗಳನ್ನು ಗುರುತಿಸುವುದು ಮತ್ತು ಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಾಮರ್ಥ್ಯ ವೃದ್ಧಿ ಹಾಗೂ ರಾಜ್ಯಕ್ಕೆ ಎಸ್ಟಿಐ ಕಾರ್ಯನೀತಿ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮೂಲಕ ನಾಗರಿಕ ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಉದ್ದೇಶ ಹೊಂದಿದೆ.

ಸರಿಯಾದ ಪ್ರಚಾರದೊಂದಿಗೆ, ಸರ್ಕಾರಿ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು, ಶಿಕ್ಷಣ ಸಂಸ್ಥೆಗಳು, ಕೈಗಾರಿಕೆಗಳು ಮತ್ತು ಕಾರ್ಪೊರೇಟ್‌ಗಳು, ಎನ್‌ಜಿಒಗಳು ಸೇರಿದಂತೆ ಸಂಬಂಧಿತ ಪಾಲುದಾರರ ನಡುವೆ ಪ್ರಸಾರಕ್ಕಾಗಿ, ಸಮಾಜಕ್ಕೆ ಮುಖ್ಯವಾದ ಪ್ರಸ್ತುತ ವಿಷಯಗಳ ಕುರಿತು ನೀತಿ / ಕಾರ್ಯತಂತ್ರ / ಅಪ್ರೋಚ್ / ಸ್ಟೇಟಸ್ ಪೇಪರ್‌ಗಳನ್ನು, ತ್ರೈಮಾಸಿಕ ಆಧಾರದ ಮೇಲೆ ಒಂದು ವರ್ಷದಲ್ಲಿ ನಾಲ್ಕು ಬಾರಿಯಂತೆ, ರೂಪಿಸಲು ಕೆಎಸ್‌ಟಿಎ ಪ್ರಸ್ತಾಪಿಸಿದೆ.

**1. ವಿಷಯಗಳು ಮತ್ತು ಸಂಚಾಲಕರು**

1.1 ಪೇಪರ್‌ಗಳ ವಿಷಯಗಳನ್ನು ಕರ್ನಾಟಕ ಸರ್ಕಾರ, ಕೆಎಸ್‌ಟಿಎ ಕಾರ್ಯಕಾರಿ ಸಮಿತಿ ಅಥವಾ ರಾಜ್ಯದ ಆರ್ಥಿಕತೆಯ ವಿವಿಧ ಕ್ಷೇತ್ರಗಳಲ್ಲಿನ ಪಾಲುದಾರರು ಪ್ರಸ್ತಾಪಿಸಬಹುದು

1.2 ಪ್ರತಿ ವಿಷಯಕ್ಕೂ ಪ್ರಖ್ಯಾತ ಶಿಕ್ಷಣ ತಜ್ಞರು ಮತ್ತು ಉದ್ಯೋಗನಿರತರನ್ನು ಸಂಪರ್ಕಿಸಲಾಗುತ್ತದೆ ಮತ್ತು ಪರಸ್ಪರ ಒಪ್ಪಿಗೆಯೊಂದಿಗೆ ಸಂಚಾಲಕರೆಂದು ಗೊತ್ತುಪಡಿಸಲಾಗುತ್ತದೆ

**2. ವೈಜ್ಞಾನಿಕ / ತಾಂತ್ರಿಕ**

2.1 ಸಂಬಂಧಿತ ಸಂಪನ್ಮೂಲ ವ್ಯಕ್ತಿಗಳನ್ನು ಸಂಚಾಲಕರು ಗುರುತಿಸಬಹುದು (ಸುಮಾರು 20) ಹಾಗೂ ಬ್ಯಾಕ್‌ಗ್ರೌಂಡ್ ಪೇಪರ್ ಅನ್ನು ಸಿದ್ಧಪಡಿಸಬಹುದು; ವಿಷಯ ಮತ್ತು ಫಲಿತಾಂಶದ ಮೇಲೆ ಗಮನವನ್ನು ಕೇಂದ್ರೀಕರಿಸುವ ಮೂಲಕ ಕಡತವನ್ನು ರೂಪಿಸುವಲ್ಲಿ ಅವರ ನೆರವನ್ನು ಬಳಸಿಕೊಳ್ಳಲು ಬ್ರೈನ್‌ಸ್ಟಾರ್ಮಿಂಗ್ ಸಮಾವೇಶವನ್ನು ಆಯೋಜಿಸಬಹುದು.

2.2 ಪ್ರಮುಖ ವಿಷಯಗಳನ್ನು ಸ್ಪಷ್ಟವಾಗಿ ನೀತಿ ಯೋಜಕರ ಗಮನಕ್ಕೆ ತರುವ ಕರಡು ಪೇಪರ್ ಅನ್ನು ಸಂಚಾಲಕರು ಸಿದ್ಧಪಡಿಸಿ, ಒಂದು ತಿಂಗಳ ಅವಧಿಯೊಳಗೆ ಅಕಾಡೆಮಿಗೆ ಸಲ್ಲಿಸಬೇಕು

2.3 ಪೇಪರ್‌ಗಳು ಉಪಯುಕ್ತವಾಗಬಲ್ಲ ಹಾಗೂ ಅಕಾಡೆಮಿಯಿಂದ ಅವನ್ನು ಕಳುಹಿಸಬೇಕಾದ ಪಾಲುದಾರರ ಪಟ್ಟಿಯನ್ನು ಕಡತದ ಜೊತೆಗೆ ಲಗತ್ತಿಸಬೇಕು

2.4 ಕೆಎಸ್‌ಟಿಎ ಈ ಪೇಪರ್‌ಗಳನ್ನು ಉದ್ದೇಶಿತ ಪಾಲುದಾರರ ನಡುವೆ ಪ್ರಸಾರ ಮಾಡಲು ಹಾಗೂ ಜಾಲತಾಣದಲ್ಲಿ ಪ್ರಕಟಿಸಲು ಮುದ್ರಿಸುತ್ತದೆ ಮತ್ತು ಪ್ರಕಾಶಿಸುತ್ತದೆ

3. **ಆಡಳಿತ / ಹಣಕಾಸು**

3.1 ಕೆಎಸ್‌ಟಿಎ ಪರಿಗಣನೆಗಾಗಿ ವರ್ಷದ ಯಾವ ಸಮಯದಲ್ಲಾದರೂ ಅರ್ಜಿಗಳನ್ನು ಕಳುಹಿಸಬಹುದು

3.2 ಮೇಲೆ ಸೂಚಿಸಿದ ಸಂಪನ್ಮೂಲ ವ್ಯಕ್ತಿಗಳು ಹಾಗೂ ಕೆಎಸ್‌ಟಿಎ ಕಾರ್ಯಕಾರಿ ಸಮಿತಿಯ ಸದಸ್ಯರೊಂದಿಗೆ ಅಕಾಡೆಮಿಯಲ್ಲಿ ಆಯೋಜಿಸಲಾಗುವ ಬ್ರೈನ್‌ಸ್ಟಾರ್ಮಿಂಗ್ ಸಮಾವೇಶವು ಒಂದು ದಿನದ ಅವಧಿಯದ್ದಾಗಿರುತ್ತದೆ

3.3 ಸಂಚಾಲಕರಿಗೆ ರೂ. 5,000/– ಗೌರವ ಧನ, ಅನುಮೋದಿತ ಭಾಗವಹಿಸುವವರ ಪ್ರಯಾಣ ವೆಚ್ಚ, ಒಂದು ದಿನದ ಸಭೆ ಮತ್ತು ಪ್ರಕಟಣೆಯ ವೆಚ್ಚಗಳು ಸೇರಿ ಈ ಉದ್ದೇಶಕ್ಕಾಗಿ ಅಕಾಡೆಮಿ ಒದಗಿಸಲಿರುವ ಬಜೆಟ್ ರೂ. 1.5 ಲಕ್ಷವನ್ನು ಮೀರುವುದಿಲ್ಲ

3.4 ಅನುಮೋದಿತ ಭಾಗವಹಿಸುವವರ ಪ್ರಯಾಣ ವೆಚ್ಚವನ್ನು ಎಸಿ II ಶ್ರೇಣಿ ರೈಲು ಶುಲ್ಕವನ್ನು ಮೀರದಂತೆ ವಾಸ್ತವಿಕ ಆಧಾರದ ಮೇಲೆ ಮರುಪಾವತಿ ಮಾಡಬಹುದು

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು

## VI. ಫೆಲೋಶಿಪ್‌ಗಳು, ಸದಸ್ಯತ್ವಗಳು, ಎಮೆರಿಟಸ್ ಕನ್ಸಲ್ಟೆಂಟ್‌ಗಳು ಮತ್ತು ಸಾಂಸ್ಥಿಕ ಸಹಯೋಗಕ್ಕಾಗಿ ಮಾರ್ಗಸೂಚಿಗಳು

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗವಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ 2005ರಿಂದ ಕಾರ್ಯನಿರ್ವಹಿಸುತ್ತಿದ್ದು, ವಿಜ್ಞಾನ ಸಂವಹನ, ತಂತ್ರಜ್ಞಾನ ಪ್ರಸಾರ, ಸಾಮಾಜಿಕ ಲಾಭಕ್ಕಾಗಿ ನಾವೀನ್ಯತೆ ಮತ್ತು ಉದ್ಯಮಶೀಲತೆಗಳನ್ನು ಬೆಳೆಸುವುದು, ಪ್ರತಿಭೆಗಳನ್ನು ಗುರುತಿಸುವುದು ಮತ್ತು ಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಾಮರ್ಥ್ಯ ವೃದ್ಧಿ ಹಾಗೂ ರಾಜ್ಯಕ್ಕೆ ಎಸ್‌ಟಿಐ ಕಾರ್ಯನೀತಿ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮೂಲಕ ನಾಗರಿಕ ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಉದ್ದೇಶ ಹೊಂದಿದೆ.

ಅಕಾಡೆಮಿಕ್ ಘಟಕವಾಗಿರುವುದರಿಂದ, ವಿಜ್ಞಾನ ಮತ್ತು ತಂತ್ರಜ್ಞಾನ, ವಿಜ್ಞಾನ ಸಂವಹನ/ ಜನಪ್ರಿಯಗೊಳಿಸುವಿಕೆ ಮತ್ತು ಪ್ರಸಾರಕ್ಕೆ ಶಿಕ್ಷಣ ತಜ್ಞರು, ಸಂಶೋಧಕರು, ಎಂಜಿನಿಯರ್‌ಗಳು, ಸಂಸ್ಥೆಗಳು ಮತ್ತು ಉದ್ಯಮದಲ್ಲಿರುವ ತಂತ್ರಜ್ಞರು ಹಾಗೂ ಭರವಸೆಯ ಯುವ ವೃತ್ತಿಪರರ ಕೊಡುಗೆಗಳನ್ನು ಗುರುತಿಸಲು ಫೆಲೋಶಿಪ್, ಸದಸ್ಯತ್ವ ಮತ್ತು ಎಮೆರಿಟಸ್ ಕನ್ಸಲ್ಟೆಂಟ್‌ಗಳ ಯೋಜನೆಯನ್ನು ಕೆಎಸ್‌ಟಿಎ ಪ್ರಸ್ತಾಪಿಸುತ್ತದೆ.

ಸಾಬೀತಾಗಿರುವ ಕೊಡುಗೆಗಳಿಗಾಗಿ ಪ್ರಮುಖ ವಿಜ್ಞಾನಿಗಳು ಮತ್ತು ತಂತ್ರಜ್ಞರನ್ನು ಅಕಾಡೆಮಿಯ ಸಂಪರ್ಕಕ್ಕೆ ತರಲು ಈ ನಿಬಂಧನೆಯನ್ನು ರೂಪಿಸಲಾಗುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿನ ಶ್ರೇಷ್ಠತೆಯನ್ನು ಗುರುತಿಸುವ ಏಕೈಕ ಉದ್ದೇಶದಿಂದ, ಅಕಾಡೆಮಿಯ ನಿಲುವನ್ನು ಕಾಪಾಡಿಕೊಳ್ಳಲು ಈ ವ್ಯವಸ್ಥೆಯನ್ನು ಸರಿಯಾದ ಕಾರ್ಯತತ್ಪರತೆಯಿಂದ ಬಳಸಬೇಕಿದೆ.

### 1. ಕೆಎಸ್‌ಟಿಎ ಕಾರ್ಯಕ್ಷೇತ್ರಗಳ ಪೋರ್ಟ್‌ಫೋಲಿಯೋ

#### 1.1 ಕೃಷಿವಿಜ್ಞಾನ

(ಕೃಷಿ, ಪಶುಸಂಗೋಪನೆ, ಮೀನುಗಾರಿಕೆ, ಅರಣ್ಯ, ಕೃಷಿ ವಿಷವಿಜ್ಞಾನ, ಮಣ್ಣು ವಿಜ್ಞಾನ, ಸಸ್ಯ ಸಂರಕ್ಷಣೆ, ಕೊಯ್ಲು ನಂತರದ ತಂತ್ರಜ್ಞಾನ, ಕೃಷಿ ಎಂಜಿನಿಯರಿಂಗ್ ಸೇರಿದಂತೆ).

#### 1.2 ಪ್ರಾಣಿ ವಿಜ್ಞಾನ

(ಸಂರಚನಾತ್ಮಕ, ಅಭಿವೃದ್ಧಿಯ, ಕ್ರಿಯಾತ್ಮಕ, ಜೆನೆಟಿಕ್ಸ್, ಪರಿಸರದ, ವರ್ತನೆಯ, ಜೀವಿವರ್ಗೀಕರಣ ಹಾಗೂ ವಿಕಸನದ ಅಂಶಗಳು ಸೇರಿದಂತೆ)

#### 1.3 ಬಯೋಕೆಮಿಸ್ಟ್ರಿ, ಬಯೋಫಿಸಿಕ್ಸ್, ಬಯೋಟೆಕ್ನಾಲಜಿ

(ಅಣು ಮತ್ತು ಕೋಶ ಜೀವವಿಜ್ಞಾನ, ಸಂರಚನಾತ್ಮಕ ಮತ್ತು ಕ್ರಿಯಾತ್ಮಕ ಅಧ್ಯಯನಗಳು, ಸೂಕ್ಷ್ಮ ಜೀವವಿಜ್ಞಾನ, ಪ್ರತಿರಕ್ಷಾ ವಿಜ್ಞಾನ ಸೇರಿದಂತೆ)

#### 1.4 ರಾಸಾಯನಿಕ ವಿಜ್ಞಾನ

(ವಿಶ್ಲೇಷಣಾತ್ಮಕ, ಅಜೈವಿಕ, ಜೈವಿಕ, ಭೌತಿಕ, ಸೈದ್ಧಾಂತಿಕ ರಸಾಯನ ವಿಜ್ಞಾನ, ಅನ್ವಯಿಕ ರಸಾಯನವಿಜ್ಞಾನ ಸೇರಿದಂತೆ)

**1.5 ಭೂ ವಿಜ್ಞಾನ**

(ವಾಯುಮಂಡಲ ವಿಜ್ಞಾನ, ಭೂ–ವಿಜ್ಞಾನ, ಸಾಗರ ವಿಜ್ಞಾನ, ಭೂಗೋಳ ವಿಜ್ಞಾನ ಸೇರಿದಂತೆ)

**1.6 ಎಂಜಿನಿಯರಿಂಗ್ ವಿಜ್ಞಾನ ಮತ್ತು ಎಂಜಿನಿಯರಿಂಗ್ ತಂತ್ರಜ್ಞಾನ**

(ಎಂಜಿನಿಯರಿಂಗ್ ಮತ್ತು ಎಂಜಿನಿಯರಿಂಗ್ ವಿಜ್ಞಾನ, ರಾಸಾಯನಿಕ ಮತ್ತು ವಸ್ತು ತಂತ್ರಜ್ಞಾನ, ಎಲೆಕ್ಟ್ರಾನಿಕ್ಸ್ ಮತ್ತು ದೂರಸಂಪರ್ಕ, ಮಾಹಿತಿ ತಂತ್ರಜ್ಞಾನ, ಉಪಕರಣ ವಿಜ್ಞಾನ ಸೇರಿದಂತೆ)

**1.7 ಗಣಿತ ವಿಜ್ಞಾನ**

(ಶುದ್ಧ ಗಣಿತ, ಅನ್ವಯಿಕ ಗಣಿತ, ಸಂಖ್ಯಾವಿಜ್ಞಾನ, ಕಂಪ್ಯೂಟರ್ / ಮಾಹಿತಿ ವಿಜ್ಞಾನ ಸೇರಿದಂತೆ)

**1.8 ವೈದ್ಯಕೀಯ ಮತ್ತು ವಿಧಿವಿಜ್ಞಾನ**

(ಮೂಲ ಮತ್ತು ಕ್ಲಿನಿಕಲ್ ವೈದ್ಯಕೀಯ ವಿಜ್ಞಾನಗಳು, ಔಷಧ ವಿಜ್ಞಾನ, ಮಾನವ ವಿಜ್ಞಾನ, ಮನೋವಿಜ್ಞಾನ ಮತ್ತು ವಿಧಿವಿಜ್ಞಾನ, ಮಾನವ ತಳಿವಿಜ್ಞಾನ, ಸಂತಾನೋತ್ಪತ್ತಿ ಜೀವವಿಜ್ಞಾನ, ನರವಿಜ್ಞಾನ, ಅಣು ವೈದ್ಯವಿಜ್ಞಾನ ಸೇರಿದಂತೆ)

**1.9 ಭೌತ ವಿಜ್ಞಾನ**

(ಖಗೋಳವಿಜ್ಞಾನ, ಖಭೌತವಿಜ್ಞಾನ, ಪ್ರಾಯೋಗಿಕ ಮತ್ತು ಸೈದ್ಧಾಂತಿಕ ಭೌತವಿಜ್ಞಾನ, ಅನ್ವಯಿಕ ಭೌತವಿಜ್ಞಾನ ಸೇರಿದಂತೆ)

**1.10 ಸಸ್ಯ ವಿಜ್ಞಾನ**

(ಸಂರಚನಾತ್ಮಕ, ಅಭಿವೃದ್ಧಿಯ, ಕ್ರಿಯಾತ್ಮಕ, ಜೆನೆಟಿಕ್ಸ್, ಪರಿಸರದ, ಜೀವಿವರ್ಗೀಕರಣ ಹಾಗೂ ವಿಕಸನದ ಅಂಶಗಳು ಸೇರಿದಂತೆ)

**1.11 ವಿಜ್ಞಾನ ಮತ್ತು ಸಮಾಜ**

(ಫಿಲಾಸಫಿ ಆಫ್ ಸೈನ್ಸ್, ವಿಜ್ಞಾನದ ಇತಿಹಾಸ, ನೈತಿಕತೆ, ವಿಜ್ಞಾನದ ಕಾರ್ಯನೀತಿ, ವಿಜ್ಞಾನ ಮತ್ತು ತಂತ್ರಜ್ಞಾನ ಆಧಾರಿತ ಉದ್ಯಮಶೀಲತೆ, ವಿಜ್ಞಾನ ಮತ್ತು ತಂತ್ರಜ್ಞಾನ ನಿರ್ವಹಣೆ, ವಿಜ್ಞಾನದ ಜನಪ್ರಿಯಗೊಳಿಸುವಿಕೆ undefined ಸೇರಿದಂತೆ)

**1.12 ಸಾಮಾಜಿಕ ವಿಜ್ಞಾನ**

(ಅರ್ಥಶಾಸ್ತ್ರ ಸಮಾಜಶಾಸ್ತ್ರ, ಮನೋವಿಜ್ಞಾನ, ಸಂವಹನ, ಗೃಹ ವಿಜ್ಞಾನ ಸೇರಿದಂತೆ

**2. ಫೆಲೋಶಿಪ್‌ಗಳು**

ಫೆಲೋಶಿಪ್‌ಗಳ ಈ ಕೆಳಗಿನ ವರ್ಗಗಳನ್ನು ಸ್ಥಾಪಿಸಲಾಗಿದೆ:

2.1 ಕೆಎಸ್‌ಟಿಎ ಗೌರವ ಫೆಲೋ (ಎಚ್‌ಎಫ್‌ಕೆಎಸ್‌ಟಿಎ)

2.2 ಕೆಎಸ್‌ಟಿಎ ಫೆಲೋ (ಎಫ್‌ಕೆಎಸ್‌ಟಿಎ)

**2.1 ಕೆಎಸ್‌ಟಿಎ ಗೌರವ ಫೆಲೋಗಳು (ಎಚ್‌ಎಫ್‌ಕೆಎಸ್‌ಟಿಎ)**

2.1.1 ಸ್ಟೀಮ್‌ಗಾಗಿ ಕೆಎಸ್‌ಟಿಎ ಜೀವಮಾನ ಸಾಧನೆ ಪ್ರಶಸ್ತಿಯ ಎಲ್ಲ ಪುರಸ್ಕೃತರು ಮತ್ತು ಕನ್ನಡದಲ್ಲಿ ಸ್ಟೀಮ್ ಸಂವಹನಕ್ಕಾಗಿ ಕೆಎಸ್‌ಟಿಎ ಜೀವಮಾನ ಸಾಧನೆ ಪ್ರಶಸ್ತಿಯ ಪುರಸ್ಕೃತರನ್ನು ಕೆಎಸ್‌ಟಿಎಯ ಗೌರವ ಫೆಲೋಗಳೆಂದು ಪರಿಗಣಿಸಲಾಗಿದೆ.

2.1.2 2020ರಿಂದ ಪ್ರಾರಂಭಿಸಿ, ಪ್ರತಿ ವರ್ಷ, ಕೆಎಸ್‌ಟಿಎ ಪಟ್ಟಿ ಮಾಡಿರುವ ಪ್ರತಿ ಕಾರ್ಯಕ್ಷೇತ್ರದಲ್ಲೂ ಇಬ್ಬರು ನಿಪುಣ ವಿಜ್ಞಾನಿಗಳು, ತಂತ್ರಜ್ಞರು ಮತ್ತು ವಿಜ್ಞಾನ ಸಂವಹನಕಾರರನ್ನು ಎಎಫ್‌ಎಸ್‌ಸಿ ನಾಮನಿರ್ದೇಶನ ಮಾಡುತ್ತದೆ. ಇದಕ್ಕಾಗಿ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಗೌರವ ಫೆಲೋಗಳಿಂದ ನಾಮನಿರ್ದೇಶಿತರ ಸಂಕ್ಷಿಪ್ತ ವಿವರ ಮತ್ತು ಕಾರ್ಯಕ್ಷೇತ್ರವನ್ನು ಒಳಗೊಂಡ ಸಲಹೆಗಳನ್ನು ಪಡೆಯಬಹುದು. ಈ ನಾಮನಿರ್ದೇಶನಗಳನ್ನು ಅಂತಿಮವಾಗಿ ಕಾರ್ಯಕಾರಿ ಸಮಿತಿ ಅನುಮೋದಿಸುತ್ತದೆ

2.1.3 ಕೆಎಸ್‌ಟಿಎಯ ಅಂತಹ ಗೌರವ ಫೆಲೋಗಳ ವಿದ್ವತ್ತು ಕೆಎಸ್‌ಟಿಎಯ ಶೈಕ್ಷಣಿಕ ಮತ್ತು ಸಂಬಂಧಿತ ಕಾರ್ಯಕ್ರಮಗಳ ಯೋಜನೆ ಮತ್ತು ಅನುಷ್ಠಾನದಲ್ಲಿ ಅಮೂಲ್ಯವಾಗಿರುತ್ತದೆ ಮತ್ತು ಕೆಎಸ್‌ಟಿಎಗೆ ಸಂಪನ್ಮೂಲದ ಆಕರವಾಗಿರುತ್ತದೆ.

2.1.4 ಗೌರವ ಫೆಲೋಶಿಪ್ / ಫೆಲೋಶಿಪ್ / ಸಹ ಸದಸ್ಯತ್ವಗಳಿಗೆ ನಾಮನಿರ್ದೇಶನ ಮಾಡಲು ಗೌರವ ಫೆಲೋಗಳಿಗೆ ಅರ್ಹತೆ ಇರುತ್ತದೆ

**2.2 ಕೆಎಸ್‌ಟಿಎ ಫೆಲೋಗಳು (ಎಫ್‌ಕೆಎಸ್‌ಟಿಎ)**

2.2.1 ಗುರುತಿಸಬಹುದಾದ ವೈಯಕ್ತಿಕ ಅರ್ಹತೆ ಮತ್ತು ಸ್ಕೀಮ್‌ಗೆ ನೀಡಿದ ಕೊಡುಗೆಯನ್ನು ಆಧರಿಸಿ, ಕೆಎಸ್‌ಟಿಎ–ಪ್ರಶಸ್ತಿಗಳು ಮತ್ತು ಫೆಲೋಶಿಪ್ ಆಯ್ಕೆ ಸಮಿತಿಯು (ಎಎಫ್‌ಎಸ್‌ಸಿ) ಕೆಎಸ್‌ಟಿಎ ಫೆಲೋಗಳನ್ನು ಆಯ್ಕೆ ಮಾಡುತ್ತದೆ (ಅಥವಾ ನಾಮನಿರ್ದೇಶನ ಮಾಡುತ್ತದೆ). ಸಹಸದಸ್ಯರು ಮೂರು ವರ್ಷಗಳ ಸಹಸದಸ್ಯತ್ವವನ್ನು ಪೂರ್ಣಗೊಳಿಸಿದ ನಂತರ ಕಾರ್ಯಕಾರಿ ಸಮಿತಿ ಸದಸ್ಯರು / ಗೌರವ ಫೆಲೋಗಳು / ಫೆಲೋಗಳಿಂದ ನಾಮನಿರ್ದೇಶನ ನಮೂನೆಯಲ್ಲಿ (ಅನುಬಂಧ i) ಕೆಎಸ್‌ಟಿಎಯ ಪಾವತಿಸಿದ ವೈಯಕ್ತಿಕ ಸಹಸದಸ್ಯರ ನಾಮನಿರ್ದೇಶನವನ್ನು ಈ ಪ್ರಕ್ರಿಯೆಯು ಪರಿಗಣಿಸುತ್ತದೆ.

2.2.2 ಅಸ್ತಿತ್ವದಲ್ಲಿರುವ ಫೆಲೋಗಳ ಗುಂಪನ್ನು ವಿಸ್ತರಿಸಲು, ಕಾರ್ಯಕಾರಿ ಸಮಿತಿ ಸದಸ್ಯರು / ಗೌರವ ಫೆಲೋಗಳು ಈ ಫೆಲೋಶಿಪ್‌ಗಾಗಿ (ಎಫ್‌ಕೆಎಸ್‌ಟಿಎ) ಕೆಎಸ್‌ಟಿಎಯ ಸಹಾಯಕ ಸದಸ್ಯರಾಗಿ ಇನ್ನೂ ದಾಖಲಾಗದ ಹೆಸರಾಂತ ವಿಜ್ಞಾನಿಗಳು ಮತ್ತು ವಿಜ್ಞಾನ ಸಂವಹನಕಾರರನ್ನು ನಾಮನಿರ್ದೇಶನ ನಮೂನೆಯನ್ನು (ಅನುಬಂಧ i) ಬಳಸಿ ನಾಮನಿರ್ದೇಶನ ಮಾಡಬಹುದು. ಇವುಗಳನ್ನು ಸೂಕ್ತವಾಗಿ ಪರಿಗಣಿಸುವ ಎಎಫ್‌ಕೆಎಸ್‌ಸಿಯು ಅಂತಿಮ ಅನುಮೋದನೆಗಾಗಿ ಇಸಿಗೆ ಶಿಫಾರಸು ಮಾಡುತ್ತದೆ

2.2.3 ಪ್ರಶಸ್ತಿಗಳು ಮತ್ತು ಫೆಲೋಶಿಪ್ ಆಯ್ಕೆಸಮಿತಿಯು ನಿರ್ಧರಿಸಿದಂತೆ ಮತ್ತು ಕೆಎಸ್‌ಟಿಎಯ ಕಾರ್ಯಕಾರಿಸಮಿತಿ ಅನುಮೋದಿಸಿದಂತೆ ಅಂತಹ ಫೆಲೋಶಿಪ್‌ಗಳು ವರ್ಷಕ್ಕೆ ಪ್ರತಿ ಕಾರ್ಯಕ್ಷೇತ್ರಕ್ಕೆ ಎರಡರವರೆಗೆ ಇರುತ್ತವೆ.

2.2.4 ಕೆಎಸ್‌ಟಿಎ ಕೈಗೊಳ್ಳುವ ಕಾರ್ಯಕ್ರಮಗಳಿಗೆ ಅಗತ್ಯಬಿದ್ದಾಗ ಸಂಪನ್ಮೂಲ ವ್ಯಕ್ತಿಗಳಾಗಿ ಕೊಡುಗೆ ನೀಡಲು ಕೆಎಸ್‌ಟಿಎ ಫೆಲೋಗಳನ್ನು (ಎಫ್‌ಕೆಎಸ್‌ಟಿಎ) ಪ್ರೋತ್ಸಾಹಿಸಲಾಗುತ್ತದೆ ಮತ್ತು/ಅಥವಾ ಕೆಎಸ್‌ಟಿಎಯ ಕಾರ್ಯಕ್ರಮಗಳ ಆಯೋಜನೆಯಲ್ಲಿ ಸೇರಿಸಿಕೊಳ್ಳಲಾಗುತ್ತದೆ.

2.2.5 ಪ್ರತಿ ವರ್ಷವೂ ಫೆಲೋಗಳು / ಸಹಾಯಕ ಸದಸ್ಯರನ್ನು ನಾಮನಿರ್ದೇಶನ ಮಾಡಲು ಫೆಲೋಗಳು ಅರ್ಹರಾಗಿರುತ್ತಾರೆ

ಅನುಬಂಧ i

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

## ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ

## ಫೆಲೋಗಳ ನಾಮನಿರ್ದೇಶನದ ಪ್ರೊಫಾರ್ಮಾ

ಈ ಕೆಳಗೆ ಸಹಿ ಮಾಡಿರುವ ಕೆಎಸ್‌ಟಿಎ ಸದಸ್ಯರು / ಫೆಲೋಗಳು

ಪ್ರೊ. / ಡಾ. / ಶ್ರೀ / ಶ್ರೀಮತಿ : ______________________________

ಅವರ ಹೆಸರನ್ನು ಅಕಾಡೆಮಿಯ ಫೆಲೋಶಿಪ್‌ಗಾಗಿ ಆರಿಸುವಂತೆ ಸೂಚಿಸುತ್ತಾರೆ ಮತ್ತು ಬೆಂಬಲಿಸುತ್ತಾರೆ

| | |
|---|---|
| A. ಸೂಚಿಸುವವರ ಹೆಸರು: | |
| ವಿಳಾಸ: | |
| B. ಬೆಂಬಲಿಸುವವರ ಹೆಸರು: | |
| ವಿಳಾಸ: | |
| 1. ಪೂರ್ಣ ಹೆಸರು: | |
| 2. ಹುದ್ದೆ ಮತ್ತು ಸಂಸ್ಥೆಯ ಹೆಸರು | |
| 3. ಹುಟ್ಟಿದ ದಿನಾಂಕ | |
| 4. ಲಿಂಗ | ☐ಪುರುಷ ☐ಸ್ತ್ರೀ ☐ಇತರೆ |
| 5. ಕೆಎಸ್‌ಟಿಎ ಸದಸ್ಯರು | ☐ಹೌದು ☐ಇಲ್ಲ |
| 6. ವಿಳಾಸ | ಕಚೇರಿ:<br>ಮನೆ:<br>ಇಮೇಲ್:<br>ಸಂಪರ್ಕ / ಮೊಬೈಲ್ ಸಂಖ್ಯೆ |
| 7. ವಿಷಯ | |
| 8. ತಜ್ಞತೆ | |
| 9. ಸಂಶೋಧನೆಯ ಕ್ಷೇತ್ರ | |
| 10. ನಾಮನಿರ್ದೇಶನವನ್ನು ಪರಿಗಣಿಸಬೇಕಾದ ಕಾರ್ಯಕ್ಷೇತ್ರ | (ದಯವಿಟ್ಟು ಲಗತ್ತಿಸಲಾದ ಕಾರ್ಯಕ್ಷೇತ್ರಗಳ ಪಟ್ಟಿಯಿಂದ ಒಂದನ್ನು ಆರಿಸಿ) |

| | | |
|---|---|---|
| 11. | ಶೈಕ್ಷಣಿಕ ಅರ್ಹತೆಗಳು | <table><tr><th>ಪದವಿ / ಡಿಪ್ಲೊಮಾ</th><th>ವಿಶ್ವವಿದ್ಯಾಲಯ / ಸಂಸ್ಥೆ</th><th>ವರ್ಷ</th></tr><tr><td></td><td></td><td></td></tr><tr><td></td><td></td><td></td></tr><tr><td></td><td></td><td></td></tr><tr><td></td><td></td><td></td></tr></table> |
| 12. | ಪ್ರಕಟವಾದ ಪುಸ್ತಕಗಳು, ಮೊನೊಗ್ರಾಫ್ ಇತ್ಯಾದಿಗಳ ಸಂಪೂರ್ಣ ಪಟ್ಟಿ | ಅನುಬಂಧ ___ ರಲ್ಲಿ ಪಟ್ಟಿ ಮಾಡಲಾಗಿದೆ<br>☐ ಹೌದು ☐ ಇಲ್ಲ |
| 13. | ಸ್ವೀಕೃತವಾದವೂ ಸೇರಿದಂತೆ ಸಂಶೋಧನಾ ಪ್ರಕಟಣೆಗಳ ಸಂಪೂರ್ಣ ಪಟ್ಟಿ | ದಯವಿಟ್ಟು ಸಹ–ಲೇಖಕರ ಹೆಸರನ್ನು ಸಹ ನಮೂದಿಸಿ. ಸಾರಾಂಶಗಳು, ಸಂಗ್ರಹಗಳು, ಸಂವಹನ ಮಾಡಲಾದ ಪ್ರಬಂಧಗಳನ್ನು ಸೇರಿಸಬಾರದು. ಅನುಬಂಧ ___ ರಲ್ಲಿ ಪಟ್ಟಿ ಮಾಡಲಾಗಿದೆ<br>☐ ಹೌದು ☐ ಇಲ್ಲ |
| 14. | ವರ್ಗಾಯಿಸಲಾದ ತಂತ್ರಜ್ಞಾನ / ಪೇಟೆಂಟ್‌ಗಳು, ಯಾವುದಾದರೂ ಇದ್ದರೆ. | (ಪೇಟೆಂಟ್‌ಗಳನ್ನು ವಾಣಿಜ್ಯೀಕರಿಸಲಾಗಿದೆಯೇ ಎಂದು ತಿಳಿಸಿ)<br>ಅನುಬಂಧ ___ ರಲ್ಲಿ ಪಟ್ಟಿ ಮಾಡಲಾಗಿದೆ<br>☐ ಹೌದು ☐ ಇಲ್ಲ |
| 15. | ರಾಷ್ಟ್ರೀಯ/ ಅಂತರರಾಷ್ಟ್ರೀಯ ಸಮಸ್ಯೆಗಳಿಗೆ ಕೊಡುಗೆ; ಯಾವುದಾದರೂ ಇದ್ದಲ್ಲಿ | |
| 16. | ನಿಮ್ಮ ಅಭಿಪ್ರಾಯದಲ್ಲಿ ಗಮನಾರ್ಹವಾದ ವೈಜ್ಞಾನಿಕ ಪರಿಣಾಮ ಬೀರಿರುವ, ನಾಮ ನಿರ್ದೇಶಿತರ 10 ಅತ್ಯುತ್ತಮ ಸಂಶೋಧನಾ ಪ್ರಕಟಣೆಗಳನ್ನು ಪಟ್ಟಿ ಮಾಡಿ. ಸಂಪೂರ್ಣ ಉಲ್ಲೇಖಗಳನ್ನು ನೀಡಿ. | ದಯವಿಟ್ಟು ಪಟ್ಟಿಯನ್ನು ಕಾಲಾನುಕ್ರಮದಲ್ಲಿ ಜೋಡಿಸಿ; ಸಂಶೋಧನಾ ಪ್ರಕಟಣೆಯನ್ನು ಉಲ್ಲೇಖಿಸುವಾಗ ಲೇಖಕರ ಹೆಸರನ್ನು ಮೊದಲು ನೀಡಿ, ನಂತರ ಪ್ರಕಟಣೆಯ ವರ್ಷ, ಪ್ರಬಂಧದ ಶೀರ್ಷಿಕೆ, ಜರ್ನಲ್‌ನ ಹೆಸರು, ಸಂಪುಟ / ಸಂಚಿಕೆ ಮತ್ತು ಪುಟ ಸಂಖ್ಯೆಯನ್ನು ನೀಡಿ.<br>ಈ 10 ಪ್ರಕಟಣೆಗಳಲ್ಲಿ ಪ್ರತಿಯೊಂದಕ್ಕೂ ಜರ್ನಲ್ನ ಇಂಪ್ಯಾಕ್ಟ್ ಫ್ಯಾಕ್ಟರ್ ಹಾಗೂ ಸೈಟೇಶನ್ ಇಂಡೆಕ್ಸ್ ಅನ್ನು ನೀಡಬೇಕು. (ಈ ಪ್ರಕಟಣೆಗಳ ಪ್ರತಿಗಳನ್ನು ಲಗತ್ತಿಸಿ)<br>ಅನುಬಂಧ ___ ರಲ್ಲಿ ಪಟ್ಟಿ ಮಾಡಲಾಗಿದೆ ☐ ಹೌದು ☐ ಇಲ್ಲ<br>ಪ್ರತಿಗಳನ್ನು ಅನುಬಂಧ ___ ರಲ್ಲಿ ಲಗತ್ತಿಸಲಾಗಿದೆ ☐ ಹೌದು ☐ ಇಲ್ಲ |
| 17. | ಸಂಬಂಧಿತ ಪ್ರಸ್ತಾಪಗಳನ್ನು ಉಲ್ಲೇಖಿಸಿ ನಾಮನಿರ್ದೇಶಿತರ ಪ್ರಮುಖ ವೈಜ್ಞಾನಿಕ ಕೊಡುಗೆ ಗಳನ್ನು ಎತ್ತಿ ತೋರಿಸುವ ಸೂಚಕರ ಹೇಳಿಕೆ (ಗರಿಷ್ಠ 250 | |

ಸ್ಥಳ:
ದಿನಾಂಕ: ನಾಮನಿರ್ದೇಶಿತರ ಸಹಿ

1. ಸೂಚಿಸುವವರ ಹೆಸರು:
ಸ್ಥಳ:
ದಿನಾಂಕ: **ಕಾರ್ಯಕಾರಿ ಸಮಿತಿ ಸದಸ್ಯ / ಫೆಲೋಸಹಿ**

ಅನುಮೋದಿಸುವವರ ಹೆಸರು:
ಸ್ಥಳ:
ದಿನಾಂಕ: **ಕಾರ್ಯಕಾರಿ ಸಮಿತಿ ಸದಸ್ಯ / ಫೆಲೋಸಹಿ**

## 3. ಸದಸ್ಯತ್ವಗಳು

ಸದಸ್ಯತ್ವಗಳ ಈ ಕೆಳಗಿನ ವರ್ಗಗಳನ್ನು ಸ್ಥಾಪಿಸಲಾಗಿದೆ:

1.1 ಕೆಎಸ್‌ಟಿಎ ಸಹಾಯಕ ಸದಸ್ಯರು (ವ್ಯಕ್ತಿಗಳಿಗೆ ಮುಕ್ತ)

3.2 ಕೆಎಸ್‌ಟಿಎ ಸಾಂಸ್ಥಿಕ ಸದಸ್ಯರು (ಸಂಸ್ಥೆಗಳಿಗೆ ಮುಕ್ತ)

### 3.1 ವೈಯಕ್ತಿಕ ಸಹ ಸದಸ್ಯರು

3.1.1 ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕೃಷಿ ಮತ್ತು ವೈದ್ಯಕೀಯ ಕ್ಷೇತ್ರದ ಯಾವುದೇ ಶಾಖೆಯಲ್ಲಿರುವ ಶಿಕ್ಷಣತಜ್ಞರು / ಸಂಶೋಧಕರು / ಶಿಕ್ಷಕರು/ ಉದ್ಯೋಗನಿರತರು, ಶಿಕ್ಷಣ / ಸಂಶೋಧನೆ ಮತ್ತು ಕಾರ್ಪೊರೇಟ್ ಸೇರಿದಂತೆ ಸಂಬಂಧಿತ ಸಂಸ್ಥೆಗಳ ಉದ್ಯೋಗಿಗಳು ಮತ್ತು ನಿವೃತ್ತರು, ಸಹ ಸದಸ್ಯತ್ವಕ್ಕಾಗಿ ಅರ್ಜಿ / ನಾಮನಿರ್ದೇಶನಕ್ಕೆ ಅರ್ಹರಾಗಿರುತ್ತಾರೆ.

3.1.2 ಅರ್ಜಿದಾರರು / ನಾಮನಿರ್ದೇಶಿತರು ಜನನ, ನಿವಾಸ ಅಥವಾ ಸೇವೆಯ ಮೂಲಕ ಕರ್ನಾಟಕ ಮೂಲದವರಾಗಿರಬೇಕು

3.1.3 ಕೆಎಸ್ಟಿಎಯ ಪಾವತಿಸಿದ ಸಹ ಸದಸ್ಯತ್ವವನ್ನು ಪಡೆಯಲು ಬಯಸುವ ವ್ಯಕ್ತಿಗಳು ರೂ. 1,000/– (ಒಂದು ಸಾವಿರ ರೂಪಾಯಿಗಳು ಮಾತ್ರ) ಶುಲ್ಕ ಮತ್ತು ಸರಿಯಾಗಿ ಭರ್ತಿ ಮಾಡಿದ ಅರ್ಜಿಯನ್ನು (ಅನುಬಂಧ i) ವರ್ಷದ ಯಾವುದೇ ಸಮಯದಲ್ಲಿ ಸಲ್ಲಿಸಬಹುದು

3.1.4 ರೂ. 1000/– ಮೊತ್ತದ ಈ ಶುಲ್ಕವು ಕೆಎಸ್‌ಟಿಎಯ ಇಸಿ ಅಂತಹ ಸದಸ್ಯತ್ವವನ್ನು ಸ್ವೀಕರಿಸಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಮಾನ್ಯವಾಗಿರುತ್ತದೆ, ಮತ್ತು ಪ್ರತಿ ಐದು ವರ್ಷಗಳಿಗೊಮ್ಮೆ ನವೀಕರಣ ಸಹಸದಸ್ಯತ್ವ ಶುಲ್ಕ ರೂ. 1000/–ವನ್ನು ಪ್ರತಿಬಾರಿಯೂ ಪಾವತಿಸುವ ಮೂಲಕ ನವೀಕರಿಸಬಹುದಾಗಿರುತ್ತದೆ

3.1.5 ಕೆಎಸ್‌ಟಿಎಯ ಸಹ ಸದಸ್ಯರು ಕೆಎಸ್‌ಟಿಎ ಪ್ರಕಟಣೆಗಳನ್ನು ರಿಯಾಯಿತಿ ದರದಲ್ಲಿ ಪಡೆಯುವ ಸವಲತ್ತು ಹೊಂದಿರುತ್ತಾರೆ ಹಾಗೂ ಅವರನ್ನು ವೆಬಿನಾರ್ಗಳಲ್ಲಿ ಭಾಗವಹಿಸಲು ಮತ್ತು ಕೆಎಸ್‌ಟಿಎ ಆಯೋಜಿಸುವ ಆಯ್ದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಆಮಂತ್ರಿಸಲಾಗುತ್ತದೆ.

3.1.6 ತನ್ನ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಕೆಎಸ್‌ಟಿಎಗೆ ಸಹಾಯ ಮಾಡಲು ಸಕ್ರಿಯ ಸಹ ಸದಸ್ಯರನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಆಯ್ಕೆ ಮಾಡಲಾಗುತ್ತದೆ

### 3.2 ಸಾಂಸ್ಥಿಕ ಸದಸ್ಯರು

3.2.1 ಕಾರ್ಪೊರೇಟ್ ಸೇರಿದಂತೆ ಶಿಕ್ಷಣ, ಸಂಶೋಧನೆ ಮತ್ತು ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವ ಮತ್ತು ಕೆಎಸ್‌ಟಿಎ ಕಾರ್ಯಕ್ರಮಗಳಲ್ಲಿ ಆಸಕ್ತಿ ಹೊಂದಿರುವ ಸಂಸ್ಥೆಗಳು ಸಾಂಸ್ಥಿಕ ಸದಸ್ಯತ್ವಕ್ಕೆ ಅರ್ಹವಾಗಿರುತ್ತವೆ

3.2.2 ಕೆಎಸ್‌ಟಿಎಯ ಪಾವತಿಸಿದ ಸಾಂಸ್ಥಿಕ ಸದಸ್ಯತ್ವವನ್ನು ಪಡೆಯಲು ಬಯಸುವ ಸಂಸ್ಥೆಗಳು, ರೂ. 1,00,000/– (ಒಂದು ಲಕ್ಷ ರೂಪಾಯಿಗಳು ಮಾತ್ರ) ಶುಲ್ಕ ಮತ್ತು ಆಸಕ್ತಿಯ ಪತ್ರವನ್ನು ವರ್ಷದ ಯಾವುದೇ ಸಮಯದಲ್ಲಿ ಸಲ್ಲಿಸಬಹುದು

3.2.3 ರೂ. 1,00,000/– ಮೊತ್ತದ ಈ ಶುಲ್ಕವು ಕೆಎಸ್ಟಿಎಯ ಇಸಿ ಅಂತಹ ಸದಸ್ಯತ್ವವನ್ನು ಸ್ವೀಕರಿಸಿದ ದಿನಾಂಕದಿಂದ 10 ವರ್ಷಗಳ ಅವಧಿಗೆ ಮಾನ್ಯವಾಗಿರುತ್ತದೆ, ಮತ್ತು ಪ್ರತಿ 10 ವರ್ಷಗಳಿಗೊಮ್ಮೆ ನವೀಕರಣ ಶುಲ್ಕ ರೂ. 1,00,000/– ಅನ್ನು ಪ್ರತಿಬಾರಿಯೂ ಪಾವತಿಸುವ ಮೂಲಕ ನವೀಕರಿಸಬಹುದಾಗಿರುತ್ತದೆ

3.2.4 ಸಾಂಸ್ಥಿಕ ಸದಸ್ಯರು ಕೆಎಸ್ಟಿಎಯಿಂದ ತಮ್ಮ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ನಿಯಮಿತ ಸಂದೇಶಗಳನ್ನು ಪಡೆಯುತ್ತಾರೆ, ನಿಯಮಿತವಾಗಿ ಕೆಎಸ್ಟಿಎ ಸುದ್ದಿಪತ್ರವನ್ನು ಪಡೆಯುತ್ತಾರೆ ಮತ್ತು ಕೆಎಸ್ಟಿಎ ಪ್ರಕಟಣೆಗಳನ್ನು ರಿಯಾಯಿತಿ ದರದಲ್ಲಿ ಪಡೆಯುವ ಸವಲತ್ತು ಹೊಂದಿರುತ್ತಾರೆ

3.2.5 ಪರಸ್ಪರ ಆಸಕ್ತಿಯ ಕ್ಷೇತ್ರಗಳಲ್ಲಿ ಅಲ್ಪಾವಧಿ ಅಧ್ಯಯನಗಳನ್ನು ಕೈಗೊಳ್ಳಲು, ಸಮಾಲೋಚನೆ ನಡೆಸಲು, ಸಾಮರ್ಥ್ಯ ವೃದ್ಧಿಗೆ ಕೊಡುಗೆ ನೀಡಲು, ಜಂಟಿ ಪ್ರಕಟಣೆಗಳನ್ನು ತರಲು ಮತ್ತು ಇನ್ನಿತರ ವಿಷಯಗಳಲ್ಲಿ ಕೆಎಸ್ಟಿಎಯೊಂದಿಗೆ ಜಂಟಿಯಾಗಿ ಶೈಕ್ಷಣಿಕ ಮತ್ತು ವೈಜ್ಞಾನಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಸಾಂಸ್ಥಿಕ ಸದಸ್ಯರನ್ನು ಪ್ರೋತ್ಸಾಹಿಸಲಾಗುತ್ತದೆ.

3.2.6 ಕಾಲಕಾಲಕ್ಕೆ ಕೆಎಸ್ಟಿಎ ನಿಗದಿಪಡಿಸಿದ ನಿಯಮಗಳು ಮತ್ತು ಷರತ್ತುಗಳ ಮೇಲೆ ಕೆಎಸ್ಟಿಎಯ ಸಭಾಂಗಣ / ಆಡಿಯೋ–ವಿಶುಯಲ್ ಸ್ಟುಡಿಯೋ / ಗ್ರಂಥಾಲಯ ಸೌಲಭ್ಯಗಳನ್ನು ಬಳಸುವ ಸವಲತ್ತು ಸಾಂಸ್ಥಿಕ ಸದಸ್ಯರಿಗೆ ಇರುತ್ತದೆ.

**ಅನುಬಂಧ II**

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**(ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ)**

## ಅರ್ಜಿಯ ವಿವರ / ಸಹ ಸದಸ್ಯರ ನಾಮನಿರ್ದೇಶನ

ಅಕಾಡೆಮಿಯ ಸಹ ಸದಸ್ಯತ್ವಕ್ಕಾಗಿ ಪ್ರೊ. / ಡಾ. / ಶ್ರೀ / ಶ್ರೀಮತಿ

ಸೂಚಿಸುವವರ ಹೆಸರು: ..

ವಿಳಾಸ

ದಿನಾಂಕ: . ಸಹಿ

1. ಪೂರ್ಣ ಹೆಸರು: ............................................./....................................................................

ಉಪನಾಮ ಮೊದಲ ಹೆಸರು(ಗಳು)

2. ಹುದ್ದೆ ಮತ್ತು ಸಂಸ್ಥೆಯ ಹೆಸರು ....................................................................

3. ಎ. ಹುಟ್ಟಿದ ದಿನಾಂಕ ................................................ ಬಿ. ಲಿಂಗ: ಗಂಡು / ಹೆಣ್ಣು

4. ರಾಷ್ಟ್ರೀಯತೆ.............................................................

5. ವಿಳಾಸ

(ಎ) ಕಚೇರಿ..............................................................................

..........................................................................................

(ಬಿ) ಮನೆ..............................................................................

..........................................................................................

(ಸಿ) ಇಮೇಲ್....................................... (ಡಿ) ಮೊಬೈಲ್ ಸಂಖ್ಯೆ/ಸಂಪರ್ಕ....................................

6. (ಎ) ವಿಷಯ ..

(ಬಿ) ತಜ್ಞತೆ ..

(ಸಿ) ಸಂಶೋಧನೆಯಕ್ಷೇತ್ರ

(ಡಿ) ನಾಮನಿರ್ದೇಶನವನ್ನು ಪರಿಗಣಿಸಬೇಕಾದ ಕಾರ್ಯಕ್ಷೇತ್ರ

(ದಯವಿಟ್ಟು ಲಗತ್ತಿಸಲಾದ ಕಾರ್ಯಕ್ಷೇತ್ರಗಳ ಪಟ್ಟಿಯಿಂದ ಒಂದನ್ನು ಆರಿಸಿ)

7. **ಶೈಕ್ಷಣಿಕ ಅರ್ಹತೆಗಳು:**

| ಪದವಿ / ಡಿಪ್ಲೊಮಾ | ವಿಶ್ವವಿದ್ಯಾಲಯ / ಸಂಸ್ಥೆ | ವರ್ಷ |
|---|---|---|
| | | |
| | | |
| | | |
| | | |

8. ಪ್ರಕಟವಾದ ಪುಸ್ತಕಗಳು, ಮೊನೊಗ್ರಾಫ್ ಇತ್ಯಾದಿಗಳ ಸಂಪೂರ್ಣ ಪಟ್ಟಿ.

9. ಸ್ವೀಕೃತವಾದವೂ ಸೇರಿದಂತೆ ಸಂಶೋಧನಾ ಪ್ರಕಟಣೆಗಳ ಸಂಪೂರ್ಣ ಪಟ್ಟಿ ದಯವಿಟ್ಟು ಸಹ–ಲೇಖಕರ ಹೆಸರನ್ನು ಸಹ ನಮೂದಿಸಿ. ಸಾರಾಂಶಗಳು, ಸಂಗ್ರಹಗಳು, ಸಂವಹನ ಮಾಡಲಾದ ಪ್ರಬಂಧಗಳನ್ನು ಸೇರಿಸಬಾರದು.

10. ತಂತ್ರಜ್ಞಾನ ವರ್ಗಾವಣೆ / ಪೇಟೆಂಟ್, ಯಾವುದಾದರೂ ಇದ್ದರೆ. (ಪೇಟೆಂಟ್‌ಗಳನ್ನು ವಾಣಿಜ್ಯೀಕರಿಸಲಾಗಿದೆಯೇ ಎಂದು ನಮೂದಿಸಿ).

11. ರಾಷ್ಟ್ರೀಯ / ಅಂತರರಾಷ್ಟ್ರೀಯ ಸಮಸ್ಯೆಗಳಿಗೆ ಕೊಡುಗೆ; ಯಾವುದಾದರೂ ಇದ್ದಲ್ಲಿ

12. ನಿಮ್ಮ ಅಭಿಪ್ರಾಯದಲ್ಲಿ ಗಮನಾರ್ಹವಾದ ವೈಜ್ಞಾನಿಕ ಪರಿಣಾಮ ಬೀರಿರುವ, ನಾಮನಿರ್ದೇಶಿತರ ಗರಿಷ್ಠ 10 ಅತ್ಯುತ್ತಮ ಸಂಶೋಧನಾ ಪ್ರಕಟಣೆಗಳನ್ನು ಪಟ್ಟಿ ಮಾಡಿ. ಸಂಪೂರ್ಣ ಉಲ್ಲೇಖಗಳನ್ನು ನೀಡಿ.

ಸ್ಥಳ:

ದಿನಾಂಕ: ಅರ್ಜಿದಾರರ / ನಾಮನಿರ್ದೇಶಿತರ ಸಹಿ

ಗಮನಿಸಿ:

ಎ. ದಯವಿಟ್ಟು ಪಟ್ಟಿಯನ್ನು ಕಾಲಾನುಕ್ರಮದಲ್ಲಿ ಜೋಡಿಸಿ; ಸಂಶೋಧನಾ ಪ್ರಕಟಣೆಯನ್ನು ಉಲ್ಲೇಖಿಸುವಾಗ ಲೇಖಕರ ಹೆಸರನ್ನು ಮೊದಲು ನೀಡಿ, ನಂತರ ಪ್ರಕಟಣೆಯ ವರ್ಷ, ಪ್ರಬಂಧದ ಶೀರ್ಷಿಕೆ, ಜರ್ನಲ್‌ನ ಹೆಸರು, ಸಂಪುಟ / ಸಂಚಿಕೆ ಮತ್ತು ಪುಟ ಸಂಖ್ಯೆಯನ್ನು ನೀಡಿ.

ಬಿ. ಈ 10 ಪ್ರಕಟಣೆಗಳಲ್ಲಿ ಪ್ರತಿಯೊಂದಕ್ಕೂ ಜರ್ನಲ್‌ನ ಇಂಪ್ಯಾಕ್ಟ್ ಫ್ಯಾಕ್ಟರ್ ಹಾಗೂ ಸೈಟೇಶನ್ ಇಂಡೆಕ್ಸ್ ಅನ್ನು ನೀಡಬೇಕು. (ಈ ಪ್ರಕಟಣೆಗಳ ಪ್ರತಿಗಳನ್ನು ಲಗತ್ತಿಸಿ)

13. ಸಂಬಂಧಿತ ಪ್ರಸ್ತಾಪಗಳನ್ನು ಉಲ್ಲೇಖಿಸಿ ನಾಮನಿರ್ದೇಶಿತರ ಪ್ರಮುಖ ವೈಜ್ಞಾನಿಕ ಕೊಡುಗೆಗಳನ್ನು ಎತ್ತಿ ತೋರಿಸುವ ಸೂಚಕರ ಹೇಳಿಕೆ (ಗರಿಷ್ಠ 250 ಪದಗಳು)

ಸ್ಥಳ:

ದಿನಾಂಕ: ಕಾರ್ಯಕಾರಿಸಮಿತಿಸದಸ್ಯ / ಫೆಲೋಸಹಿ

## 4. ಎಮೆರಿಟಸ್ ಕನ್ಸಲ್ಟೆಂಟ್ಸ್

ಉದಯೋನ್ಮುಖ ಸವಾಲುಗಳನ್ನು ಎದುರಿಸಲು ಸಾರ್ವಜನಿಕ–ಖಾಸಗಿ ಸಹಭಾಗಿತ್ವ ಮತ್ತು ಸರ್ಕಾರ–ಕಾರ್ಪೊರೇಟ್ ಸಹಯೋಗಕ್ಕೆ ಹೆಚ್ಚಿನ ಒತ್ತು ನೀಡುವ ಹಿನ್ನೆಲೆಯಲ್ಲಿ, ಮೇಲಿನ ಗಿಖ 1ರಲ್ಲಿ ಸೂಚಿಸಲಾದ ವಿಭಾಗಗಳಲ್ಲಿ ತಜ್ಞರ ಗುಂಪನ್ನು ರಚಿಸಲು ಕೆಎಸ್‌ಟಿಎ ಪ್ರಸ್ತಾಪಿಸಿದೆ.

4.1 ಕರ್ನಾಟಕ ಮೂಲದ (ಜನನ / ನಿವಾಸ / ಸೇವೆಯ ಮೂಲಕ) ಶಿಕ್ಷಣ ತಜ್ಞರು, ಸಂಶೋಧಕರು, ಎಂಜಿನಿಯರ್‌ಗಳು ಮತ್ತು ತಂತ್ರಜ್ಞರು, ಸಾರ್ವಜನಿಕ, ಕಾರ್ಪೊರೇಟ್, ಖಾಸಗಿ ಸಂಸ್ಥೆಗಳು ಅಥವಾ ಸ್ವಂತಉದ್ಯಮಗಳಲ್ಲಿ ಸಾಬೀತಾಗಿರುವ ದಾಖಲೆಯೊಂದಿಗೆ, ಸಕ್ರಿಯ ಸೇವೆಯಿಂದ ನಿವೃತ್ತರಾದವರೂ ಸೇರಿದಂತೆ, ಮೇಲೆ VI (1)ನಲ್ಲಿ ಉಲ್ಲೇಖಿಸಲಾದ ವಿಭಾಗಗಳಲ್ಲಿ ಉದಯೋನ್ಮುಖಉದ್ಯಮಗಳು, ಸ್ಟಾರ್ಟ್–ಅಪ್‌ಗಳಿಗೆ ತಮ್ಮ ಪರಿಣತಿ ಮತ್ತು ಸೇವೆಗಳನ್ನು ಒದಗಿಸಲು ಅಥವಾ ಉದ್ಯಮಕ್ಕೆ ಹೊಸದಾಗಿ ಪ್ರವೇಶಿಸುವವರಿಗೆ ಮಾರ್ಗದರ್ಶನ ನೀಡಲು ಸಿದ್ಧರಿರುವವರು

4.2 ಅಕಾಡೆಮಿಯೊಂದಿಗೆ ನೋಂದಾಯಿಸಿಕೊಳ್ಳಲು ಮತ್ತು ಅಸ್ತಿತ್ವದಲ್ಲಿರುವ ನಿಬಂಧನೆಗಳ ಪ್ರಕಾರ ಸಂಭಾವನೆಯೊಂದಿಗೆ, ಕಾಲಕಾಲಕ್ಕೆ ಅಕಾಡೆಮಿಯು ಆಯೋಜಿಸುವ ಸಮ್ಮೇಳನಗಳು, ಕಾರ್ಯಾಗಾರಗಳು, ಸರ್ಟಿಫಿಕೇಟ್ ಕೋರ್ಸ್‌ಳು, ತರಬೇತಿ ಕಾರ್ಯಕ್ರಮಗಳು, ವೆಬಿನಾರ್‌ಗಳಲ್ಲಿ ತಮ್ಮ ಜ್ಞಾನವನ್ನು ಹಂಚಿಕೊಳ್ಳಲು ಕೆಎಸ್‌ಟಿಎ ಪ್ರತಿ ವರ್ಷ ಆಗಸ್ಟ್ ತಿಂಗಳಿನಲ್ಲಿ ತನ್ನ ಜಾಲತಾಣದಲ್ಲಿ ಆಸಕ್ತಿಯ ಅಭಿವ್ಯಕ್ತಿಯನ್ನು ಆಹ್ವಾನಿಸುತ್ತದೆ.

4.3 ಆಸಕ್ತರು ತಮ್ಮ ಬಯೋಡೇಟಾವನ್ನು ತಜ್ಞರ ಸಮಿತಿಯ ಪರಿಗಣನೆಗೆ ಒದಗಿಸಬಹುದು ಮತ್ತು ಅದನ್ನು ಪ್ರತಿವರ್ಷ ಡಿಸೆಂಬರ್ ವೇಳೆಗೆ ಕಾರ್ಯಕಾರಿ ಸಮಿತಿಯ ಮುಂದೆ ಇಡಲಾಗುವುದು

4.4 ಕೆಎಸ್ಟಿಎ ಕನ್ಸಲ್ಟೆಂಟ್‌ಗಳು ಮತ್ತು ಸಂಸ್ಥೆಯ ನಡುವಿನ ತ್ರಿಪಕ್ಷೀಯ ಒಪ್ಪಂದಗಳೊಂದಿಗೆ, ಬೇಡಿಕೆ ಹಾಗೂ ಎಮೆರಿಟಸ್ ಕನ್ಸಲ್ಟೆಂಟ್‌ಗಳ ಪರಿಣತಿಯ ನಡುವಿನ ಹೊಂದಾಣಿಕೆಯ ಜೊತೆಗೆ ಅಗತ್ಯ–ಆಧಾರಿತ ಕನ್ಸಲ್ಟೆನ್ಸಿ ಸೇವೆಗಳು

## 5. ಸಾಂಸ್ಥಿಕ ಸಹಯೋಗ

ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಉತ್ತೇಜಿಸಲು ಮತ್ತು ವಿಜ್ಞಾನವನ್ನು ರಾಜ್ಯದಲ್ಲಿ ಜನಪ್ರಿಯಗೊಳಿಸಲು, ಕೆಎಸ್ಟಿಎ ಇದೇ ರೀತಿಯ ಆಸಕ್ತಿಗಳು ಮತ್ತು ಕಾರ್ಯಕ್ರಮಗಳಿರುವ ಸಾರ್ವಜನಿಕ, ಕಾರ್ಪೊರೇಟ್ ಮತ್ತು ಖಾಸಗಿ ಸಂಸ್ಥೆಗಳೊಂದಿಗೆ ಸಹವರ್ತಿಸುತ್ತದೆ. ಆರಂಭಿಕ ಹಂತದಲ್ಲಿ, ಆಸಕ್ತಿಯ ಅಭಿವ್ಯಕ್ತಿಯು ಕೆಳಗೆ ನೀಡಲಾಗಿರುವ ನಮೂನೆಯಲ್ಲಿನ ಮೆಮರಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್ (ಎಂಒಯು) ಮೂಲಕ ಇರುತ್ತದೆ ಹಾಗೂ ಮುಂದುವರಿದು, ಮಾನವಶಕ್ತಿ, ಹಣಕಾಸು ಇತ್ಯಾದಿಗಳನ್ನು ಒಳಗೊಂಡ ನಿರ್ದಿಷ್ಟ ಚಟುವಟಿಕೆಗಳಿಗಾಗಿ ಕಾನೂನಾತ್ಮಕವಾಗಿಯೂ ಪರಿಶೀಲಿಸಲಾದ, ಪರಸ್ಪರ ಅಂಗೀಕರಿಸಿದ ನಿಯಮಗಳು ಮತ್ತು ಷರತ್ತುಗಳನ್ನು ಕುರಿತ ಮೆಮರಾಂಡಮ್ ಆಫ್ ಅಗ್ರೀಮೆಂಟ್ (ಎಂಒಎ) ಮೂಲಕ ಇರುತ್ತದೆ.

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು

## ಮತ್ತು

---

## ಮೆಮರಾಂಡಮ್ ಆಫ್ ಅಂಡರ್‌ಸ್ಟಾಂಡಿಂಗ್

ಈ ಮೆಮರಾಂಡಮ್ ಆಫ್ ಅಂಡರ್‌ಸ್ಟಾಂಡಿಂಗ್ ("ಎಂಒಯು") ಅನ್ನು ______________ ದಿನಾಂಕದಂದು ("ಜಾರಿಗೆ ಬರುವ ದಿನಾಂಕ"), ಇವರುಗಳ ಮೂಲಕ ಮತ್ತು ನಡುವೆ ದಾಖಲಿಸಲಾಗುತ್ತಿದೆ

ಅದರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರತಿನಿಧಿಸುವ, ಹಾಗೂ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಪ್ರೊ.ಯು.ಆರ್.ರಾವ್ ವಿಜ್ಞಾನ ವಿಜ್ಞಾನ ಭವನ, ತೋಟಗಾರಿಕೆ ವಿಜ್ಞಾನಗಳ ಕಾಲೇಜು ಆವರಣ, ಜಿಕೆವಿಕೆ ಕ್ಯಾಂಪಸ್, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ ಬಡಾವಣೆ, ವಿದ್ಯಾರಣ್ಯಪುರ, ಬೆಂಗಳೂರು 560097 ಎಂಬ ವಿಳಾಸ ಹೊಂದಿರುವ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ (ಕೆಎಸ್ಟಿಎ), ಬೆಂಗಳೂರು,; ಮತ್ತು

("[ಹೆಸರು]") ಮತ್ತು ____________________, ________________________ ವಿಳಾಸದೊಂದಿಗೆ, ಒಟ್ಟಾರೆಯಾಗಿ "ಪಕ್ಷಗಳು."

ಸಾಮಾಜಿಕ ಕಲ್ಯಾಣಕ್ಕಾಗಿ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಯನ್ನು ಉತ್ತೇಜಿಸುವ ಉದ್ದೇಶದಿಂದ ಜತೆಯಾಗಿ ಕಾರ್ಯನಿರ್ವಹಿಸುವುದಕ್ಕೆ ಮತ್ತು ಪಾಲುದಾರಿಕೆಗಾಗಿ ಒಪ್ಪಂದ ಮಾಡಿಕೊಳ್ಳಲು ಪಕ್ಷಗಳು ಬಯಸುತ್ತವೆ; ಮತ್ತು

ಪಕ್ಷಗಳು ತಮ್ಮ ನಿರೀಕ್ಷಿತ ಪ್ರಯತ್ನದ ಕೆಲವು ನಿಯಮಗಳು ಮತ್ತು ಷರತ್ತುಗಳು ನೆನಪಿನಲ್ಲಿರುವಂತೆ ಮಾಡಲು ಬಯಸುತ್ತವೆ;

ಆದ್ದರಿಂದ ಈಗ, ಇಲ್ಲಿರುವ ಪರಸ್ಪರ ಭರವಸೆಗಳು ಮತ್ತು ಒಪ್ಪಂದಗಳನ್ನು ಪರಿಗಣಿಸಿ, ಪಕ್ಷಗಳು ಈ ಕೆಳಗಿನಂತೆ ಒಪ್ಪಿಕೊಳ್ಳುತ್ತವೆ:

1. ಉದ್ದೇಶ ಮತ್ತು ವ್ಯಾಪ್ತಿ. ಇವಕ್ಕೆ ಸಂಬಂಧಿಸಿದ ಯಾವುದೇ ಮತ್ತು ಎಲ್ಲ ನಿರೀಕ್ಷಿತ ಬಂಧಿಸುವ ಒಪ್ಪಂದಕ್ಕೆ ಅಡಿಪಾಯ ಮತ್ತು ರಚನೆಯನ್ನು ಈ ಎಂಒಯು ಒದಗಿಸಬೇಕೆಂದು ಪಕ್ಷಗಳು ಉದ್ದೇಶಿಸಿವೆ:

   (i) ವಿಜ್ಞಾನ ಸಂವಹನದ ಮೂಲಕ ನಾಗರಿಕ ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು

   (ii) ಗ್ರಾಮೀಣ ಪ್ರದೇಶಗಳನ್ನು ಕೇಂದ್ರೀಕರಿಸಿ ಅಕಾಡೆಮಿ–ಫಾರ್ಮ್–ಇಂಡಸ್ಟ್ರಿ ಇಂಟರ್ಫೇಸ್ ಮೂಲಕ ತಂತ್ರಜ್ಞಾನ ಪ್ರಸರಣಕ್ಕೆ ಅನುಕೂಲ ಕಲ್ಪಿಸುವುದು

   (iii) ಸಾಮಾಜಿಕ ಲಾಭಗಳಿಗಾಗಿ ನಾವೀನ್ಯತೆ ಮತ್ತು ಉದ್ಯಮಶೀಲತೆಯನ್ನು ಬೆಳೆಸುವುದು

   (iv) ಸಮಾವೇಶಗಳು ಮತ್ತು ಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸುವುದು

   (v) ವಿಜ್ಞಾನ ಮತ್ತು ತಂತ್ರಜ್ಞಾನದ ಮುಂಚೂಣಿ ಕ್ಷೇತ್ರಗಳಲ್ಲಿ ಸಾಮರ್ಥ್ಯ ವೃದ್ಧಿ

   (vi) ಪರಸ್ಪರ ಒಪ್ಪಿಗೆಯೊಂದಿಗೆ ಇತರ ಯಾವುದೇ ಅಂಶಗಳು

2. **ಉದ್ದೇಶಗಳು. ಪಕ್ಷಗಳು ಈ ಕೆಳಗಿನಂತೆ ಒಪ್ಪುತ್ತವೆ:**

1.0 ಎಂಒಯುನ ಉದ್ದೇಶದ ಸಾಧನೆ ಮತ್ತು ನೆರವೇರಿಕೆ ಸಾಧ್ಯವಾಗುವಂತೆ ಮಾಡಲು ಪಕ್ಷಗಳು ಸಹಕಾರಿ ಮತ್ತು ಸಂಘಟಿತ ಪ್ರಯತ್ನದಲ್ಲಿ ಒಟ್ಟಾಗಿ ಕೆಲಸ ಮಾಡುತ್ತವೆ

1.1 ಇತರ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ವ್ಯಕ್ತಿಗಳು, ಏಜೆನ್ಸಿಗಳು ಅಥವಾ ಸಂಸ್ಥೆಗಳೊಂದಿಗೆ ಒಳಗೊಳ್ಳುವಿಕೆ ಅಥವಾ ಪಾಲ್ಗೊಳ್ಳುವಿಕೆಯಿಂದ ಈ ಒಪ್ಪಂದದ ಭಾಗವಾಗಿರುವ ಪಕ್ಷಗಳನ್ನು ನಿರ್ಬಂಧಿಸುವುದು ಈ ಎಂಒಯುನ ಉದ್ದೇಶವಲ್ಲ

1.2 ಪಕ್ಷಗಳ ಮೂಲಕ ಅಥವಾ ನಡುವೆ ಯಾವುದೇ ಹಕ್ಕುಗಳು, ಪ್ರಯೋಜನಗಳು ಮತ್ತು / ಅಥವಾ ವಿಶ್ವಾಸಾರ್ಹ ಜವಾಬ್ದಾರಿಗಳನ್ನು ರೂಪಿಸಲು ಈ ಎಂಒಯು ಉದ್ದೇಶಿಸಿಲ್ಲ

1.3 ಪರಸ್ಪರ ಚಟುವಟಿಕೆಗಳನ್ನು ನಿರ್ವಹಿಸುವುದಕ್ಕೆ ಮತ್ತು / ಅಥವಾ ಪೋಷಿಸುವುದಕ್ಕೆ ಹಣವನ್ನು ಪೂರೈಸಲು ಈ ಎಂಒಯು ಯಾವುದೇ ರೀತಿಯಲ್ಲಿ ಯಾವುದೇ ಪಕ್ಷವನ್ನು ನಿರ್ಬಂಧಿಸುವುದಿಲ್ಲ

3. **ಅವಧಿ**. ಈ ಒಪ್ಪಂದವು, ಮೇಲೆ ತಿಳಿಸಿದಂತೆ, ಜಾರಿಗೆ ಬರುವ ದಿನಾಂಕದಂದು ಪ್ರಾರಂಭವಾಗುತ್ತದೆ ಮತ್ತು (ಐದು ವರ್ಷಗಳು) ______________________ ರವರೆಗೆ ಮುಂದುವರಿಯುತ್ತದೆ.

4. **ಮುಕ್ತಾಯ** ಈ ಒಪ್ಪಂದವನ್ನು ಯಾವುದೇ ಪಕ್ಷವು ಇತರ ಪಕ್ಷಕ್ಕೆ 30 ದಿನಗಳ ಲಿಖಿತ ಸೂಚನೆಯ ಮೇರೆಗೆ ಯಾವುದೇ ಸಮಯದಲ್ಲಿ ಮುಕ್ತಾಯಗೊಳಿಸಬಹುದು.

5. **ಪ್ರತಿನಿಧಿತ್ವಗಳು ಮತ್ತು ವಾರಂಟಿಗಳು.** ಈ ಒಪ್ಪಂದಕ್ಕೆ ಪ್ರವೇಶಿಸಲು ತಮಗೆ ಸಂಪೂರ್ಣ ಅಧಿಕಾರವಿದೆ ಎಂದು ಎರಡೂ ಪಕ್ಷಗಳು ಪ್ರತಿನಿಧಿಸುತ್ತವೆ. ಎರಡೂ ಪಕ್ಷಗಳ ಕಾರ್ಯಕ್ಷಮತೆ ಮತ್ತು ಕಟ್ಟುಪಾಡುಗಳು ಯಾವುದೇ ಮೂರನೇ ವ್ಯಕ್ತಿಯ ಹಕ್ಕುಗಳನ್ನು

ಉಲ್ಲಂಘಿಸುವುದಿಲ್ಲ ಅಥವಾ ನಿರ್ಲಕ್ಷಿಸುವುದಿಲ್ಲ ಅಥವಾ ಪಕ್ಷಗಳ ನಡುವೆ, ಪ್ರತ್ಯೇಕವಾಗಿ, ಮತ್ತು ಇತರ ಯಾವುದೇ ವ್ಯಕ್ತಿ, ಸಂಸ್ಥೆ ಅಥವಾ ವ್ಯವಹಾರದ ಜೊತೆಗಿನ ಒಪ್ಪಂದವನ್ನು ಅಥವಾ ಯಾವುದೇ ಕಾನೂನು ಅಥವಾ ಸರ್ಕಾರಿ ನಿಬಂಧನೆಯನ್ನು ಉಲ್ಲಂಘಿಸುವುದಿಲ್ಲ.

6. **ಸಂಪೂರ್ಣ ಒಪ್ಪಂದ.** ಈ ಒಪ್ಪಂದವು ಪಕ್ಷಗಳ ನಡುವಿನ ಸಂಪೂರ್ಣ ಒಪ್ಪಂದವನ್ನು ಪ್ರತಿನಿಧಿಸುತ್ತದೆ ಎಂದು ಪಕ್ಷಗಳು ಅಂಗೀಕರಿಸುತ್ತವೆ ಮತ್ತು ಒಪ್ಪುತ್ತವೆ. ಯಾವುದೇ ನಿಯಮಗಳನ್ನು ಬದಲಾಯಿಸಲು, ಸೇರಿಸಲು ಅಥವಾ ಮಾರ್ಪಡಿಸಲು ಪಕ್ಷಗಳು ಬಯಸಿದರೆ, ಅವು ಎರಡೂ ಪಕ್ಷಗಳ ಸಹಿಯೊಂದಿಗೆ ಅದನ್ನು ಲಿಖಿತವಾಗಿ ಮಾಡುತ್ತವೆ.

ಪಕ್ಷಗಳು ಈ ಕೆಳಗಿನ ತಮ್ಮ ಸಹಿಯಿಂದ ಪ್ರದರ್ಶಿಸಿದಂತೆ ಮೇಲೆ ತಿಳಿಸಲಾದ ನಿಯಮಗಳು ಮತ್ತು ಷರತ್ತುಗಳನ್ನು ಒಪ್ಪುತ್ತವೆ:

**ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು**

ಸಹಿ: ______________________

ಇವರಿಂದ:

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕೆಎಸ್ಟಿಎ, ಬೆಂಗಳೂರು

ದಿನಾಂಕ: ______________________

"[ಹೆಸರು]"

ಸಹಿ: ______________________

ಇವರಿಂದ: ______________________

ದಿನಾಂಕ: ______________________

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು

## VII. ಸಣ್ಣ ಅನುದಾನ ಯೋಜನೆ / ಅಲ್ಪಾವಧಿಯ ಅಧ್ಯಯನಗಳಿಗೆ ಮಾರ್ಗಸೂಚಿಗಳು

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗವಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ 2005ರಿಂದ ಕಾರ್ಯನಿರ್ವಹಿಸುತ್ತಿದ್ದು, ವಿಜ್ಞಾನ ಸಂವಹನ, ತಂತ್ರಜ್ಞಾನ ಪ್ರಸಾರ, ಸಾಮಾಜಿಕ ಲಾಭಕ್ಕಾಗಿ ನಾವೀನ್ಯತೆ ಮತ್ತು ಉದ್ಯಮಶೀಲತೆಗಳನ್ನು ಬೆಳೆಸುವುದು, ಪ್ರತಿಭೆಗಳನ್ನು ಗುರುತಿಸುವುದು ಮತ್ತು ಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಾಮರ್ಥ್ಯ ವೃದ್ಧಿ ಹಾಗೂ ರಾಜ್ಯಕ್ಕೆ ಎಸ್ಟಿಐ ಕಾರ್ಯನೀತಿ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮೂಲಕ ನಾಗರಿಕ ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಉದ್ದೇಶ ಹೊಂದಿದೆ.

ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ವಿಶೇಷವಾಗಿ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಜಾಗೃತಿಯನ್ನು ಪಸರಿಸಲು; ಬೋಧಕ ಸಿಬ್ಬಂದಿಯನ್ನು ವಿಜ್ಞಾನ ಮತ್ತು ತಂತ್ರಜ್ಞಾನದ ಹೊಸ ದಿಗಂತಗಳಿಗೆ ಪರಿಚಯಿಸಲು; ವಿಜ್ಞಾನ ಮತ್ತು ಸಮಾಜಕ್ಕೆ ಸಂಬಂಧಿಸಿದ ಸಮಕಾಲೀನ ವಿಷಯಗಳ ಬಗ್ಗೆ ಜಾಗೃತಿ ಮೂಡಿಸಲು ಕೆಎಸ್ಟಿಎ ಕಾರ್ಯಾಗಾರಗಳು, ಸಿಂಪೋಸಿಯಾ ಮತ್ತು ಸೆಮಿನಾರ್ಗಳ ಜೊತೆಗೆ ಅಲ್ಪಾವಧಿಯ ಅಧ್ಯಯನಗಳನ್ನೂ ಬೆಂಬಲಿಸುತ್ತದೆ.

**1. ಉದ್ದೇಶಗಳು**

1.1 ಪ್ರಸ್ತುತ ವಿಜ್ಞಾನ ವಿಷಯಗಳು ಮತ್ತು ಉದಯೋನ್ಮುಖ ಪ್ರವೃತ್ತಿಗಳಿಗೆ ಸಂಬಂಧಿಸಿದಂತೆ ಸ್ನಾತಕೋತ್ತರ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು ಮತ್ತು ಹೊಸ ಅಧ್ಯಾಪಕರಿಗೆ ಮಾಹಿತಿ ಒದಗಿಸುವುದು ಮತ್ತು ಅವರಲ್ಲಿ ಜಾಗೃತಿ ಮೂಡಿಸುವುದು

1.2 ಮುಂಚೂಣಿ ಕ್ಷೇತ್ರಗಳಲ್ಲಿ ಸಂಶೋಧನೆ ಕೈಗೊಳ್ಳಲು ಯುವಜನತೆಯನ್ನು ಪ್ರೇರೇಪಿಸುವುದು ಮತ್ತು ಪ್ರೋತ್ಸಾಹಿಸುವುದು; ಸಂಶೋಧನೆ ಮತ್ತು ಉನ್ನತ ಕಲಿಕಾ ಸಂಸ್ಥೆಗಳಲ್ಲಿ ನಡೆಯುತ್ತಿರುವ ಸಂಶೋಧನೆಗಳಿಗೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುವುದು

1.3 ವಿವಿಧ ಹಂತದ ವಿದ್ಯಾರ್ಥಿಗಳಿಗೆ ಉದ್ಯೋಗ ಮತ್ತು ಉದ್ಯಮಶೀಲತೆಯ ಅವಕಾಶಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡುವುದು

1.4 ಅಕಾಡೆಮಿ ಅನುಮೋದಿಸಿದಂತೆ ಪ್ರಸ್ತುತ ವಿಷಯಗಳ ಬಗ್ಗೆ ಗುರುತಿಸಲಾದ ಅಲ್ಪಾವಧಿಯ ಅಧ್ಯಯನಗಳನ್ನು ನಡೆಸುವುದು

**2. ಅರ್ಹತೆ**

2.1 ಸಮಾಜದ ವಿವಿಧ ಕ್ಷೇತ್ರಗಳಿಗೆ ಮತ್ತು ರಾಜ್ಯದ ಪ್ರದೇಶಗಳಿಗೆ ಅನ್ವಯಿಸುವಂತೆ, ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಶಿಕ್ಷಣ ಸಂಸ್ಥೆಗಳು ಮತ್ತು ಸಂಬಂಧಿತ ಸಂಸ್ಥೆಗಳು

2.2 ಗೊತ್ತುಪಡಿಸಿದ ನೋಡಲ್ ಅಧಿಕಾರಿಯೊಬ್ಬರು ಸಿದ್ಧಪಡಿಸಿದ ಸಣ್ಣ ಅನುದಾನ ಯೋಜನೆಗೆ ಸಂಬಂಧಿಸಿದ ಪ್ರಸ್ತಾಪಗಳನ್ನು ಸಂಸ್ಥೆಗಳ ಮುಖ್ಯಸ್ಥರು ಶಿಫಾರಸು ಮಾಡಬೇಕಾಗುತ್ತದೆ ಮತ್ತು ಎನ್ಜಿಒಗಳ ಸಂದರ್ಭದಲ್ಲಿ, ಸಂಬಂಧಿತ ಚಟುವಟಿಕೆಗಳಲ್ಲಿ ಕನಿಷ್ಠ ಮೂರು ವರ್ಷಗಳವರೆಗೆ ಭಾಗಿಯಾಗಿರುವುದಕ್ಕೆ ಪುರಾವೆಗಳು ಮತ್ತು ಲೆಕ್ಕಪರಿಶೋಧನೆಯ ಅಧಿಕೃತ ಪ್ರಮಾಣಪತ್ರಗಳನ್ನು ಸಲ್ಲಿಸಬೇಕಾಗುತ್ತದೆ.

2.3 ಅಲ್ಪಾವಧಿಯ ಅಧ್ಯಯನಗಳ ಸಂದರ್ಭದಲ್ಲಿ, ಅಕಾಡೆಮಿಯು ವಿಷಯಗಳನ್ನು ಗುರುತಿಸುತ್ತದೆ ಮತ್ತು ಸಂಸ್ಥೆಗಳು / ವ್ಯಕ್ತಿಗಳಿಂದ ಆಸಕ್ತಿಯ ಅಭಿವ್ಯಕ್ತಿಯನ್ನು ಆಹ್ವಾನಿಸುತ್ತದೆ ಅಥವಾ ಅದನ್ನು ಕೆಎಸ್ಟಿಎ ಮತ್ತು ಸಂಸ್ಥೆ / ವ್ಯಕ್ತಿಗಳೊಂದಿಗೆ ಪರಸ್ಪರ ಒಪ್ಪಿಗೆಯ ಮೇಲೆ ಕೈಗೊಳ್ಳಲಾಗುತ್ತದೆ.

**3. ಪ್ರಮುಖ ಕ್ಷೇತ್ರಗಳು :**

3.1 ಮೂಲಭೂತ ವಿಜ್ಞಾನ ಮತ್ತು ತಂತ್ರಜ್ಞಾನಗಳಿಗೆ ಸಂಬಂಧಿಸಿದ ವಿಷಯಗಳ ಕುರಿತು ವಿದ್ಯಾರ್ಥಿಗಳಿಗೆ ಕಾರ್ಯಾಗಾರಗಳು ಮತ್ತು ತಜ್ಞರ ಉಪನ್ಯಾಸ

3.2 ಪ್ರಸ್ತುತ ಪ್ರವೃತ್ತಿಗಳು ಮತ್ತು ಹೊಸ ದಿಗಂತಗಳಿಗೆ ಸಂಬಂಧಿಸಿದಂತೆ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ ವಿಜ್ಞಾನಗಳಲ್ಲಿ ಬೋಧಕರಿಗೆ ರಿಫ್ರೆಶರ್ ಕೋರ್ಸ್‌ಗಳು

3.3 ಪ್ರಬಂಧ, ರಸಪ್ರಶ್ನೆ, ಚರ್ಚಾಸ್ಪರ್ಧೆಗಳು, ಆಶುಭಾಷಣ, ಕಲಾ ಸ್ಪರ್ಧೆಗಳು ಸೇರಿದಂತೆ ವಿಜ್ಞಾನ ಮತ್ತು ತಂತ್ರಜ್ಞಾನ ಸಂಬಂಧಿತ ಕಾರ್ಯಾಗಾರಗಳು ಮತ್ತು ಸಂಪರ್ಕ ಕಾರ್ಯಕ್ರಮಗಳ ಸಂಘಟನೆ

3.4 ವೈಜ್ಞಾನಿಕ ಸಾಕ್ಷರತೆ ಮತ್ತು ಜಾಗೃತಿಯನ್ನು ಹೆಚ್ಚಿಸುವ ಪ್ರಯತ್ನಗಳು, ಸಾರ್ವಜನಿಕರಲ್ಲಿ ಮೂಢನಂಬಿಕೆಗಳನ್ನು ಹೋಗಲಾಡಿಸುವ ಕಾರ್ಯಕ್ರಮಗಳು

3.5 ಆರು ತಿಂಗಳು ಮೀರದ ಅವಧಿಗೆ ವಿಜ್ಞಾನ ಶಿಕ್ಷಣ ಮತ್ತು ಸಂವಹನ ಹಾಗೂ ಸಂಬಂಧಿತ ಪ್ರಭಾವದ ಮೌಲ್ಯಮಾಪನಕ್ಕೆ ಸಂಬಂಧಿಸಿದ ಅಲ್ಪಾವಧಿಯ ಅಧ್ಯಯನಗಳು

**4. ಆಡಳಿತ / ಹಣಕಾಸು**

4.1 ನಿಗದಿತ ಸ್ವರೂಪದಲ್ಲಿರುವ ಅರ್ಜಿಗಳನ್ನು ವರ್ಷದ ಯಾವ ಸಮಯದಲ್ಲಾದರೂ ಕಳುಹಿಸಬಹುದು.

4.2 ಅನುಮೋದಿತ ಚಟುವಟಿಕೆಯನ್ನು ಕಾಲಾವಧಿಯಲ್ಲಿ ಕೈಗೊಳ್ಳಬೇಕಾಗುತ್ತದೆ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರು ಮತ್ತು ಕೆಎಸ್‌ಟಿಎ ಅಧಿಕಾರಿಗಳನ್ನು ಸೂಕ್ತ ಸಂದರ್ಭಗಳಿಗಾಗಿ ಆಹ್ವಾನಿಸಬೇಕಾಗುತ್ತದೆ

4.3 ಬ್ಯಾನರ್‌ಗಳು, ಆಮಂತ್ರಣಗಳು ಮತ್ತು ಪ್ರಮಾಣಪತ್ರಗಳು ಸೇರಿದಂತೆ ಪ್ರದರ್ಶನ ಸಾಮಗ್ರಿಗಳಲ್ಲಿ ಅಕಾಡೆಮಿಯ ಲಾಂಛನ ಮತ್ತು ವಿವರಗಳನ್ನು ಸರಿಯಾಗಿ ಪ್ರದರ್ಶಿಸಬೇಕು; ಭಾಗವಹಿಸುವವರ ವಿವರಗಳನ್ನು ಸಂಘಟಕರು ಅಕಾಡೆಮಿಗೆ ಒದಗಿಸಬೇಕು

4.4 ಈ ಉದ್ದೇಶಕ್ಕಾಗಿ ಅಕಾಡೆಮಿ ಒದಗಿಸುವ ಬಜೆಟ್ ಸಣ್ಣ ಅನುದಾನ ಯೋಜನೆಗೆ ರೂ. 50,000/–; ಮತ್ತು ಅಲ್ಪಾವಧಿಯ ಅಧ್ಯಯನದ ಸಂದರ್ಭದಲ್ಲಿ ರೂ. 1,00,000/– ಮೀರುವುದಿಲ್ಲ

4.5 ನೋಡಲ್ ಅಧಿಕಾರಿಯು ಕಾರ್ಯಕ್ರಮ ವಿವರ ಮತ್ತು ಅಕಾಡೆಮಿಯಿಂದ ಅನುಮೋದಿಸಲ್ಪಟ್ಟ ಸಂಪನ್ಮೂಲ ವ್ಯಕ್ತಿಗಳ ಪಟ್ಟಿಯನ್ನು ಹೊಂದಿರುತ್ತಾರೆ. ಪ್ರತಿಯೊಬ್ಬ ಸಂಪನ್ಮೂಲ ವ್ಯಕ್ತಿಯೂ 90 ನಿಮಿಷಗಳ ಉಪನ್ಯಾಸಕ್ಕೆ ರೂ. 2,000/– ಗೌರವ ಧನಕ್ಕೆ ಅರ್ಹರಾಗುತ್ತಾರೆ ಮತ್ತು ಅವರು ಒಂದು ಕಾರ್ಯಕ್ರಮದಲ್ಲಿ ಗರಿಷ್ಠ ಎರಡು ಉಪನ್ಯಾಸಗಳನ್ನು ನೀಡಬಹುದಾಗಿರುತ್ತದೆ; ಅಲ್ಪಾವಧಿಯ ಅಧ್ಯಯನಗಳ ಸಂದರ್ಭದಲ್ಲಿ, ಕಾರ್ಯಕ್ರಮ ಮತ್ತು ಅಕಾಡೆಮಿ ಅನುಮೋದಿಸಿದ ತಂಡದ ಪಟ್ಟಿಯನ್ನು ಪಿಐ ಹೊಂದಿರುತ್ತಾರೆ

4.6 ನೋಡಲ್ ಅಧಿಕಾರಿ / ಪಿಐಗೆ ರೂ. 5,000/– ನೀಡುವ ಅವಕಾಶದೊಂದಿಗೆ, ಬಜೆಟ್ ನಿಬಂಧನೆಗಳು ಸಂಪನ್ಮೂಲ ವ್ಯಕ್ತಿಗಳಿಗೆ ಸಂಭಾವನೆ, ಪ್ರಯಾಣ ವೆಚ್ಚಗಳು, ಲೇಖನ ಸಾಮಗ್ರಿಗಳು, ಆಹಾರ ಮತ್ತು ಉಪಾಹಾರಗಳು, ಬಹುಮಾನಗಳು ಮತ್ತು ಅಗತ್ಯವಿರುವ ವಸತಿ ಸೌಕರ್ಯಗಳು, ಆಡಿಟ್ ವೆಚ್ಚಗಳು ಇತ್ಯಾದಿಗಳನ್ನು ಅಸ್ತಿತ್ವದಲ್ಲಿರುವ ನಿಬಂಧನೆಗಳ ಪ್ರಕಾರ ಅಕಾಡೆಮಿಯ ಪೂರ್ವಾನುಮತಿಯೊಂದಿಗೆ ಒಳಗೊಂಡಿರುತ್ತವೆ

4.7 ಕೆಲಸ ಮುಗಿದ ನಂತರ, ನೋಂದಾಯಿತ ಚಾರ್ಟರ್ಡ್ ಅಕೌಂಟೆಂಟ್ಗಳಿಂದ ಲೆಕ್ಕಪರಿಶೋಧಿತವಾದ ಲೆಕ್ಕಪತ್ರಗಳೊಂದಿಗೆ, ಸಂಬಂಧಿತ ಛಾಯಾಚಿತ್ರಗಳೂ ಸೇರಿರುವ ಪ್ರಮಾಣೀಕೃತ ವರದಿಗಳನ್ನು ಒಂದು ತಿಂಗಳೊಳಗೆ ಸಲ್ಲಿಸಬೇಕು. ಅನ್ವಯವಾಗುವಲ್ಲೆಲ್ಲಾ, ಪಾಲುದಾರರ ಪ್ರತಿಕ್ರಿಯೆಗಳನ್ನು ಒದಗಿಸಬಹುದು

4.8 ಕೆಲಸದ ಕೊನೆಯಲ್ಲಿ ಮತ್ತು ವರದಿಯನ್ನು ಸಲ್ಲಿಸುವಾಗ ಅಗತ್ಯ ಬಳಕೆಯ ಪ್ರಮಾಣಪತ್ರವನ್ನು ಅಕಾಡೆಮಿಗೆ ಸಲ್ಲಿಸಬೇಕಾಗುತ್ತದೆ

4.9 ಅಕಾಡೆಮಿಯ ಪೂರ್ವ ಅನುಮೋದನೆಯೊಂದಿಗೆ, ಆತಿಥೇಯ ಸಂಸ್ಥೆಗಳ ಸಂಪನ್ಮೂಲಗಳೊಂದಿಗೆ, ಕಾರ್ಯಕ್ರಮಗಳಿಗೆ ಸರಿಯಾದ ಪ್ರಚಾರದೊಂದಿಗೆ ಕಾರ್ಯಕ್ರಮಗಳನ್ನುಇನ್ನಷ್ಟು ಸಮೃದ್ಧಗೊಳಿಸಬಹುದು

4.10 ಕೆಎಸ್‌ಟಿಎ ಮೂರನೆಯ ವ್ಯಕ್ತಿಗಳಿಂದ ಕಾರ್ಯಕ್ರಮಗಳ ಮೌಲ್ಯಮಾಪನವನ್ನು ಕೈಗೊಳ್ಳುತ್ತದೆ, ಮತ್ತು ಆ ಸಮಯದಲ್ಲಿ, ಆತಿಥೇಯ ಸಂಸ್ಥೆಗಳು / ಪ್ರಧಾನ ತನಿಖಾಧಿಕಾರಿಗಳು ಕಾರ್ಯಕ್ರಮ ಮತ್ತು ಅದರ ಪರಿಣಾಮದ ಅಗತ್ಯ ಮಾಹಿತಿಯನ್ನು ಒದಗಿಸುತ್ತಾರೆ

**ಅರ್ಜಿ ನಮೂನೆ**

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**(ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ)**

## ಸಣ್ಣ ಅನುದಾನಕ್ಕಾಗಿ ಅರ್ಜಿಯ ವಿವರ

1. ಪ್ರಸ್ತಾಪಿಸುವವರ ಹೆಸರು:
2. ಸಂಸ್ಥೆ:
3. ವಿಳಾಸ:
   ಇಮೇಲ್
   ದೂರವಾಣಿ ಸಂಖ್ಯೆ.
   ಫ್ಯಾಕ್ಸ್
4. ಸಹಯೋಗಿ ಸಂಸ್ಥೆ, ಯಾವುದಾದರೂ ಇದ್ದರೆ:
5. ಕಾರ್ಯಕ್ರಮದ ಶೀರ್ಷಿಕೆ:
6. ಕಾರ್ಯಕ್ರಮದ ಉದ್ದೇಶಗಳು:
7. ಪ್ರಸ್ತಾವಿತ ಚಟುವಟಿಕೆಗಳು:
8. ಅವಧಿ:
9. ನಿರೀಕ್ಷಿತ ಫಲಾನುಭವಿಗಳು:
10. ಬಜೆಟ್ ಅಂದಾಜು:
11. ಕಾರ್ಯಕ್ರಮದ ಸಂಕ್ಷಿಪ್ತ ಸಾರಾಂಶ (ಗರಿಷ್ಠ 250 ಪದಗಳು):
12. ಉದ್ದೇಶಿತ ಕಾರ್ಯಕ್ರಮವನ್ನು ಕೈಗೊಳ್ಳಲು ಸಮರ್ಥನೆ:
13. ಕಾರ್ಯಕ್ರಮದ ನಿರೀಕ್ಷಿತ ಫಲಿತಾಂಶಗಳು:

ಸ್ಥಳ: (ಹೆಸರು):

ದಿನಾಂಕ: ಸಹಿ:

ಅರ್ಜಿ ನಮೂನೆ

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

## (ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ)

## ಅಲ್ಪಾವಧಿಯ ಅಧ್ಯಯನಕ್ಕಾಗಿ ಅರ್ಜಿಯ ವಿವರ

1. ಪ್ರಸ್ತಾಪಿಸುವವರ ಹೆಸರು:
2. ಸಂಸ್ಥೆ:
3. ವಿಳಾಸ:
   ಇಮೇಲ್
   ದೂರವಾಣಿ ಸಂಖ್ಯೆ.
   ಫ್ಯಾಕ್ಸ್
4. ಸಹಯೋಗಿ ಸಂಸ್ಥೆ, ಯಾವುದಾದರೂ ಇದ್ದರೆ:
5. ಮೇಲ್ವಿಚಾರಕ / ಮಾರ್ಗದರ್ಶಿಯ ಹೆಸರು:
6. ಯೋಜನೆಗಾಗಿ ಯಾವುದೇ ಅನುದಾನವನ್ನು ಪಡೆಯಲಾಗಿದೆಯೇ? ಒಂದುವೇಳೆ ಪಡೆದಿದ್ದರೆ, ಏಜೆನ್ಸಿಯ ಹೆಸರು:
7. ಯೋಜನೆಯ ಶೀರ್ಷಿಕೆ:
8. ಯೋಜನೆಯ ಉದ್ದೇಶಗಳು:
9. ಯೋಜನೆಯಲ್ಲಿ ಪ್ರಸ್ತಾಪಿಸಲಾಗಿರುವ ಚಟುವಟಿಕೆಗಳು, ಹರಿವಿನ ನಕ್ಷೆಯೊಂದಿಗೆ:
10. ಯೋಜನೆಯ ಅವಧಿ:
11. ಬಜೆಟ್ ಅಂದಾಜು:
12. ಕಾರ್ಯಕ್ರಮದ ಸಂಕ್ಷಿಪ್ತ ಸಾರಾಂಶ (ಗರಿಷ್ಠ 250 ಪದಗಳು):
13. ಉದ್ದೇಶಿತ ಯೋಜನೆಯನ್ನು ಕೈಗೊಳ್ಳಲು ಸಮರ್ಥನೆ:
14. ಸಮಾಜಕ್ಕೆ ಉಪಯುಕ್ತತೆ ಸೇರಿದಂತೆ ಯೋಜನೆಯ ನಿರೀಕ್ಷಿತ ಫಲಿತಾಂಶಗಳು:

ಸ್ಥಳ: (ಹೆಸರು)

ದಿನಾಂಕ: ಸಹಿ

ಡಾ / ಶ್ರೀ / ಶ್ರೀಮತಿ.........................................................................ಖಾಯಂ ಸ್ಥಾನದಲ್ಲಿರುವಅಧ್ಯಾಪಕರು / ಸಂಶೋಧಕರಾಗಿ ಪ್ರಸ್ತುತ...................................................................................................ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

........................................ವಿಭಾಗದಲ್ಲಿ ಅಲ್ಪಾವಧಿ ಅಧ್ಯಯನವನ್ನು ಕೈಗೊಳ್ಳಲು ಸಣ್ಣ ಅನುದಾನಕ್ಕಾಗಿ ಅವರ ಅರ್ಜಿಯನ್ನು ನಾನು ಈ ಮೂಲಕ ರವಾನಿಸುತ್ತಿದ್ದೇನೆ.

ಸ್ಥಳ:
ದಿನಾಂಕ:

ಹೆಸರು
ವಿಭಾಗ / ಸಂಸ್ಥೆಯ ಮುಖ್ಯಸ್ಥರ ಸಹಿ
ಮತ್ತು ಸೀಲ್:

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು

## VIII. ಸ್ನಾತಕೋತ್ತರ ವಿಶೇಷ ಉಪನ್ಯಾಸ ಕಾರ್ಯಾಗಾರಗಳಿಗೆ ಮಾರ್ಗಸೂಚಿಗಳು

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗವಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ 2005ರಿಂದ ಕಾರ್ಯನಿರ್ವಹಿಸುತ್ತಿದ್ದು, ವಿಜ್ಞಾನ ಸಂವಹನ, ತಂತ್ರಜ್ಞಾನ ಪ್ರಸಾರ, ಸಾಮಾಜಿಕ ಲಾಭಕ್ಕಾಗಿ ನಾವೀನ್ಯತೆ ಮತ್ತು ಉದ್ಯಮಶೀಲತೆಗಳನ್ನು ಬೆಳೆಸುವುದು, ಪ್ರತಿಭೆಗಳನ್ನು ಗುರುತಿಸುವುದು ಮತ್ತು ಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಾಮರ್ಥ್ಯ ವೃದ್ಧಿ ಹಾಗೂ ರಾಜ್ಯಕ್ಕೆ ಎಸ್‌ಟಿಐ ಕಾರ್ಯನೀತಿ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮೂಲಕ ನಾಗರಿಕ ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಉದ್ದೇಶ ಹೊಂದಿದೆ.

ಇತ್ತೀಚಿನ ದಿನಗಳಲ್ಲಿ, ಮೂಲಭೂತ ವಿಜ್ಞಾನ, ಎಂಜಿನಿಯರಿಂಗ್, ಕೃಷಿ ಮತ್ತು ಕೆಲವು ಆನ್ವಯಿಕ ವಿಜ್ಞಾನ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣ ಮತ್ತು ಸಂಶೋಧನೆಯನ್ನು ಆರಿಸಿಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸುತ್ತಿದೆ. ಈ ಪ್ರವೃತ್ತಿ ನಮ್ಮ ಸುಸ್ಥಿರ ಅಭಿವೃದ್ಧಿ ಮತ್ತು ಸ್ಪರ್ಧಾತ್ಮಕತೆಯ ಮೇಲೆ, ವಿಶೇಷವಾಗಿ ಸದ್ಯದ ಜ್ಞಾನಾಧಾರಿತ ಆರ್ಥಿಕತೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು. ಇಂದಿನ ವಿಜ್ಞಾನವು ನಾಳಿನ ತಂತ್ರಜ್ಞಾನವಾಗಿರುವುದರಿಂದ, ಈ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣ ಮತ್ತು ಸಂಶೋಧನೆಯನ್ನು ಉತ್ತೇಜಿಸುವುದು ಅತ್ಯಗತ್ಯ. ಈ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ರಾಜ್ಯದಾದ್ಯಂತ ವಿವಿಧ ವಿಶ್ವವಿದ್ಯಾಲಯಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ಸಹಯೋಗದೊಂದಿಗೆ ಸ್ನಾತಕೋತ್ತರ ವಿಶೇಷ ಉಪನ್ಯಾಸ ಕಾರ್ಯಾಗಾರಗಳನ್ನು ಆಯೋಜಿಸುತ್ತಿದೆ.

**1. ಉದ್ದೇಶಗಳು**

1.1 ವಿಜ್ಞಾನ, ಎಂಜಿನಿಯರಿಂಗ್, ಕೃಷಿ ಮತ್ತು ಕೆಲವು ಆನ್ವಯಿಕ ವಿಜ್ಞಾನ ವಿದ್ಯಾರ್ಥಿಗಳಿಗೆ ಸಮಕಾಲೀನ ವಿಷಯಗಳು ಮತ್ತು ಆಧುನಿಕ ಸಂಶೋಧನೆಯಲ್ಲಿ ಇತ್ತೀಚಿನ ಪ್ರವೃತ್ತಿಯನ್ನು ಅರ್ಥಮಾಡಿಕೊಳ್ಳುವ ಅವಕಾಶ ಒದಗಿಸುವುದು

1.2 ವಿಜ್ಞಾನ, ಎಂಜಿನಿಯರಿಂಗ್, ಕೃಷಿ ಮತ್ತು ಕೆಲವು ಆನ್ವಯಿಕ ವಿಜ್ಞಾನಗಳಲ್ಲಿ ಉನ್ನತ ಶಿಕ್ಷಣ ಮತ್ತು ಸಂಶೋಧನೆಯನ್ನು ಉತ್ತೇಜಿಸುವುದು

1.3 ಹೆಸರಾಂತ ವೈಜ್ಞಾನಿಕ ಸಂಶೋಧನಾ ಸಂಸ್ಥೆಗಳಲ್ಲಿ ನಡೆಯುತ್ತಿರುವ ಸಂಶೋಧನೆಗಳ ಬಗ್ಗೆ ಅರಿವು ಮೂಡಿಸುವುದು

1.4 ನ್ಯಾನೊತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಮುಂತಾದ ಉದಯೋನ್ಮುಖ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಸುಧಾರಿತ ಸಂಶೋಧನೆಗಳ ಬಗ್ಗೆ ಮಾಹಿತಿ ನೀಡುವುದು.

**2. ಸಂಪನ್ಮೂಲ ತಜ್ಞರು**

2.1 ಹೆಸರಾಂತ ಸಂಶೋಧನಾ ಸಂಸ್ಥೆಗಳ ಸಂಪನ್ಮೂಲ ತಜ್ಞರು ಮತ್ತು ಪ್ರಸಿದ್ಧ ಉದ್ಯಮಿಗಳು

2.2 ನ್ಯಾನೊತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಮುಂತಾದ ಉದಯೋನ್ಮುಖ ಕ್ಷೇತ್ರಗಳಲ್ಲಿನ ವೈಜ್ಞಾನಿಕ ಸಂಶೋಧನೆಯಲ್ಲಿ ಇತ್ತೀಚಿನ ಪ್ರವೃತ್ತಿಗಳು ಮತ್ತು ಉದ್ಯಮಶೀಲತೆಯ ಅವಕಾಶಗಳನ್ನು ಕುರಿತು ಉಪನ್ಯಾಸ ನೀಡುತ್ತಾರೆ.

2.3 ಆಯಾ ಕ್ಷೇತ್ರಗಳಲ್ಲಿ ಅವರ ಪರಿಣತಿಯ ಆಧಾರದ ಮೇಲೆ 10–15 ಸಂಪನ್ಮೂಲ ತಜ್ಞರನ್ನು ಗುರುತಿಸಲಾಗುತ್ತದೆ ಮತ್ತು ಅವರಲ್ಲಿ 8 ಸಂಪನ್ಮೂಲ ತಜ್ಞರನ್ನು ಆಯ್ದು, ವೆಬಿನಾರ್‌ಗಳು ಮತ್ತು ಐಸಿಟಿ ಪರಿಕರಗಳ ಬಳಕೆ ಸೇರಿದಂತೆ, ಅವರ ಲಭ್ಯತೆಗೆ ಅನುಗುಣವಾಗಿ ಉಪನ್ಯಾಸ ನೀಡಲು ಆಹ್ವಾನಿಸಲಾಗುತ್ತದೆ.

2.4 ರಾಜ್ಯದಾದ್ಯಂತ ವಿವಿಧ ವಿಶ್ವವಿದ್ಯಾಲಯಗಳ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಸಂಶೋಧನಾ ವಿದ್ವಾಂಸರು; ಭಾಗವಹಿಸುವವರ ಸಂಖ್ಯೆ 100 ಮೀರದಂತೆ ಆತಿಥೇಯ ಸಂಸ್ಥೆಗಳು ಯೋಜಿಸಬೇಕು

**3. ಮೌಲ್ಯಮಾಪನ**

3.1 ಉಪನ್ಯಾಸ ಕಾರ್ಯಾಗಾರಗಳ ಕೊನೆಯಲ್ಲಿ ಸಂಪನ್ಮೂಲ ತಜ್ಞರಿಂದ ವಿದ್ಯಾರ್ಥಿಗಳ ಮೌಲ್ಯಮಾಪನ (ತಲಾ 8–10 ಪ್ರಶ್ನೆಗಳು) ಒಂದು ಗಂಟೆಯ ಬಹು ಆಯ್ಕೆ ರಸಪ್ರಶ್ನೆಯೊಂದಿಗೆ

3.2 ಪ್ರೋತ್ಸಾಹಕವಾಗಿ, ನಾಲ್ಕು ಟಾಪರ್‌ಗಳಿಗೆ ಪ್ರಮಾಣಪತ್ರ ಮತ್ತು ನಗದು ಬಹುಮಾನ ನೀಡಲಾಗುತ್ತದೆ; ಮೊದಲ ಬಹುಮಾನ: ರೂ. 3,000/–; ಎರಡನೆಯ ಬಹುಮಾನ: ರೂ. 2,000/–; ಮೂರನೆಯ ಬಹುಮಾನ: ರೂ. 1,000/– (2)

3.3 ಪಾಲ್ಗೊಳ್ಳುವವರು ಭಾಗವಹಿಸುವಿಕೆಯ ಪ್ರಮಾಣಪತ್ರವನ್ನು ಪಡೆಯಲು ಅಕಾಡೆಮಿ ನಿರ್ಧರಿಸಿದಂತೆ ಕನಿಷ್ಠ ಅಂಕಗಳನ್ನು ಪಡೆಯಬೇಕು

**4. ಆಡಳಿತ / ಹಣಕಾಸು**

4.1 ನಿಗದಿತ ಸ್ವರೂಪದಲ್ಲಿರುವ ಅರ್ಜಿಗಳನ್ನು ವರ್ಷದ ಯಾವ ಸಮಯದಲ್ಲಾದರೂ ಕಳುಹಿಸಬಹುದು.

4.2 ವಿಶ್ವವಿದ್ಯಾನಿಲಯಗಳು / ಸಂಸ್ಥೆಗಳಲ್ಲಿ 2 ದಿನಗಳ ಕಾರ್ಯಾಗಾರದ ಬಜೆಟ್ ರೂ. 1.25 ಲಕ್ಷ (ಆತಿಥೇಯ ಸಂಸ್ಥೆಯ ಕೊಡುಗೆ ನಿರೀಕ್ಷಿಸಲಾಗಿದೆ) ಮತ್ತು 3 ದಿನಗಳಿಗೆ ರೂ. 2.7 ಲಕ್ಷ (ವಸತಿ, ಪ್ರಯಾಣ ಮತ್ತು ಬೋರ್ಡಿಂಗ್ ಶುಲ್ಕಗಳು ಸೇರಿದಂತೆ) ಆಗಿರುತ್ತದೆ

4.3 ನೋಡಲ್ ಅಧಿಕಾರಿಯು ಕಾರ್ಯಕ್ರಮ ವಿವರ ಮತ್ತು ಅಕಾಡೆಮಿಯಿಂದ ಅನುಮೋದಿಸಲ್ಪಟ್ಟ ಸಂಪನ್ಮೂಲ ವ್ಯಕ್ತಿಗಳ ಪಟ್ಟಿಯನ್ನು ಹೊಂದಿರುತ್ತಾರೆ. ಪ್ರತಿಯೊಬ್ಬ ಸಂಪನ್ಮೂಲ ವ್ಯಕ್ತಿಯೂ 90 ನಿಮಿಷಗಳ ಉಪನ್ಯಾಸಕ್ಕೆ ರೂ. 2,000/– ಗೌರವ ಧನಕ್ಕೆ ಅರ್ಹರಾಗುತ್ತಾರೆ ಮತ್ತು ಅವರು ಒಂದು ಕಾರ್ಯಕ್ರಮದಲ್ಲಿ ಗರಿಷ್ಠ ಎರಡು ಉಪನ್ಯಾಸಗಳನ್ನು ನೀಡಬಹುದಾಗಿರುತ್ತದೆ

4.4 ನೋಡಲ್ ಅಧಿಕಾರಿಗೆ ರೂ. 5,000/– ನೀಡುವ ಅವಕಾಶದೊಂದಿಗೆ, ಬಜೆಟ್ ನಿಬಂಧನೆಗಳು ಸಂಪನ್ಮೂಲ ವ್ಯಕ್ತಿಗಳಿಗೆ ಸಂಭಾವನೆ, ಪ್ರಯಾಣ ವೆಚ್ಚಗಳು, ಲೇಖನ ಸಾಮಗ್ರಿಗಳು, ಆಹಾರ ಮತ್ತು ಉಪಾಹಾರಗಳು, ಬಹುಮಾನಗಳು ಮತ್ತು ಅಗತ್ಯವಿರುವ ವಸತಿ ಸೌಕರ್ಯಗಳು, ಆಡಿಟ್ ವೆಚ್ಚಗಳು ಇತ್ಯಾದಿಗಳನ್ನು ಅಸ್ತಿತ್ವದಲ್ಲಿರುವ ನಿಬಂಧನೆಗಳ ಪ್ರಕಾರ ಅಕಾಡೆಮಿಯ ಪೂರ್ವಾನುಮತಿಯೊಂದಿಗೆ ಒಳಗೊಂಡಿರುತ್ತವೆ

4.5 ಕೆಲಸ ಮುಗಿದ ನಂತರ, ನೋಂದಾಯಿತ ಚಾರ್ಟರ್ಡ್ ಅಕೌಂಟೆಂಟ್‌ಗಳಿಂದ ಲೆಕ್ಕಪರಿಶೋಧಿತವಾದ ಲೆಕ್ಕಪತ್ರಗಳೊಂದಿಗೆ, ಸಂಬಂಧಿತ ಛಾಯಾಚಿತ್ರಗಳೂ ಸೇರಿರುವ ಪ್ರಮಾಣೀಕೃತ ವರದಿಗಳನ್ನು ಒಂದು ತಿಂಗಳೊಳಗೆ ಸಲ್ಲಿಸಬೇಕು. ಅನ್ವಯವಾಗುವಲ್ಲೆಲ್ಲಾ, ಪಾಲುದಾರರ ಪ್ರತಿಕ್ರಿಯೆಗಳನ್ನು ಒದಗಿಸಬಹುದು

4.6 ಕೆಲಸದ ಕೊನೆಯಲ್ಲಿ ಮತ್ತು ವರದಿಯನ್ನು ಸಲ್ಲಿಸುವಾಗ ಅಗತ್ಯ ಬಳಕೆಯ ಪ್ರಮಾಣಪತ್ರವನ್ನು ಅಕಾಡೆಮಿಗೆ ಸಲ್ಲಿಸಬೇಕಾಗುತ್ತದೆ

4.7 ಅಕಾಡೆಮಿಯ ಪೂರ್ವ ಅನುಮೋದನೆಯೊಂದಿಗೆ, ಆತಿಥೇಯ ಸಂಸ್ಥೆಗಳ ಸಂಪನ್ಮೂಲಗಳೊಂದಿಗೆ, ಕಾರ್ಯಕ್ರಮಗಳಿಗೆ ಸರಿಯಾದ ಪ್ರಚಾರದೊಂದಿಗೆ ಕಾರ್ಯಕ್ರಮಗಳನ್ನುಇನ್ನಷ್ಟು ಸಮೃದ್ಧಗೊಳಿಸಬಹುದು

4.8 ಕೆಎಸ್‌ಟಿಎ ಮೂರನೆಯ ವ್ಯಕ್ತಿಗಳಿಂದ ಕಾರ್ಯಕ್ರಮಗಳ ಮೌಲ್ಯಮಾಪನವನ್ನು ಕೈಗೊಳ್ಳುತ್ತದೆ, ಮತ್ತು ಆ ಸಮಯದಲ್ಲಿ, ಆತಿಥೇಯ ಸಂಸ್ಥೆಗಳು / ನೋಡಲ್ ಅಧಿಕಾರಿಗಳು ಕಾರ್ಯಕ್ರಮ ಮತ್ತು ಅದರ ಪರಿಣಾಮದ ಅಗತ್ಯ ಮಾಹಿತಿಯನ್ನು ಒದಗಿಸುತ್ತಾರೆ

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು

## ಋಷಿ. ಪ್ರಬಂಧ ಸ್ಪರ್ಧೆಗಳಿಗೆ ಮಾರ್ಗಸೂಚಿಗಳು

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗವಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ 2005ರಿಂದ ಕಾರ್ಯನಿರ್ವಹಿಸುತ್ತಿದ್ದು, ವಿಜ್ಞಾನ ಸಂವಹನ, ತಂತ್ರಜ್ಞಾನ ಪ್ರಸಾರ, ಸಾಮಾಜಿಕ ಲಾಭಕ್ಕಾಗಿ ನಾವೀನ್ಯತೆ ಮತ್ತು ಉದ್ಯಮಶೀಲತೆಗಳನ್ನು ಬೆಳೆಸುವುದು, ಪ್ರತಿಭೆಗಳನ್ನು ಗುರುತಿಸುವುದು ಮತ್ತು ಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಾಮರ್ಥ್ಯ ವೃದ್ಧಿ ಹಾಗೂ ರಾಜ್ಯಕ್ಕೆ ಎಸ್ಟಿಐ ಕಾರ್ಯನೀತಿ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮೂಲಕ ನಾಗರಿಕ ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಉದ್ದೇಶ ಹೊಂದಿದೆ.

ವಿಜ್ಞಾನ ಸಾಕ್ಷರತೆ ಮತ್ತು ಜಾಗೃತಿಯನ್ನು ಹರಡುವ ಉದ್ದೇಶದಿಂದ, ಪದವಿ ವಿದ್ಯಾರ್ಥಿಗಳು, ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಪ್ರತ್ಯೇಕವಾಗಿ ವಾರ್ಷಿಕ ಪ್ರಬಂಧ ಸ್ಪರ್ಧೆಗಳನ್ನು ಕೆಎಸ್‌ಟಿಎ ನಡೆಸುತ್ತದೆ.

### 1. ಪ್ರಕ್ರಿಯೆ

1.1 ಪ್ರಬಂಧ ಬರವಣಿಗೆಯ ಮೂಲಕ ಸೃಜನಶೀಲತೆ ಮತ್ತು ನಾಯಕತ್ವದ ಕೌಶಲಗಳನ್ನು ಉತ್ತೇಜಿಸುವುದು ಸ್ಪರ್ಧೆಯ ಮುಖ್ಯ ಉದ್ದೇಶವಾಗಿದೆ. ತ್ವರಿತವಾಗಿ ಯೋಚಿಸುವ, ಒಪ್ಪಿಸಬಲ್ಲ ರೀತಿಯಲ್ಲಿ ಬರೆಯುವ ಮತ್ತು ಉತ್ತಮವಾಗಿ ಸಂಪರ್ಕಿತವಾದ ವಿಚಾರಗಳನ್ನು ಸಮರ್ಥವಾದ ರೀತಿಯಲ್ಲಿ ಪ್ರಸ್ತುತಪಡಿಸುವ ಸಾಮರ್ಥ್ಯವನ್ನು ಸ್ಪರ್ಧೆಯು ಹೊರತರುತ್ತದೆ. ಉತ್ತಮ ಬರವಣಿಗೆಯ ಶೈಲಿಯು ವಿಜೇತರನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ

1.2 ನಿರ್ಣಾಯಕ ಚಿಂತನೆ ಮತ್ತು ತೀರ್ಮಾನಗಳನ್ನು ತಲುಪಲು ಪ್ರತಿಫಲಿತ ವಿಶ್ಲೇಷಣೆಯನ್ನು ಪ್ರಬಂಧ ಬರವಣಿಗೆ ಒಳಗೊಂಡಿರುತ್ತದೆ. ವಾದಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವಾಗ ಮತ್ತು ತಮ್ಮದೇ ಆದ ದೃಷ್ಟಿಕೋನವನ್ನು ಹೆಚ್ಚು ಕೂಲಂಕಷವಾಗಿ ಅಭಿವೃದ್ಧಿಪಡಿಸಿಕೊಳ್ಳಲು ನಿರ್ಧರಿಸುವಾಗ ವಿದ್ಯಾರ್ಥಿಗಳು ವಿಮರ್ಶಾತ್ಮಕ ಚಿಂತನೆಯ ಸವಾಲನ್ನು ಎದುರಿಸುತ್ತಾರೆ

1.3 ಮೂರು ಹಂತಗಳಿಗೆ ಪ್ರಬಂಧಗಳ ವಿಷಯಗಳು ಕೆಎಸ್‌ಟಿಎ ಕಾರ್ಯಕಾರಿ ಸಮಿತಿಯ ಸದಸ್ಯರ ಸಲಹೆಗಳ ಮೇಲೆ ಆಧಾರಿತವಾಗಲಿದ್ದು, ಅವನ್ನು ಜಾಲತಾಣದಲ್ಲಿ ಪ್ರಕಟಿಸಲಾಗುವುದು. ಅಕಾಡೆಮಿಯಲ್ಲಿ ಪ್ರಬಂಧಗಳನ್ನು (ಆನ್‌ಲೈನ್ ಮತ್ತು ಹಾರ್ಡ್ ಕಾಪಿ) ಸ್ವೀಕರಿಸಲು ಒಂದು ತಿಂಗಳ ಸಮಯವನ್ನು ನೀಡಲಾಗುತ್ತದೆ

1.4 ಪ್ರಬಂಧಗಳು ಸ್ವಂತ ರಚನೆಗಳಾಗಿರಬೇಕು, ಅವನ್ನು ಈ ಹಿಂದೆ ಎಲ್ಲಿಯೂ ಪ್ರಕಟಿಸಿರಬಾರದು ಅಥವಾ ಪ್ರಸ್ತುತಪಡಿಸಿರಬಾರದು, 10 ಪುಟಗಳನ್ನು ಮೀರಬಾರದು ಮತ್ತು ಅಕಾಡೆಮಿ ಸೂಚಿಸಿದಂತೆ ವರ್ಡ್ ಫಾರ್ಮ್ಯಾಟ್‌ನಲ್ಲಿರಬೇಕು

1.5 ಪ್ರಬಂಧದ ಜೊತೆಗೆ ಲೇಖಕರ ವಿವರಗಳನ್ನು ಪ್ರತ್ಯೇಕ ಹಾಳೆಯಲ್ಲಿ ಸ್ಪಷ್ಟವಾಗಿ ಒದಗಿಸಬಹುದು ಮತ್ತು ಹೆಚ್ಚಿನ ಪತ್ರವ್ಯವಹಾರವನ್ನು ಅಂಗೀಕರಿಸಲಾಗುವುದಿಲ್ಲ

### 2. ಅರ್ಹತೆ

2.1 ಪಾಲ್ಗೊಳ್ಳುವವರುಕರ್ನಾಟಕಮೂಲದವರಾಗಿದ್ದು, ಜಗತ್ತಿನ ಎಲ್ಲಿಯಾದರೂ ಇರಬಹುದು

2.2 ಪದವಿ ವಿದ್ಯಾರ್ಥಿಗಳು: ಸ್ನಾತಕ ಪದವಿ ಕಾರ್ಯಕ್ರಮಗಳಿಗೆ ದಾಖಲಾಗಿ ಇನ್ನೂ ಪೂರ್ಣಗೊಳಿಸಿಲ್ಲದವರು; ವಯಸ್ಸು 22 ವರ್ಷಕ್ಕಿಂತ ಹೆಚ್ಚಿರುವಂತಿಲ್ಲ

2.3 ಸ್ನಾತಕೋತ್ತರ ವಿದ್ಯಾರ್ಥಿಗಳು: ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ ದಾಖಲಾಗಿ ಇನ್ನೂ ಪೂರ್ಣಗೊಳಿಸಿಲ್ಲದವರು; ವಯಸ್ಸು 24 ವರ್ಷಕ್ಕಿಂತ ಹೆಚ್ಚಿರುವಂತಿಲ್ಲ

2.4 ಸಾರ್ವಜನಿಕರು: ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಗಳಲ್ಲಿ ಆಸಕ್ತಿ ಇರುವವರು, ವಯಸ್ಸು 50 ವರ್ಷಕ್ಕಿಂತ ಹೆಚ್ಚಿರುವಂತಿಲ್ಲ

**3. ಮೌಲ್ಯಮಾಪನ ಮತ್ತು ಪ್ರಶಸ್ತಿಗಳು**

3.1 ಪ್ರತಿವರ್ಷ ಜೂನ್ ತಿಂಗಳಲ್ಲಿ ಪ್ರಬಂಧ ಸ್ಪರ್ಧೆಯ ಪ್ರಕಟಣೆಯನ್ನು ಕೆಎಸ್‌ಟಿಎ ಜಾಲತಾಣದಲ್ಲಿ ಮತ್ತು ಪ್ರಮುಖ ಪತ್ರಿಕೆಯಲ್ಲಿ ಸುದ್ದಿಯಾಗಿ ಪ್ರಕಟಿಸಲಾಗುವುದು ಮತ್ತು ನಾಮನಿರ್ದೇಶನ ಪತ್ರಗಳನ್ನು ಅಕಾಡೆಮಿಯಲ್ಲಿ ಆ ವರ್ಷದ ಆಗಸ್ಟ್ 31ರವರೆಗೆ ಸ್ವೀಕರಿಸಲಾಗುವುದು

3.2 ಸ್ಪಷ್ಟತೆ ಮತ್ತು ವಿಷಯ; ಸ್ವಂತಿಕೆ ಮತ್ತು ಪ್ರಸ್ತುತತೆ; ರಚನೆ ಮತ್ತು ಹರಿವು; ಪ್ರಸ್ತುತಿ ಮತ್ತು ಸಂದೇಶವನ್ನು ಸಂವಹನ ಮಾಡುವಲ್ಲಿ ಪರಿಣಾಮಕಾರಿತ್ವಕ್ಕೆ ಸಂಬಂಧಪಟ್ಟ ಮಾನದಂಡಗಳೊಂದಿಗೆ ಪ್ರಬಂಧಗಳನ್ನು ಪರಿಣತ ಮೌಲ್ಯಮಾಪಕರ ಸಮಿತಿಯಿಂದ ಮೌಲ್ಯಮಾಪನ ಮಾಡಿಸಲಾಗುತ್ತದೆ

3.3 ಪ್ರಬಂಧಗಳನ್ನು ಸ್ವೀಕರಿಸಲು ಕೊನೆಯ ದಿನಾಂಕದ ಮೂರು ತಿಂಗಳೊಳಗೆ ಕೋಷ್ಟಕದಲ್ಲಿ ಸೂಚಿಸಿರುವಂತೆ ಪ್ರಶಸ್ತಿಗಳ ಫಲಿತಾಂಶಗಳನ್ನು ಕೆಎಸ್ಟಿಎ ಜಾಲತಾಣದಲ್ಲಿ ಪ್ರಕಟಿಸಲಾಗುವುದು

3.4 ಸಲ್ಲಿಸಿದ ಪ್ರಬಂಧಗಳ ಹಕ್ಕುಸ್ವಾಮ್ಯವನ್ನು ಕೆಎಸ್ಟಿಎ ಹೊಂದಿರುತ್ತದೆ ಮತ್ತು ಪ್ರಶಸ್ತಿ ವಿಜೇತ ಪ್ರಬಂಧಗಳನ್ನು ಸಂಪಾದಕೀಯ ಸಮಿತಿಯ ವಿವೇಚನೆಯಿಂದ ಕೆಎಸ್‌ಟಿಎ ಇ–ಸುದ್ದಿ ಪತ್ರದಲ್ಲಿ ಪ್ರಕಟಿಸಲಾಗುತ್ತದೆ

3.5 ಸ್ಪರ್ಧೆಗೆ ಯಾವುದೇ ಪ್ರಬಂಧಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಎಸ್‌ಟಿಎ ಹೊಂದಿದೆ ಮತ್ತು ಈ ವಿಷಯದಲ್ಲಿ ನಿರ್ಧಾರವು ಅಂತಿಮ ಮತ್ತು ಒಪ್ಪತಕ್ಕದ್ದಾಗಿರುತ್ತದೆ

3.6 ವರ್ಗಗಳ ವಿವರಗಳು ಮತ್ತು ಮೆರಿಟ್ ಪ್ರಮಾಣ ಪತ್ರಗಳೊಂದಿಗೆ ಬಹುಮಾನ / ಪ್ರಶಸ್ತಿಯ ಮೊತ್ತ (ಕನ್ನಡ ಮತ್ತು ಇಂಗ್ಲಿಷ್‌ಗೆ ಪ್ರತ್ಯೇಕ ಬಹುಮಾನಗಳು)

| ಕ್ರ.ಸಂ. | ವರ್ಗ | ಬಹುಮಾನ / ಪ್ರಶಸ್ತಿ(ರೂ.) |
|---|---|---|
| 1 | ಪದವಿ ವಿದ್ಯಾರ್ಥಿಗಳು | I – 10,000 / –<br>II –7,500 / –<br>III–5,000 / – |
| 2 | ಸ್ನಾತಕೋತ್ತರ ವಿದ್ಯಾರ್ಥಿಗಳು | I – 10,000 / –<br>II –7,500 / –<br>III–5,000 / – |
| 3 | ಸಾರ್ವಜನಿಕರು | I – 10,000 / –<br>II –7,500 / –<br>III–5,000 / – |

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು

## X. ವಿಜ್ಞಾನ ಸಂವಹನ ಸ್ಪರ್ಧೆಗಳಿಗೆ ಮಾರ್ಗಸೂಚಿಗಳು

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗವಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ 2005ರಿಂದ ಕಾರ್ಯನಿರ್ವಹಿಸುತ್ತಿದ್ದು, ವಿಜ್ಞಾನ ಸಂವಹನ, ತಂತ್ರಜ್ಞಾನ ಪ್ರಸಾರ, ಸಾಮಾಜಿಕ ಲಾಭಕ್ಕಾಗಿ ನಾವೀನ್ಯತೆ ಮತ್ತು ಉದ್ಯಮಶೀಲತೆಗಳನ್ನು ಬೆಳೆಸುವುದು, ಪ್ರತಿಭೆಗಳನ್ನು ಗುರುತಿಸುವುದು ಮತ್ತು ಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಾಮರ್ಥ್ಯ ವೃದ್ಧಿ ಹಾಗೂ ರಾಜ್ಯಕ್ಕೆ ಎಸ್ಟಿಐ ಕಾರ್ಯನೀತಿ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮೂಲಕ ನಾಗರಿಕ ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಉದ್ದೇಶ ಹೊಂದಿದೆ.

ವಿದ್ಯಾರ್ಥಿಗಳು, ಶಿಕ್ಷಕರು, ಸಂಶೋಧಕರು ಮತ್ತು ವಿದ್ವಾಂಸರು ತಮ್ಮ ಜ್ಞಾನ, ಸೃಜನಶೀಲತೆ, ವಿಶ್ಲೇಷಣಾತ್ಮಕ ಮತ್ತು ಪ್ರಸ್ತುತಿ ಮತ್ತು ಸಂವಹನ ಕೌಶಲ್ಯಗಳನ್ನು ಪ್ರದರ್ಶಿಸಲು ಹಾಗೂ ಕರ್ನಾಟಕ ರಾಜ್ಯದಲ್ಲಿ ಯುವ ಸಂವಹನ ಪಡೆ (ವೈಸಿಎಫ್) ಅನ್ನು ನಿರ್ಮಿಸಲು ಅವಕಾಶವನ್ನು ಒದಗಿಸುವ ಉದ್ದೇಶದಿಂದ. ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ 'ಟೆನ್ಮಿನ್ಸ್‌ಟು ಫೇಮ್: ವಿಡಿಯೋಲೆಕ್ಚರ್ ಸ್ಪರ್ಧೆ' ಎಂಬ ಸ್ಪರ್ಧೆಯನ್ನು ಆಯೋಜಿಸುತ್ತದೆ.

**1. ಪ್ರಕ್ರಿಯೆ**

1.1 ಪ್ರತಿವರ್ಷ ಆಗಸ್ಟ್ ತಿಂಗಳಲ್ಲಿ ಪ್ರಕಟಣೆಯನ್ನು ಕೆಎಸ್‌ಟಿಎ ಜಾಲತಾಣದಲ್ಲಿ ಮತ್ತು ಪ್ರಮುಖ ಪತ್ರಿಕೆಯಲ್ಲಿ ಸುದ್ದಿಯಾಗಿ ಪ್ರಕಟಿಸಲಾಗುತ್ತದೆ

1.2 ಕೆಎಸ್‌ಟಿಎ ಜಾಲತಾಣದಲ್ಲಿ ಸ್ಪರ್ಧೆಯ ಘೋಷಣೆಯಾದ ಒಂದು ತಿಂಗಳೊಳಗೆ ಆಸಕ್ತ ವ್ಯಕ್ತಿಗಳು ಜಾಲತಾಣದಲ್ಲಿ ಲಭ್ಯವಿರುವ ನಿಗದಿತ ಸ್ವರೂಪದಲ್ಲಿ ಪರಿಕಲ್ಪನೆಯನ್ನು ಸಂಕ್ಷಿಪ್ತವಾಗಿ 2 ನಿಮಿಷಗಳ ದೃಶ್ಯ ಸಾರಾಂಶದಂತೆ ಸಲ್ಲಿಸಬೇಕು (ವಿಡಿಯೋ ಕ್ಲಿಪಿಂಗ್)

1.3 ಎಲ್ಲ ಪ್ರವೇಶಗಳನ್ನೂ ತಜ್ಞರ ಸಮಿತಿಯು ಪರಿಶೀಲಿಸುತ್ತದೆ ಮತ್ತು ಸಾರಾಂಶಗಳನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಸ್ಪರ್ಧೆಯಲ್ಲಿ ಭಾಗವಹಿಸಲು ಅನುಮೋದನೆಗಳನ್ನು ನೀಡಲಾಗುತ್ತದೆ; ಮುಂದುವರಿದು, ವೀಡಿಯೊಗಳನ್ನು ಸಲ್ಲಿಸುವ ಅವಕಾಶ ಅನುಮೋದಿತ ಸ್ಪರ್ಧಿಗಳಿಗೆ ಮಾತ್ರ ಇರುತ್ತದೆ

1.4 ಆಯ್ದ ವಿಷಯಗಳ ಪ್ರಸ್ತುತಿಯನ್ನು ವಿಡಿಯೋಗ್ರಾಫ್ ಮಾಡಬೇಕು ಮತ್ತು ಅನುಮೋದನೆಯನ್ನು ತಿಳಿಸಿದ ಎರಡು ತಿಂಗಳೊಳಗೆ ಅಕಾಡೆಮಿಗೆ ವೀಡಿಯೊಗಳನ್ನು ಸಲ್ಲಿಸಬೇಕು, ಅದನ್ನು ಕೆಎಸ್‌ಟಿಎ ಜಾಲತಾಣದಲ್ಲೂ ಪ್ರಕಟಿಸಲಾಗುತ್ತದೆ

1.5 ಉಪನ್ಯಾಸದ ಮಾಧ್ಯಮವು ಕನ್ನಡ ಅಥವಾ ಇಂಗ್ಲಿಷ್ ಆಗಿರಬಹುದು ಮತ್ತು ಸ್ಥಳದಲ್ಲಿ ಸೆರೆಹಿಡಿದ ಪೂರಕ ದೃಶ್ಯಗಳು, ಅನಿಮೇಶನ್‌ಗಳು, ಕಂಪ್ಯೂಟರ್ ಚಿತ್ರಗಳು, ರೇಖಾಚಿತ್ರಗಳು, ಡೇಟಾ, ಸಂದರ್ಶನಗಳು ಇತ್ಯಾದಿಯನ್ನು ಅದು ಒಳಗೊಂಡಿರಬಹುದು

1.6 ವೀಡಿಯೊಗಳು ಈ ಹಿಂದೆ ಎಲ್ಲಿಯೂ ಪ್ರಕಟವಾಗಿರಬಾರದು (ಅಂತರಜಾಲ ಸೇರಿದಂತೆ), ಸಲ್ಲಿಸುವವರ ಸ್ವಂತದ್ದಾಗಿರಬೇಕು, ಹಾಗೂ ಅದನ್ನು ಈ ಹಿಂದೆ ಬೇರೆ ಯಾವುದೇ ಸ್ಪರ್ಧೆಗೆ ಸಲ್ಲಿಸಿರಬಾರದು

1.7 ಭಾಷೆ, ದೃಶ್ಯ ವಿಷಯ, ಪ್ರಸ್ತುತಿ, ಚರ್ಚಿಸಿದ ವಿಷಯಗಳು ಮತ್ತು ಸಂಬಂಧಿತ ವಿಷಯಗಳಿಗೆ ಸಂಬಂಧಿಸಿದಂತೆ ಪ್ರವೇಶಗಳು ಸಾಮಾನ್ಯ ಪ್ರೇಕ್ಷಕರಿಗೆ ಪ್ರದರ್ಶನಕ್ಕೆ ಸೂಕ್ತವಾಗಿರಬೇಕು

1.8 ವೀಡಿಯೊ ಗರಿಷ್ಠ 10 ನಿಮಿಷಗಳದ್ದಾಗಿರಬೇಕು

1.9 ಭಾಗವಹಿಸುವವರು 1920 x 1080 ಕ್ಕಿಂತ ಹೆಚ್ಚಿನ ರೆಸಲ್ಯೂಶನ್ ಹೊಂದಿರುವ ಎಂಪಿ 4, ಎಂಒವಿ, ಎಂಪಿಇಜಿ, ಎಫ್ಎಲ್‌ವಿ ಮತ್ತು ಎವಿಐ ಫಾರ್ಮ್ಯಾಟ್‌ಗಳಲ್ಲಿ ಪ್ರವೇಶಗಳನ್ನು ಸಲ್ಲಿಸಬಹುದು.

**2. ಅರ್ಹತೆ ಮತ್ತು ವಿಷಯಗಳು**

2.1 ಈ ಸ್ಪರ್ಧೆಯು ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿ ವಾಸಿಸುವ 35 ವರ್ಷದೊಳಗಿನ ವಯಸ್ಸಿನ ವ್ಯಕ್ತಿಗಳಿಗೆ ಮುಕ್ತವಾಗಿದೆ

2.2 ವಿದ್ಯಾರ್ಥಿಗಳು, ಶಿಕ್ಷಕರು, ಸಂಶೋಧಕರು ಮತ್ತು ವಿದ್ವಾಂಸರು ಹಾಗೂ ಸಾರ್ವಜನಿಕರು

2.3 ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಗೆ ಸಂಬಂಧಿಸಿದ ವಿಷಯಗಳನ್ನು ಕಾರ್ಯಕಾರಿ ಸಮಿತಿಯ ಸದಸ್ಯರ ಸಲಹೆಗಳೊಂದಿಗೆ ಸೂಚಿಸಲಾಗುತ್ತದೆ, ಉದಾ. ಆರೋಗ್ಯ ಮತ್ತು ನೈರ್ಮಲ್ಯ, ಆಹಾರ ಭದ್ರತೆ, ನೀರಿನಡಿಯ ಪ್ರಪಂಚ, ಖಗೋಳವಿಜ್ಞಾನ, ಶಕ್ತಿ

**3. ಮೌಲ್ಯಮಾಪನ ಮತ್ತು ಪ್ರಶಸ್ತಿಗಳು**

3.1 ಸೃಜನಶೀಲತೆ ಮತ್ತು ಸ್ವಂತಿಕೆ; ಉಪನ್ಯಾಸದ ಸಂರಚನೆ; ತಾಂತ್ರಿಕ ವಿಷಯ; ದೃಶ್ಯ ಸಾಧನಗಳು ಮತ್ತು ಭೌತಿಕ ಉದಾಹರಣೆಗಳು; ಸಂವಹನ ಸಾಮರ್ಥ್ಯ; ಮತ್ತು ಪ್ರಸ್ತುತಿಗೆ ಸಂಬಂಧಿಸಿದ ಮಾನದಂಡಗಳೊಂದಿಗೆ ಪ್ರವೇಶಗಳನ್ನು ಪರಿಣಿತ ಮೌಲ್ಯಮಾಪಕರ ಸಮಿತಿಯಿಂದ ಮೌಲ್ಯಮಾಪನ ಮಾಡಿಸಲಾಗುತ್ತದೆ

3.2 ನಿರ್ಣಯದ ಒಂದು ಮಾನದಂಡವೆಂದರೆ 'ಮಾತನಾಡುವುದರಲ್ಲಿ ನಿರರ್ಗಳತೆ ಮತ್ತು ಓದುವುದರಲ್ಲಿ ಸ್ಪಷ್ಟತೆ'

3.3 ಪ್ರಶಸ್ತಿಗಳ ಫಲಿತಾಂಶಗಳನ್ನು, ಅಂದರೆ, ಸುವರ್ಣ ಪ್ರಶಸ್ತಿ: ರೂ. 25,000/– ; ರಜತ ಪ್ರಶಸ್ತಿ: ರೂ. 15,000/–; ತೀರ್ಪುಗಾರರ ವಿಶೇಷ ಪ್ರಶಸ್ತಿ: ರೂ. 10,000/–, ವೀಡಿಯೊಗಳನ್ನು ಸ್ವೀಕರಿಸಿದ ಕೊನೆಯ ದಿನಾಂಕದ ಎರಡು ತಿಂಗಳೊಳಗೆ ಕೆಎಸ್ಟಿಎ ಜಾಲತಾಣದಲ್ಲಿ ಪ್ರಕಟಿಸಲಾಗುವುದು

3.4 ಇದಲ್ಲದೆ, 30ರವರೆಗಿನ ಶ್ರೇಯಾಂಕದ ಪ್ರಕಾರ ಆಯ್ದ ಪ್ರದರ್ಶನಕಾರರಿಗೆ, ಅಕಾಡೆಮಿಯಲ್ಲಿ ಮೂರು ದಿನಗಳ ಕಾರ್ಯಾಗಾರದಲ್ಲಿ ತಜ್ಞರ ಗುಂಪು ಸಂವಹನ ಕೌಶಲ ತರಬೇತಿ ಮತ್ತು ಮುಂದುವರಿದ ಮಾರ್ಗದರ್ಶನ ನೀಡುತ್ತದೆ

3.5 ಸಲ್ಲಿಸಿದ ವೀಡಿಯೊಗಳ ಹಕ್ಕುಸ್ವಾಮ್ಯವನ್ನು ಕೆಎಸ್ಟಿಎ ಹೊಂದಿರುತ್ತದೆ ಮತ್ತು ಪ್ರಶಸ್ತಿ ವಿಜೇತ ವೀಡಿಯೊಗಳನ್ನು ಜಾಲತಾಣ ಮತ್ತು ಇತರ ಮಾಧ್ಯಮಗಳ ಮೂಲಕ ಪ್ರಚಾರ ಮಾಡಲಾಗುತ್ತದೆ

3.6 ಸ್ಪರ್ಧೆಗೆ ಯಾವುದೇ ವೀಡಿಯೊಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಎಸ್ಟಿಎ ಹೊಂದಿದೆ ಮತ್ತು ಈ ವಿಷಯದಲ್ಲಿ ನಿರ್ಧಾರವು ಅಂತಿಮ ಮತ್ತು ಒಪ್ಪತಕ್ಕದ್ದಾಗಿರುತ್ತದೆ

3.7 ವಿಜ್ಞಾನ (ವಿಷುಯಲ್) ಸಂವಹನದಲ್ಲಿ ಹೆಚ್ಚಿನ ತರಬೇತಿಗಾಗಿ ಕೆಎಸ್ಟಿಎ ಆಯ್ದ 10–15 ಯಶಸ್ವಿ ಸ್ಪರ್ಧಿಗಳನ್ನು ಆಹ್ವಾನಿಸಬಹುದು. 3 ದಿನಗಳ ಕಾರ್ಯಾಗಾರದ ಬಜೆಟ್ 3 ದಿನಗಳಿಗೆ ರೂ. 2 ಲಕ್ಷ (ವಸತಿ, ಪ್ರಯಾಣ ಮತ್ತು ಬೋರ್ಡಿಂಗ್ ಶುಲ್ಕಗಳು ಸೇರಿದಂತೆ)

**4. ನಿಯಮಗಳು ಮತ್ತು ನಿಬಂಧನೆಗಳು**

4.1 ಸ್ಪರ್ಧೆಯನ್ನು ರದ್ದುಗೊಳಿಸುವ ಅಥವಾ ಈ ನಿಯಮಗಳನ್ನು ಅದರ ವಿವೇಚನೆಯಿಂದ ಮಾರ್ಪಡಿಸುವ ಹಕ್ಕನ್ನು ಕೆಎಸ್‌ಟಿಎ ಹೊಂದಿದೆ. ಕೆಎಸ್‌ಟಿಎ ನಿರ್ಧಾರಗಳು ಅಂತಿಮ ಮತ್ತು ಒಪ್ಪತಕ್ಕದ್ದಾಗಿರುತ್ತವೆ

4.2 ಪ್ರತಿಯೊಬ್ಬರೂ ತಲಾ ಒಂದು (1) ಪ್ರವೇಶವನ್ನು ಸಲ್ಲಿಸಬಹುದು. ನಂತರದ ಪ್ರವೇಶಗಳನ್ನು ಅನರ್ಹಗೊಳಿಸಲಾಗುತ್ತದೆ

4.3 ವೀಡಿಯೊದ ವಿಷಯವು ಸ್ವಂತದ್ದಾಗಿರಬೇಕು ಮತ್ತು ಪಾಲ್ಗೊಳ್ಳುವವರಿಗೆ ಸೇರಿರಬೇಕು

4.4 ವೀಡಿಯೊದಲ್ಲಿ ತೋರಿಸಿರುವ ಯಾವುದೇ ಸ್ಥಳವನ್ನು ಬಳಸಲು ಅನುಮತಿ ಪಡೆಯಿರಿ

4.5 ಪ್ರವೇಶಗಳು ಇತರ ಕೃತಿಗಳ ಮರು–ಸಂಪಾದಿತ ಆವೃತ್ತಿಗಳಾಗಿರಬಾರದು

4.6 ಪ್ರವೇಶಗಳು ಪ್ರಕಟಿತ ಪಠ್ಯ, ಸಂದರ್ಶನಗಳು, ವಿಡಿಯೋ ರೆಕಾರ್ಡ್ ಅಥವಾ ಮೂರನೇ ವ್ಯಕ್ತಿಯ ಕೃತಿಗಳ (ಪರಿಕರಗಳು, ಸಂಗೀತ, ಫೋಟೋಗಳು, ಇತ್ಯಾದಿ) ಬಳಕೆಗೆ ಒಳಪಟ್ಟಿರುತ್ತವೆ, ಕೃತಿಸ್ವಾಮ್ಯದ ಅಧಿಕೃತ ಬಳಕೆಗಾಗಿ ಸಹಿ ಮಾಡಿದ ಒಪ್ಪಿಗೆಯೊಂದಿಗೆ ಮೂರನೇ ವ್ಯಕ್ತಿಯಿಂದ ಅಧಿಕಾರ ಪಡೆದಿರಬೇಕಾಗುತ್ತದೆ ಮತ್ತು

ಪರವಾನಗಿ ಪಡೆದ ವಿಷಯಗಳ ಮರುಬಳಕೆ, ಸಂಪಾದನೆ, ಪರಿವರ್ತನೆ, ವಿತರಣೆ, ಸಾರ್ವಜನಿಕ ಪ್ರಸಾರ, ಸಾರ್ವಜನಿಕ ಸಾಗಾಣಿಕೆ, ಸಾರ್ವಜನಿಕ ಪ್ರದರ್ಶನ ಮತ್ತು ಲಾಭರಹಿತ ಉದ್ದೇಶದ ಬಳಕೆಯ ಇನ್ನಿತರ ಪ್ರಚಾರ ಚಟುವಟಿಕೆಗಳಿಗಾಗಿ ಆಯೋಜಕರಿಗೆ ಒಪ್ಪಿಗೆ ಮತ್ತು ಮೂರನೇ ವ್ಯಕ್ತಿಯ ಪರವಾನಗಿಯನ್ನು ನೀಡಬೇಕಾಗುತ್ತದೆ

4.7 ಬೌದ್ಧಿಕ ಆಸ್ತಿ ಹಕ್ಕುಗಳ ವಿವಾದಗಳನ್ನು ಒಳಗೊಂಡ ಪ್ರವೇಶಗಳು ಪಾಲ್ಗೊಳ್ಳುವವರ ಜವಾಬ್ದಾರಿಯಾಗಿರುತ್ತದೆ ಮತ್ತು ಅದಕ್ಕೆ ಸಂಘಟಕರೊಂದಿಗೆ ಯಾವುದೇ ಸಂಬಂಧವಿರುವುದಿಲ್ಲ

4.8 ವಿಜೇತ ಪ್ರವೇಶಗಳು ಬೌದ್ಧಿಕ ಆಸ್ತಿ ಹಕ್ಕು ಸಂಬಂಧಿತ ಕಾನೂನು ಮತ್ತು ನಿಬಂಧನೆಗಳ ಉಲ್ಲಂಘನೆಗೆ ಒಳಪಟ್ಟ ಸಂದರ್ಭದಲ್ಲಿ ಪ್ರಮಾಣಪತ್ರಗಳು, ಟ್ರೋಫಿಗಳು / ಪದಕಗಳು ಮತ್ತು ಬಹುಮಾನಗಳನ್ನು ಹಿಂದಿರುಗಿಸಬೇಕಾಗುತ್ತದೆ

4.9 ಪ್ರವೇಶವನ್ನು ಸಲ್ಲಿಸುವ ಮೂಲಕ, ವೀಡಿಯೊ ಸ್ವಂತದ ಕೃತಿ ಮತ್ತು ತಾವು ವೀಡಿಯೊದ ಎಲ್ಲಾ ಹಕ್ಕುಗಳ ಏಕಮಾತ್ರ ಮಾಲೀಕರೆಂದು ಪಾಲ್ಗೊಳ್ಳುವವರು ಪ್ರತಿನಿಧಿಸುತ್ತಾರೆ. ಪ್ರವೇಶಗಳು ಅಪ್ರಕಟಿತ ಕೃತಿಗಳಾಗಿರಬೇಕು. ಯಾವುದೇ ಕೃತಿಚೌರ್ಯ, ಎರವಲು ತೆಗೆದುಕೊಳ್ಳುವುದು, ನಕಲು ಮಾಡುವುದು ಅಥವಾ ಕೃತ್ರಿಮಕ್ಕೆ ಅವಕಾಶವಿಲ್ಲ

4.10 ವೀಡಿಯೊ ಮತ್ತು ಅದರ ವಿಷಯದ ಹಕ್ಕು ಸ್ವಾಮ್ಯವನ್ನು ಪಾಲ್ಗೊಳ್ಳುವವರು ಉಳಿಸಿಕೊಂಡಿದ್ದರೂ, ಅವರು ಸ್ಪರ್ಧೆಯನ್ನು ಪ್ರವೇಶಿಸುವುದು ವೀಡಿಯೊವನ್ನು ಆನ್‌ಲೈನ್‌ನಲ್ಲಿ ಮತ್ತು / ಅಥವಾ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸೆಟ್ಟಿಂಗ್‌ಗಳಲ್ಲಿ ನಿರ್ಬಂಧವಿಲ್ಲದೆ ಪ್ರದರ್ಶಿಸುವ ಹಕ್ಕನ್ನು ಕೆಎಸ್‌ಟಿಎಗೆ ಸ್ವಯಂಚಾಲಿತವಾಗಿ ಒದಗಿಸುತ್ತದೆ.

4.11 ಕಳೆದುಹೋದ, ತಡವಾದ, ತಪ್ಪಾಗಿ ನಿರ್ದೇಶಿಸಲ್ಪಟ್ಟ, ಅಪೂರ್ಣ ಅಥವಾ ಪೋಸ್ಟೇಜ್–ಡ್ಯೂ ಪ್ರವೇಶಗಳಿಗೆ ಕೆಎಸ್‌ಟಿಎ ಜವಾಬ್ದಾರವಾಗಿರುವುದಿಲ್ಲ. ಪಾಲ್ಗೊಳ್ಳುವವರು ತಮ್ಮ ಆಯ್ಕೆಯ ಸ್ಥಳದಲ್ಲಿ ಚಿತ್ರೀಕರಿಸಲು ಕಾನೂನಾತ್ಮಕ ಅನುಮತಿ ಪಡೆಯುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಕಾನೂನಿನಿಂದ ನಿಷೇಧಿಸಲ್ಪಟ್ಟ ಅಥವಾ ನಿರ್ಬಂಧಿಸಲಾಗಿರುವಲ್ಲಿ ಸ್ಪರ್ಧೆಯು ಅನೂರ್ಜಿತವಾಗಿದೆ

4.12 ಯಾವುದೇ ಸಂಭಾವನೆಯಿಲ್ಲದೆ, ಕೆಎಸ್‌ಟಿಎ ತನ್ನ ಹೆಸರನ್ನು ಕೆಎಸ್‌ಟಿಎ ಜಾಲತಾಣದಲ್ಲಿ ಪೋಸ್ಟ್ ಮಾಡುವುದನ್ನು ಅನುಮತಿಸಲು ಪಾಲ್ಗೊಳ್ಳುವವರು ಒಪ್ಪುತ್ತಾರೆ

4.13 ಪ್ರಚಾರದ ಚಟುವಟಿಕೆಗಳಿಗಾಗಿ ಸ್ಪರ್ಧೆಯ ಸಮಯದಲ್ಲಿ ಎಲ್ಲ ಪ್ರವೇಶಗಳನ್ನೂ ಬಳಸುವ ಹಕ್ಕನ್ನು ಕೆಎಸ್‌ಟಿಎ ಮತ್ತು ಸಹ–ಸಂಘಟಕರು ಹೊಂದಿದ್ದಾರೆ

4.14 ಪಾಲ್ಗೊಳ್ಳುವ ಪ್ರತಿಯೊಬ್ಬರೂ ತಮ್ಮ ವೀಡಿಯೊದ ಹಕ್ಕುಗಳನ್ನು ಉಳಿಸಿಕೊಳ್ಳುತ್ತಾರೆ, ಆದರೆ ಶಿಕ್ಷಣ, ಜಾಹೀರಾತು, ಮತ್ತು ಪ್ರಚಾರ ಸೇರಿದಂತೆ, ಆದರೆ ಅಷ್ಟಕ್ಕೆ ಸೀಮಿತವಾಗದೆ, ಯಾವುದೇ ಉದ್ದೇಶಕ್ಕಾಗಿ ಅದನ್ನು, ಸಂಪೂರ್ಣವಾಗಿ ಅಥವಾ ಭಾಗಶಃ, ಈಗ ಅಸ್ತಿತ್ವದಲ್ಲಿರುವ ಅಥವಾ ಭವಿಷ್ಯದಲ್ಲಿ ಅಭಿವೃದ್ಧಿಪಡಿಸುವ ಯಾವುದೇ ಮಾಧ್ಯಮದಲ್ಲಿ, ಸಾರ್ವಜನಿಕವಾಗಿ ಪ್ರದರ್ಶಿಸಲು, ವಿತರಿಸಲು, ಪ್ರತಿಮಾಡಲು ಮತ್ತು ವೀಡಿಯೊದ ವ್ಯುತ್ಪನ್ನ ಕೃತಿಗಳನ್ನು ರಚಿಸಲು, ಕೆಎಸ್‌ಟಿಎಗೆ ರಾಯಲ್ಟಿ–ಮುಕ್ತ, ವಿಶ್ವಾದ್ಯಂತ, ಶಾಶ್ವತವಾದ, ವಿಶೇಷವಲ್ಲದ ಪರವಾನಗಿಯನ್ನು ನೀಡುತ್ತಾರೆ. ಅಂತಹ ಬಳಕೆಗಳಿಗೆ ಸಂಬಂಧಿಸಿದಂತೆ ಕೆಎಸ್‌ಟಿಎ ಯಾವುದೇ ಹೆಚ್ಚುವರಿ ಸಂಭಾವನೆಯನ್ನು ಪಾವತಿಸಬೇಕಿಲ್ಲ ಅಥವಾ ಯಾವುದೇ ಹೆಚ್ಚುವರಿ ಅನುಮೋದನೆಯನ್ನು ಪಡೆಯಬೇಕಿಲ್ಲ

4.15 ಸಲ್ಲಿಕೆಯ ಎಲ್ಲ ಮಾಹಿತಿಗಳೂ (ಉದಾ., ಅಧಿಕೃತ ಫೋಟೋ/ವಿಡಿಯೋ ರಿಲೀಸ್ ಫಾರ್ಮ್‌ನಲ್ಲಿನ ಹೆಸರುಗಳು ಮತ್ತು ಸಹಿಗಳು (ಕೆಳಗೆ ನೋಡಿ); ಪ್ರವೇಶದ ಕೇಂದ್ರವಾಗಿರುವ ಸ್ಥಳದ ವಿವರ) ನಿಖರವಾಗಿವೆ ಎಂದು ಖಚಿತಪಡಿಸಿಕೊಳ್ಳಿ

4.16 ಪಾಲ್ಗೊಳ್ಳುವ ತಂಡದ ಯಾವುದೇ ಸದಸ್ಯರು 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದರೆ ಅವರಿಗೆ ಸ್ಪರ್ಧೆಯಲ್ಲಿ ಭಾಗವಹಿಸಲು ಪೋಷಕರು ಅಥವಾ ಕಾನೂನುಬದ್ಧ ಪಾಲಕರ ಅನುಮತಿ ಇದೆಯೇ ಎಂದು ಪರಿಶೀಲಿಸಿ

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು

## XI. ಮಾಧ್ಯಮಿಕ ಶಾಲಾ ಶಿಕ್ಷಕರಿಗೆ ಕಾರ್ಯಾಗಾರಗಳು

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗವಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ 2005ರಿಂದ ಕಾರ್ಯನಿರ್ವಹಿಸುತ್ತಿದ್ದು, ವಿಜ್ಞಾನ ಸಂವಹನ, ತಂತ್ರಜ್ಞಾನ ಪ್ರಸಾರ, ಸಾಮಾಜಿಕ ಲಾಭಕ್ಕಾಗಿ ನಾವೀನ್ಯತೆ ಮತ್ತು ಉದ್ಯಮಶೀಲತೆಗಳನ್ನು ಬೆಳೆಸುವುದು, ಪ್ರತಿಭೆಗಳನ್ನು ಗುರುತಿಸುವುದು ಮತ್ತು ಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಾಮರ್ಥ್ಯ ವೃದ್ಧಿ ಹಾಗೂ ರಾಜ್ಯಕ್ಕೆ ಎಸ್ಟಿಐ ಕಾರ್ಯನೀತಿ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮೂಲಕ ನಾಗರಿಕ ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಉದ್ದೇಶ ಹೊಂದಿದೆ.

ದೇಶದ ವಿವಿಧ ಶೈಕ್ಷಣಿಕ ವ್ಯವಸ್ಥೆಗಳ ಅಡಿಯಲ್ಲಿ ಮಾಧ್ಯಮಿಕ ಶಾಲೆಗಳು ಎಂದು ಕರೆಯಲ್ಪಡುವ ಪ್ರೌಢ ಶಾಲೆ / ಮಧ್ಯಂತರ ತರಗತಿಗಳು ವಿದ್ಯಾರ್ಥಿಗಳ ಬೆಳವಣಿಗೆಗೆ ಅತ್ಯಂತ ಹೆಚ್ಚು ಸಹಾಯಕವಾಗುವ ವರ್ಷಗಳು. ಶಿಕ್ಷಕರು ಎಲ್ಲ ಶೈಕ್ಷಣಿಕ ಚಟುವಟಿಕೆಗಳ ಕೇಂದ್ರದಲ್ಲಿದ್ದಾರೆ ಹಾಗೂ ತಾಲ್ಲೂಕು ಮತ್ತು ಗ್ರಾಮ ಮಟ್ಟಗಳಲ್ಲಿನ ಶಾಲೆಗಳಲ್ಲಿ ಸಾಮಾನ್ಯ ಶಿಕ್ಷಕರು ತರಗತಿಗಳನ್ನು ತೆಗೆದುಕೊಳ್ಳುವ ವಿಷಯದಲ್ಲಿ ಬೋಧಿಸುವುದರ ಜೊತೆಗೆ ಇನ್ನೂ ಹಲವಾರು ಕರ್ತವ್ಯಗಳನ್ನು ಹೊಂದಿರುತ್ತಾರೆ ಎನ್ನುವುದು ಈಗ ಎಲ್ಲರಿಗೂ ತಿಳಿದಿದೆ. ತರಬೇತಿ ಮಾಡ್ಯೂಲ್ಗಳು ಲಭ್ಯವಿದ್ದರೂ, ಮೇಲೆ ತಿಳಿಸಿದ ಶಿಕ್ಷಕರಿಗೆ ಪ್ರವೇಶ ಮತ್ತು ಅವಕಾಶಗಳು ವಿರಳ. ಈ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ತರಬೇತುದಾರರ ತರಬೇತಿ ಕಾರ್ಯಕ್ರಮದಡಿ ವಿಜ್ಞಾನ, ಗಣಿತ ಮತ್ತು ಸಂಬಂಧಿತ ವಿಷಯಗಳಲ್ಲಿನ ಇತ್ತೀಚಿನ ಪ್ರವೃತ್ತಿಗಳನ್ನು ಪರಿಚಯಿಸುವ ಉದ್ದೇಶದಿಂದ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಮಾಧ್ಯಮಿಕ ಶಾಲಾ ಶಿಕ್ಷಕರಿಗೆ ಕಾರ್ಯಾಗಾರಗಳನ್ನು ಆಯೋಜಿಸುತ್ತದೆ. ಇದು ಬೋಧನೆಯ ಗುಣಮಟ್ಟ ಮತ್ತು ವಿದ್ಯಾರ್ಥಿಗಳ ಕಲಿಕೆಯ ಮೇಲೆ ಗುಣಕ ಪರಿಣಾಮವನ್ನು ಬೀರುತ್ತದೆ ಎಂದು ನಿರೀಕ್ಷಿಸಲಾಗಿದೆ.

**1. ಉದ್ದೇಶಗಳು**

1.1 ಕರ್ನಾಟಕದ ಗ್ರಾಮೀಣ ಪ್ರದೇಶದ ಶಿಕ್ಷಕರಿಗೆ ವಿಜ್ಞಾನ, ಗಣಿತ ಮತ್ತು ಸಂಬಂಧಿತ ವಿಷಯಗಳಲ್ಲಿ ತಮ್ಮ ಜ್ಞಾನವನ್ನು ಮೇಲ್ಮಟ್ಟಕ್ಕೇರಿಸುವ ಅವಕಾಶ ಒದಗಿಸುವುದು

1.2 ವಿಜ್ಞಾನ ಬೋಧನೆ ಮತ್ತು ಸಂವಹನದಲ್ಲಿನ ಇತ್ತೀಚಿನ ಪ್ರವೃತ್ತಿಗಳ ಬಗ್ಗೆ ಜಾಗೃತಿ ಮೂಡಿಸುವುದು

1.3 ಆಯ್ದ ಶಿಕ್ಷಣ ಸಂಸ್ಥೆಗಳಲ್ಲಿ ಸಂಪನ್ಮೂಲ ತಜ್ಞರು ಮತ್ತು ಶಿಕ್ಷಕರ ಜಾಲಗಳನ್ನು ಸ್ಥಾಪಿಸುವುದು

1.4 ವಿವಿಧ ಪ್ರದೇಶಗಳ ಪರಿಣತಿಯಿಂದ ರಾಜ್ಯದ ಗ್ರಾಮೀಣ ಪ್ರದೇಶದ ಶಿಕ್ಷಕರಿಗೆ ಮಾರ್ಗದರ್ಶನ ನೀಡುವ ಚೌಕಟ್ಟನ್ನು ರೂಪಿಸುವುದು

**2. ಸಂಪನ್ಮೂಲ ತಜ್ಞರು**

2.1 ಈ ಉದ್ದೇಶಕ್ಕಾಗಿ ನೇಮಿಸಿದ ನೋಡಲ್ ಅಧಿಕಾರಿಯೊಂದಿಗೆ, ಕಾರ್ಯಾಗಾರವನ್ನು ಶಾಲೆಗಳು / ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವ ಸಂಸ್ಥೆಗಳು ನಡೆಸಬಹುದು

2.2 ಒಂದು ಸಮಯದಲ್ಲಿ ಒಂದು ಜಿಲ್ಲೆಯಂತೆ, ವಿಜ್ಞಾನ, ಗಣಿತ ಮತ್ತು ಸಂಬಂಧಿತ ವಿಷಯಗಳನ್ನು ಬೋಧಿಸುವಲ್ಲಿ ತೊಡಗಿರುವ ಗ್ರಾಮೀಣ ಪ್ರದೇಶದ ಶಿಕ್ಷಕರ ಗುರುತಿಸುವಿಕೆ

2.3 ಐಸಿಟಿ ಪರಿಕರಗಳು ಸೇರಿದಂತೆ ಸಂಪನ್ಮೂಲ ತಜ್ಞರು, ಶಿಕ್ಷಣ ತಜ್ಞರು ಮತ್ತು ನಿಪುಣ ಶಿಕ್ಷಕರೊಂದಿಗೆ ತಾಲೂಕು ಶಾಲೆಯಲ್ಲಿ ಎರಡು ದಿನಗಳ ಕಾರ್ಯಾಗಾರವನ್ನು ಕನ್ನಡ ಮಾಧ್ಯಮದಲ್ಲಿ ಆಯೋಜಿಸುವುದು

2.4 ಆಯಾ ಕ್ಷೇತ್ರಗಳಲ್ಲಿ ಅವರ ಪರಿಣತಿಯ ಆಧಾರದ ಮೇಲೆ 10–15 ಸಂಪನ್ಮೂಲ ತಜ್ಞರನ್ನು

ಗುರುತಿಸಲಾಗುತ್ತದೆ ಮತ್ತು ಅವರಲ್ಲಿ 8 ಸಂಪನ್ಮೂಲ ತಜ್ಞರನ್ನು ಆಯ್ದು ಅವರ ಲಭ್ಯತೆಗೆ ಅನುಗುಣವಾಗಿ ಉಪನ್ಯಾಸ ನೀಡಲು ಆಹ್ವಾನಿಸಲಾಗುತ್ತದೆ.

2.5 ಒಂದು ಸಮಯದಲ್ಲಿ 50 ಮೀರದಂತೆ, ನಿರ್ದಿಷ್ಟ ಜಿಲ್ಲೆಗೆ ಗ್ರಾಮೀಣ ಪ್ರದೇಶದ ಆಯ್ದ ಶಾಲೆಗಳ ಶಿಕ್ಷಕರು

**3. ಮೌಲ್ಯಮಾಪನ**

3.1 ಉಪನ್ಯಾಸ ಕಾರ್ಯಾಗಾರಗಳ ಕೊನೆಯಲ್ಲಿ ಸಂಪನ್ಮೂಲ ತಜ್ಞರಿಂದ ತರಬೇತಿ ಪಡೆದವರ ಮೌಲ್ಯಮಾಪನ (ತಲಾ 8–10 ಪ್ರಶ್ನೆಗಳು) ಒಂದು ಗಂಟೆಯ ಬಹು ಆಯ್ಕೆ ರಸಪ್ರಶ್ನೆಯೊಂದಿಗೆ

3.2 ಪ್ರೋತ್ಸಾಹಕವಾಗಿ, ನಾಲ್ಕು ಟಾಪರ್‌ಗಳಿಗೆ ಪ್ರಮಾಣಪತ್ರ ಮತ್ತು ನಗದು ಬಹುಮಾನ ನೀಡಲಾಗುತ್ತದೆ; ಮೊದಲ ಬಹುಮಾನ: ರೂ. 3,000/–; ಎರಡನೆಯ ಬಹುಮಾನ: ರೂ. 2,000/–; ಮೂರನೆಯ ಬಹುಮಾನ: ರೂ. 1,000/– (2)

3.3 ಪಾಲ್ಗೊಳ್ಳುವವರು ಭಾಗವಹಿಸುವಿಕೆಯ ಪ್ರಮಾಣಪತ್ರವನ್ನು ಪಡೆಯಲು ಅಕಾಡೆಮಿ ನಿರ್ಧರಿಸಿದಂತೆ ಕನಿಷ್ಠ ಅಂಕಗಳನ್ನು ಪಡೆಯಬೇಕು

**4. ಆಡಳಿತ / ಹಣಕಾಸು**

4.1 ಪ್ರತಿವರ್ಷ ಜೂನ್ ತಿಂಗಳಲ್ಲಿ ಪ್ರಕಟಣೆಯನ್ನು ಕೆಎಸ್‌ಟಿಎ ಜಾಲತಾಣದಲ್ಲಿ ಮತ್ತು ಪ್ರಮುಖ ಪತ್ರಿಕೆಯಲ್ಲಿ ಸುದ್ದಿಯಾಗಿ ಪ್ರಕಟಿಸಲಾಗುತ್ತದೆ ಮತ್ತು ಅರ್ಜಿಗಳನ್ನು ವರ್ಷದುದ್ದಕ್ಕೂ ಸ್ವೀಕರಿಸಲಾಗುತ್ತದೆ

4.2 ತಾಲೂಕಿನಆಯ್ದಶಾಲೆಗಳು / ರೋಟರಿಕ್ಲಬ್‌ಗಳಲ್ಲಿ ಅಥವಾ ಅಂತಹುದೇ ಸ್ಥಳಗಳಲ್ಲಿ ಎರಡು ದಿನಗಳ ಕಾರ್ಯಾಗಾರದ ಬಜೆಟ್ ರೂ. 1.25 ಲಕ್ಷವಾಗಿದ್ದು, ಸಂಪನ್ಮೂಲ ವ್ಯಕ್ತಿಗಳಿಗೆ ಗೌರವ ಧನ, ಪ್ರಯಾಣ ವೆಚ್ಚ, ಲೇಖನ ಸಾಮಗ್ರಿಗಳು, ಆಹಾರ ಮತ್ತು ಉಪಾಹಾರಗಳು, ಬಹುಮಾನಗಳು, ಲೆಕ್ಕಪರಿಶೋಧನಾ ವೆಚ್ಚಗಳು ಇತ್ಯಾದಿಗಳನ್ನು ಅಕಾಡೆಮಿಯ ಅಸ್ತಿತ್ವದಲ್ಲಿರುವ ನಿಬಂಧನೆಗಳ ಪ್ರಕಾರ ಒಳಗೊಂಡಿರುತ್ತದೆ

4.3 ನೋಡಲ್ ಅಧಿಕಾರಿಯು ಕಾರ್ಯಕ್ರಮ ವಿವರ ಮತ್ತು ಅಕಾಡೆಮಿಯಿಂದ ಅನುಮೋದಿಸಲ್ಪಟ್ಟ ಸಂಪನ್ಮೂಲ ವ್ಯಕ್ತಿಗಳ ಪಟ್ಟಿಯನ್ನು ಹೊಂದಿರುತ್ತಾರೆ. ಪ್ರತಿಯೊಬ್ಬ ಸಂಪನ್ಮೂಲ ವ್ಯಕ್ತಿಯೂ 90 ನಿಮಿಷಗಳ ಉಪನ್ಯಾಸಕ್ಕೆ ರೂ. 2,000/– ಗೌರವ ಧನಕ್ಕೆ ಅರ್ಹರಾಗುತ್ತಾರೆ ಮತ್ತು ಅವರು ಒಂದು ಕಾರ್ಯಕ್ರಮದಲ್ಲಿ ಗರಿಷ್ಠ ಎರಡು ಉಪನ್ಯಾಸಗಳನ್ನು ನೀಡಬಹುದಾಗಿರುತ್ತದೆ, ಮತ್ತು ನೋಡಲ್ ಅಧಿಕಾರಿಗೆ ರೂ. 5,000/– ಗೌರವಧನ ಇರುತ್ತದೆ

4.4 ಕೆಲಸ ಮುಗಿದ ನಂತರ, ನೋಂದಾಯಿತ ಚಾರ್ಟರ್ಡ್ ಅಕೌಂಟೆಂಟ್‌ಗಳಿಂದ ಲೆಕ್ಕಪರಿಶೋಧಿತವಾದ ಲೆಕ್ಕಪತ್ರಗಳೊಂದಿಗೆ, ಸಂಬಂಧಿತ ಛಾಯಾಚಿತ್ರಗಳೂ ಸೇರಿರುವ ಪ್ರಮಾಣೀಕೃತ ವರದಿಗಳನ್ನು ಒಂದು ತಿಂಗಳೊಳಗೆ ಸಲ್ಲಿಸಬೇಕು. ಅನ್ವಯವಾಗುವಲ್ಲೆಲ್ಲಾ, ಪಾಲುದಾರರ ಪ್ರತಿಕ್ರಿಯೆಗಳನ್ನು ಒದಗಿಸಬಹುದು

4.5 ಅಕಾಡೆಮಿಯ ಪೂರ್ವ ಅನುಮೋದನೆಯೊಂದಿಗೆ, ಆತಿಥೇಯ ಸಂಸ್ಥೆಗಳ ಸಂಪನ್ಮೂಲಗಳೊಂದಿಗೆ, ಕಾರ್ಯಕ್ರಮಗಳಿಗೆ ಸರಿಯಾದ ಪ್ರಚಾರದೊಂದಿಗೆ ಕಾರ್ಯಕ್ರಮಗಳನ್ನುಇನ್ನಷ್ಟು ಸಮೃದ್ಧಗೊಳಿಸಬಹುದು

4.6 ಕೆಎಸ್‌ಟಿಎ ಮೂರನೆಯ ವ್ಯಕ್ತಿಗಳಿಂದ ಕಾರ್ಯಕ್ರಮಗಳ ಮೌಲ್ಯಮಾಪನವನ್ನು ಕೈಗೊಳ್ಳುತ್ತದೆ, ಮತ್ತು ಆ ಸಮಯದಲ್ಲಿ, ಆತಿಥೇಯ ಸಂಸ್ಥೆಗಳು / ನೋಡಲ್ ಅಧಿಕಾರಿಗಳು ಕಾರ್ಯಕ್ರಮ ಮತ್ತು ಅದರ ಪರಿಣಾಮದ ಅಗತ್ಯ ಮಾಹಿತಿಯನ್ನು ಒದಗಿಸುತ್ತಾರೆ

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು

## XII. ವಿಜ್ಞಾನ ವೀಡಿಯೊಗಳು ಮತ್ತು ಕ್ಯಾಪ್ಸುಲ್‌ಗಳ ತಯಾರಿಗೆ ಮಾರ್ಗಸೂಚಿಗಳು

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗವಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ 2005ರಿಂದ ಕಾರ್ಯನಿರ್ವಹಿಸುತ್ತಿದ್ದು, ವಿಜ್ಞಾನ ಸಂವಹನ, ತಂತ್ರಜ್ಞಾನ ಪ್ರಸಾರ, ಸಾಮಾಜಿಕ ಲಾಭಕ್ಕಾಗಿ ನಾವೀನ್ಯತೆ ಮತ್ತು ಉದ್ಯಮಶೀಲತೆಗಳನ್ನು ಬೆಳೆಸುವುದು, ಪ್ರತಿಭೆಗಳನ್ನು ಗುರುತಿಸುವುದು ಮತ್ತು ಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಾಮರ್ಥ್ಯ ವೃದ್ಧಿ ಹಾಗೂ ರಾಜ್ಯಕ್ಕೆ ಎಸ್‌ಟಿಐ ಕಾರ್ಯನೀತಿ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮೂಲಕ ನಾಗರಿಕ ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಉದ್ದೇಶ ಹೊಂದಿದೆ.

ಎಲೆಕ್ಟ್ರಾನಿಕ್ ಮತ್ತು ಸಮೂಹ ಮಾಧ್ಯಮಗಳು ಇತ್ತೀಚಿನ ವರ್ಷಗಳಲ್ಲಿ ನಮ್ಮ ಜೀವನವನ್ನು ನಿಜಕ್ಕೂ ಬದಲಾಯಿಸಿವೆ ಮತ್ತು ಮಾಹಿತಿ, ಸಂವಹನ ಮತ್ತು ಪ್ರಸಾರಕ್ಕೆ ಪರಿಣಾಮಕಾರಿ ಸಾಧನಗಳನ್ನು ಒದಗಿಸಿವೆ. ವಿಜ್ಞಾನ, ತಂತ್ರಜ್ಞಾನ ಮತ್ತು ಶಿಕ್ಷಣ ಕ್ಷೇತ್ರಗಳು ಪಾಲುದಾರರನ್ನು ಹೆಚ್ಚಿನ ಸಂಖ್ಯೆಯಲ್ಲಿ ತಲುಪಲು ಈ ಹೊಸ ಸಾಧನಗಳನ್ನು ಅಳವಡಿಸಿಕೊಳ್ಳುತ್ತಿವೆ. ಅಕಾಡೆಮಿಯಲ್ಲಿ ವಿಷಯ ಸಿದ್ಧತಾ ಕೇಂದ್ರವನ್ನು ಸ್ಥಾಪಿಸುವುದರೊಂದಿಗೆ, ಮಾಧ್ಯಮಿಕ ಶಾಲೆಯಲ್ಲಿನ ವಿಜ್ಞಾನ ವಿಷಯಗಳನ್ನು ಮತ್ತು ರಾಜ್ಯದ ಮಾಧ್ಯಮಿಕ ವಿದ್ಯಾರ್ಥಿಗಳನ್ನು ಗಮನದಲ್ಲಿರಿಸಿಕೊಂಡು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ವಿಜ್ಞಾನ ವೀಡಿಯೊಗಳು ಮತ್ತು ಕ್ಯಾಪ್ಸುಲ್‌ಗಳನ್ನು ತಯಾರಿಸಲು ಪ್ರಸ್ತಾಪಿಸಿದೆ.

**1. ಉದ್ದೇಶಗಳು**

1.1 ಕರ್ನಾಟಕದ ಮಾಧ್ಯಮಿಕ ಶಾಲೆಗಳು ಮತ್ತು ಮಾಧ್ಯಮಿಕ ವಿದ್ಯಾರ್ಥಿಗಳ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ವಿಜ್ಞಾನ ವೀಡಿಯೊಗಳನ್ನು, ಆರಂಭದಲ್ಲಿ ಕನ್ನಡ ಮಾಧ್ಯಮದಲ್ಲಿ, ತಯಾರಿಸುವುದು

1.2 ಆರ್ಥಿಕತೆಯ ವಿವಿಧ ವಿಭಾಗಗಳಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಗಳ ಉದಯೋನ್ಮುಖ ಅಂಶಗಳಿಗೆ ಸಂಬಂಧಿಸಿದ ವಿಜ್ಞಾನ ಕ್ಯಾಪ್ಸುಲ್‌ಗಳನ್ನು ತಯಾರಿಸುವುದು

1.3 ವಿಜ್ಞಾನ ವೀಡಿಯೊಗಳ ಉತ್ಪಾದನೆಗೆ ಸಂಬಂಧಿಸಿದಂತೆ ವಿಜ್ಞಾನ ಬರಹಗಾರರು, ಶಿಕ್ಷಕರು, ಸಂವಹನಕಾರರು, ಸಂಪಾದಕರು, ವಿಡಿಯೋಗ್ರಾಫರ್‌ಗಳು ಮುಂತಾದವರ ಡೇಟಾಬೇಸ್ ಅಭಿವೃದ್ಧಿಪಡಿಸುವುದು

1.4 ತಜ್ಞರು ಮತ್ತು ಮಾರ್ಗದರ್ಶಕರ ಗುಂಪಿನೊಂದಿಗೆ ವಿಜ್ಞಾನ ವೀಡಿಯೊಗಳು ಮತ್ತು ಸಂವಹನದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದು

1.5 ಇದೇ ರೀತಿಯ ಕಾರ್ಯಗಳಿಗಾಗಿ ಆಸಕ್ತ ಸಂಸ್ಥೆಗಳಿಗೆ ಸಿಜಿಸಿಯನ್ನು ಬಾಡಿಗೆ ಆಧಾರದ ಮೇಲೆ ಒದಗಿಸುವುದು

**2. ಪ್ರಕ್ರಿಯೆ**

2.1 ವಿಜ್ಞಾನವೀಡಿಯೊಗಳಉತ್ಪಾದನೆಗೆಸಂಬಂಧಿಸಿದಂತೆ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಸಂಸ್ಥೆಗಳು, ವಿಜ್ಞಾನ ಬರಹಗಾರರು, ಶಿಕ್ಷಕರು, ಸಂವಹನಕಾರರು, ಸಂಪಾದಕರು, ವಿಡಿಯೋಗ್ರಾಫರ್‌ಗಳ ಜಾಲಗಳನ್ನು ಸ್ಥಾಪಿಸುವುದು

2.2 ಇದೇ ರೀತಿಯ ಚಟುವಟಿಕೆಗಳಿಗೆ ಸಂಬಂಧಿಸಿದ ತಜ್ಞರು, ವ್ಯಕ್ತಿಗಳು ಮತ್ತು ಸಂಸ್ಥೆಗಳಿಂದ ಪರಿಕಲ್ಪನೆಗಳು ಮತ್ತು ಸ್ಕ್ರಿಪ್ಟ್‌ಗಳನ್ನು ಆಹ್ವಾನಿಸುವುದು; ವಿಷಯ, ವಿತರಣೆ ಮತ್ತು ವೆಚ್ಚಕ್ಕಾಗಿ ತಜ್ಞರ ಸಮಿತಿಗಳು ಮತ್ತು ಸಂಪನ್ಮೂಲ ವ್ಯಕ್ತಿಗಳನ್ನು ನಿಯೋಜಿಸುವುದು

2.3 ಗುಣಮಟ್ಟದ ವಿಜ್ಞಾನ ವೀಡಿಯೊಗಳ ಭಂಡಾರವನ್ನು ಸ್ಥಾಪಿಸುವುದು; ಸ್ಕ್ರಿಪ್ಟ್ ಬರಹಗಾರರು, ತರಗತಿಗಳು ಮತ್ತು ಪ್ರಯೋಗಗಳನ್ನು ನಡೆಸುವ ಶಿಕ್ಷಕರು, ವಿಡಿಯೋಗ್ರಾಫರ್‌ಗಳು, ಆನಿಮೇಟರ್ಗಳು, ಸಂಪಾದಕರು ಮತ್ತು ನಿರ್ಮಾಪಕರು ಹಾಗೂ ಸಂಬಂಧಿತ ತಜ್ಞರ ಡೇಟಾಬೇಸ್ ರೂಪಿಸುವುದು

2.4 ಕನ್ನಡ ಮಾಧ್ಯಮದಲ್ಲಿ ಮಾಧ್ಯಮಿಕ ಶಾಲೆಯ ಮತ್ತು ಮಾಧ್ಯಮಿಕ ವಿಷಯಗಳ ಕುರಿತು ಆಯ್ದ ವಿಜ್ಞಾನ ವೀಡಿಯೊಗಳ (20 ನಿಮಿಷಗಳು) ತಯಾರಿ

2.5 ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಪ್ರಸ್ತುತ ಆಸಕ್ತಿಯ ಎಸ್‌ಟಿಐ ವಿಷಯಗಳ ಕುರಿತು ವಿಜ್ಞಾನ ಕ್ಯಾಪ್ಸುಲ್‌ಗಳ ತಯಾರಿ (3–5 ನಿಮಿಷಗಳು)

2.6 ತಯಾರಿಯು ಪ್ರಾಯೋಜಿತವಾಗಿರಬಹುದು, ನಿಯೋಜಿತವಾಗಿರಬಹುದು ಅಥವಾ ಸಂಬಂಧಿತ ಏಜೆನ್ಸಿಗಳೊಂದಿಗೆ ಸಹವರ್ತಿಸುವ ಮೂಲಕವೂ ಆಗಬಹುದು

2.7 ಶಿಕ್ಷಣ ಸಂಸ್ಥೆಗಳು ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳಿಗೆ ವೀಡಿಯೊಗಳು ಮತ್ತು ಕ್ಯಾಪ್ಸುಲ್‌ಗಳ ಪ್ರಚಾರ, ವಿತರಣೆ ಮತ್ತು ಮಾರಾಟ

**3. ಆಡಳಿತ / ಹಣಕಾಸು**

3.1 ವಿಷಯ, ಪ್ರಸ್ತುತಿ ಮತ್ತು ಗುಣಮಟ್ಟಕ್ಕೆ ಹೆಚ್ಚಿನ ಒತ್ತು ನೀಡುವುದರ ಜೊತೆಗೆ, ಅಗತ್ಯತೆ, ಪುನರಾವರ್ತನೆಯ ನಿವಾರಣೆ, ಮಾರುಕಟ್ಟೆ ಆಧಾರಿತವಾಗಿ ವಿಜ್ಞಾನ ವೀಡಿಯೊಗಳು ಮತ್ತು ಕ್ಯಾಪ್ಸುಲ್‌ಗಳ ವಿಷಯಗಳಿಗೆ ಆದ್ಯತೆ ನೀಡುವುದು

3.2 ಸ್ಕ್ರಿಪ್ಟ್ ಬರವಣಿಗೆ, ಸ್ಕ್ರಿಪ್ಟ್ ವಿಮರ್ಶೆ, ವಿಷಯದ ಪ್ರಸ್ತುತಿ, ವಿಡಿಯೋಗ್ರಫಿ, ಆನಿಮೇಷನ್, ಎಡಿಟಿಂಗ್ ಮತ್ತು ಅಂತಿಮ ಉತ್ಪಾದನೆಗಾಗಿ ತಜ್ಞರು / ಸಂಬಂಧಿತ ಅನುಭವವಿರುವ ಶಿಕ್ಷಕರು / ಹೆಸರಾಂತ ಸಂವಹನಕಾರರನ್ನು ಒಳಗೊಂಡ ತಂಡಗಳ ರಚನೆ

3.3 ಗುರುತಿಸಲ್ಪಟ್ಟ ವ್ಯಕ್ತಿಗಳನ್ನು ಆದ್ಯತೆಯ ವಿಷಯಗಳಿಗೆ ಸ್ಕ್ರಿಪ್ಟ್ ಬರವಣಿಗೆಗಾಗಿ ಒಂದು ತಿಂಗಳ ಕಾಲಮಿತಿಯೊಂದಿಗೆ ನಿಯೋಜಿಸುವುದು; ಇಬ್ಬರು ತಜ್ಞರಿಂದ ವಿಮರ್ಶೆ (ಒಬ್ಬ ಸಕ್ರಿಯ ಶಿಕ್ಷಕರು ಮತ್ತು ಕ್ಷೇತ್ರದ ಒಬ್ಬ ಹಿರಿಯರು); ಬರಹಗಾರರಿಂದ ಸ್ಕ್ರಿಪ್ಟ್ ಪರಿಷ್ಕರಣೆ; ವಿಷಯ ಪ್ರಸ್ತುತಿಯೊಂದಿಗೆ ಸಂವಹನ. ವೀಡಿಯೋಗ್ರಫಿ ಮತ್ತು ಎಡಿಟಿಂಗ್ ತಂಡ; ಶಿಕ್ಷಕರು ಮತ್ತು ವಿದ್ಯಾರ್ಥಿಗಳೊಂದಿಗೆ ಸೂಕ್ತ ಸ್ಥಳಗಳಲ್ಲಿ ಚಿತ್ರೀಕರಣ; ಸಂಪಾದನೆ, ನಿರ್ಮಾಣ, ಪ್ರತಿಮಾಡುವಿಕೆ ಮತ್ತು ವಿತರಣೆ

3.4 ಇದರ ಹಣಕಾಸಿನ ನಿಬಂಧನೆಗಳು: 20 ನಿಮಿಷಗಳ ಅವಧಿಯ ವಿಜ್ಞಾನ ವೀಡಿಯೊಗಳ ಸ್ಕ್ರಿಪ್ಟ್ ಬರವಣಿಗೆಗೆ ರೂ. 5,000/– ಮತ್ತು ವಿಜ್ಞಾನ ಕ್ಯಾಪ್ಸುಲ್ಗಳಿಗೆ ರೂ. 2,000/–; ವಿಜ್ಞಾನ ವೀಡಿಯೊ ಸ್ಕ್ರಿಪ್ಟ್‌ಗಳ ಇಬ್ಬರು ವಿಮರ್ಶಕರಿಗೆ ತಲಾ ರೂ. 2,000/–; ಪ್ರಾಯೋಗಿಕ ಕಾಲಾವಧಿ / ವಿಡಿಯೋ ರೆಂಡರಿಂಗ್ನೊಂದಿಗೆ ವ್ಯವಹರಿಸುವ ವ್ಯಕ್ತಿಗೆ ರೂ. 3,000/–; ವಿಷಯ ಪ್ರಸ್ತುತಿ, ವೀಡಿಯೋಗ್ರಫಿ, ಆನಿಮೇಷನ್, ಸಂಪಾದನೆ ಮತ್ತು ಅಂತಿಮ ನಿರ್ಮಾಣದ ಇತರ ಚಟುವಟಿಕೆಗಳಿಗೆ ವೆಚ್ಚಗಳು ಮಾರುಕಟ್ಟೆ ದರಗಳು ಮತ್ತು ಅಕಾಡೆಮಿಯ ಪಡೆಯುವಿಕೆ ಕಾರ್ಯವಿಧಾನಗಳ ಪ್ರಕಾರ

3.5 ಪ್ರಸ್ತಾವನೆಗಳ ಪರೀಕ್ಷೆ ಅಕಾಡೆಮಿಯ ಸಂಪಾದಕೀಯ ಸಮಿತಿಯ ಮತ್ತು ಅನುಮೋದನೆಯ ನಂತರ, ನಿರ್ಮಾಣದ ಪ್ರಕಾರವನ್ನು ಅವಲಂಬಿಸಿ, ಲಾಜಿಸ್ಟಿಕ್ಸ್ ಮತ್ತು ಹಣಕಾಸಿನ ನೆರವಿನ ಸರಬರಾಜು. ಸಿಜಿಸಿ ಸೌಲಭ್ಯಗಳನ್ನು ನೇಮಿಸಿಕೊಳ್ಳಲು ಬಾಡಿಗೆಯನ್ನೂ ಸಂಪಾದಕೀಯ ಸಮಿತಿ ನಿಗದಿಪಡಿಸುತ್ತದೆ.

3.6 ಹಕ್ಕುಸ್ವಾಮ್ಯಗಳು ಮತ್ತು ಇತರ ನಿಬಂಧನೆಗಳ ವಿಷಯದಲ್ಲಿ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ವೀಡಿಯೊಗಳು ಮತ್ತು ಕ್ಯಾಪ್ಸುಲ್‌ಗಳ ತಯಾರಿ ಹಾಗೂ ವಿತರಣೆಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ನಿಯಮಗಳು ಮತ್ತು ಷರತ್ತುಗಳು ಅನ್ವಯವಾಗುತ್ತವೆ

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು

## XIII. ನಾವೀನ್ಯತಾ ವೇದಿಕೆಗಾಗಿ ಮಾರ್ಗಸೂಚಿಗಳು

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗವಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ 2005ರಿಂದ ಕಾರ್ಯನಿರ್ವಹಿಸುತ್ತಿದ್ದು, ವಿಜ್ಞಾನ ಸಂವಹನ, ತಂತ್ರಜ್ಞಾನ ಪ್ರಸಾರ, ಸಾಮಾಜಿಕ ಲಾಭಕ್ಕಾಗಿ ನಾವೀನ್ಯತೆ ಮತ್ತು ಉದ್ಯಮಶೀಲತೆಗಳನ್ನು ಬೆಳೆಸುವುದು, ಪ್ರತಿಭೆಗಳನ್ನು ಗುರುತಿಸುವುದು ಮತ್ತು ಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಾಮರ್ಥ್ಯ ವೃದ್ಧಿ ಹಾಗೂ ರಾಜ್ಯಕ್ಕೆ ಎಸ್‌ಟಿಐ ಕಾರ್ಯನೀತಿ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮೂಲಕ ನಾಗರಿಕ ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಉದ್ದೇಶ ಹೊಂದಿದೆ.

ಆರ್ಥಿಕತೆಯ ಎಲ್ಲಾ ಕ್ಷೇತ್ರಗಳಲ್ಲಿನ ನಾವೀನ್ಯತೆ ನಮ್ಮ ಜೀವನದ ಮೇಲೆ ಹಿಂದೆಂದಿಗಿಂತಲೂ ಹೆಚ್ಚು ಪ್ರಭಾವ ಬೀರುತ್ತಿದೆ. ವಿಭಿನ್ನ ಪರಿಭಾಷೆಯಲ್ಲಿ ಹೇಳುವುದಾದರೆ, ನಾವೀನ್ಯತೆಗಳು ಹೊಸ ರೀತಿಯದಾಗಿರುತ್ತವೆ, ಸೃಜನಾತ್ಮಕವಾಗಿ ಪರಿವರ್ತನೆ ತರುತ್ತವೆ, ವಹಿವಾಟಿನ ಹೊಸ ರೀತಿಗಳನ್ನು ಪರಿಚಯಿಸುತ್ತವೆ ಮತ್ತು ಜೀವನದ ಎಲ್ಲ ಹಂತಗಳಲ್ಲೂ ದಕ್ಷತೆಯನ್ನು ಹೆಚ್ಚಿಸುತ್ತವೆ. ಸಕ್ರಿಯಗೊಳಿಸುವ ಸಂಗತಿಗಳ ಇನ್‌ಪುಟ್ ಮತ್ತು ಕಾರ್ಯಕ್ಷಮತೆಯ ಔಟ್‌ಪುಟ್‌ನೊಂದಿಗೆ, ಮಾನವ ಸಂಪನ್ಮೂಲ, ಹೂಡಿಕೆಗಳು, ಉನ್ನತ ಜ್ಞಾನದ ಉದ್ಯೋಗ, ವ್ಯವಹಾರ, ಸುರಕ್ಷತೆ ಮತ್ತು ಕಾನೂನು ಪರಿಸರಗಳು ಭಾರತೀಯ ಸಂದರ್ಭದಲ್ಲಿ ಹೊಸತನಗಳನ್ನು ವ್ಯಾಖ್ಯಾನಿಸುವ ಅಂಶಗಳಾಗಿವೆ. ಇವುಗಳಲ್ಲಿ ಪ್ರತಿಯೊಂದರಲ್ಲೂ ಕರ್ನಾಟಕ ರಾಜ್ಯವು ಮುಂಚೂಣಿಯಲ್ಲಿದೆ. ಸಾಂಸ್ಥಿಕ ಮತ್ತು ವೈಯಕ್ತಿಕ ಎರಡೂ ಆವಿಷ್ಕಾರಗಳನ್ನು ಗ್ರಹಿಸುವ ಸಲುವಾಗಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ನಾವೀನ್ಯತಾ ವೇದಿಕೆಯನ್ನು ಸ್ಥಾಪಿಸಿದೆ.

**1. ಉದ್ದೇಶಗಳು**

1.1 ವಿವಿಧ ಕ್ಷೇತ್ರಗಳಲ್ಲಿ ಬೇರುಮಟ್ಟದ ಆವಿಷ್ಕಾರಗಳನ್ನು ಅನ್ವೇಷಿಸುವುದು ಮತ್ತು ದಾಖಲಿಸುವುದು

1.2 ಐಪಿ ರಕ್ಷಣೆ, ಊರ್ಜಿತಗೊಳಿಸುವಿಕೆ ಮತ್ತು ಸ್ಕೇಲ್-ಅಪ್‌ಗಾಗಿ ನವ ನಿರ್ಮಿತಿಕಾರರಿಗೆ ಒಂದು ವೇದಿಕೆಯನ್ನು ಒದಗಿಸುವುದು

1.3 ಹೆಚ್ಚಿನ ಪರಿಷ್ಕರಣೆಗಳು ಮತ್ತು ಅನ್ವಯಗಳಿಗಾಗಿ ನವ ನಿರ್ಮಿತಿಕಾರರಿಗೆ ಮಾರ್ಗದರ್ಶನ ಮಾಡುವುದು

1.4 ಇನ್ನೋವೇಶನ್-ಇಂಡಸ್ಟ್ರಿ-ಬಿಸಿನೆಸ್ ಸಂಪರ್ಕಗಳನ್ನು ಸ್ಥಾಪಿಸುವುದು

1.5 ಆವಿಷ್ಕಾರಗಳನ್ನು ಒಳಗೊಂಡ ಸಮುದಾಯ ಕಾರ್ಯಾಗಾರಗಳು ಮತ್ತು ಪ್ರದರ್ಶನಗಳನ್ನು ಆಯೋಜಿಸುವುದು

1.6 ಪ್ರಕಟಣೆಗಳುಮತ್ತುಪ್ರಶಸ್ತಿಗಳಮೂಲಕಸಾರ್ವಜನಿಕರಲ್ಲಿನಾವೀನ್ಯತಾಮನೋಭಾವವನ್ನುಹರಡುವುದು

**2 ಪ್ರಕ್ರಿಯೆ**

2.1 ಕೃಷಿ, ಎಂಜಿನಿಯರಿಂಗ್, ಇಂಧನ, ಕೈಗಾರಿಕೆ, ಸೇವಾ ಕ್ಷೇತ್ರ ಹೀಗೆ ಆರ್ಥಿಕತೆಯ ವಿವಿಧ ವಿಭಾಗಗಳಲ್ಲಿ ನವ ನಿರ್ಮಿತಿಕಾರರ ಒಕ್ಕೂಟವನ್ನು ಸ್ಥಾಪಿಸುವುದು

2.2 ವರ್ಧಿತ ದಕ್ಷತೆಗಳತ್ತ ಮುಂಚೂಣಿ ಆವಿಷ್ಕಾರಗಳ ಕುರಿತು ವ್ಯಕ್ತಿಗಳು ಮತ್ತು ಸಂಸ್ಥೆಗಳಿಂದ ಪರಿಕಲ್ಪನೆಗಳು, ಪ್ರಕ್ರಿಯೆಗಳು ಮತ್ತು ಉತ್ಪನ್ನಗಳನ್ನು ಆಹ್ವಾನಿಸುವುದು

2.3 ವಾಣಿಜ್ಯ ಅನ್ವಯಗಳಲ್ಲಿ ಹೊಸತನಗಳನ್ನು ಪರಿಷ್ಕರಿಸಲು ಮತ್ತು ಮೌಲ್ಯೀಕರಿಸಲು ಅಗತ್ಯ ಆಧಾರಿತವಾಗಿ ಹಣಕಾಸಿನ ಸೀಮಿತ ನೆರವು ನೀಡುವುದು

2.4 ಸ್ಕೇಲ್ ಅಪ್–ಗಾಗಿ ಐಪಿಎಂ ಕಾರ್ಯವಿಧಾನಗಳನ್ನು ಸಕ್ರಿಯಗೊಳಿಸುವುದು; ಬೇಡಿಕೆಯ ಮೌಲ್ಯಮಾಪನ ಹಾಗೂ ಇನ್ನೋವೇಟರ್‌ಗಳು ಮತ್ತು ಅಪ್ಲಿಕೇಶನ್ ಏಜೆನ್ಸಿಗಳ ನಡುವೆ ಹೊಂದಾಣಿಕೆ

2.5 ಜ್ಞಾನ–ಉದ್ಯೋಗಕ್ಕಾಗಿ ಸ್ಟಾರ್ಟ್ ಅಪ್ ಮತ್ತು ಉದ್ಯಮಗಳಿಗೆ ಮಾದರಿಗಳು

2.6 ವಾರ್ಷಿಕಪ್ರಶಸ್ತಿಗಳಮೂಲಕವಿವಿಧಕ್ಷೇತ್ರಗಳನವನಿರ್ಮಿತಿಕಾರರನ್ನುಗುರುತಿಸುವುದು

**3 ಆಡಳಿತ / ಹಣಕಾಸು**

3.1 ಸಂಭಾವ್ಯ ನವನಿರ್ಮಿತಿಕಾರರಿಂದ ಪರಿಕಲ್ಪನೆಗಳು, ಪ್ರಕ್ರಿಯೆಗಳು ಮತ್ತು ಉತ್ಪನ್ನಗಳನ್ನು ಆಹ್ವಾನಿಸುವ ಪ್ರಕಟಣೆಯನ್ನು ಪ್ರತಿವರ್ಷ ಜೂನ್ ತಿಂಗಳಿನಲ್ಲಿ ಕೆಎಸ್‌ಟಿಎ ಜಾಲತಾಣದಲ್ಲಿ ಮತ್ತು ಪ್ರಮುಖ ಪತ್ರಿಕೆಯಲ್ಲಿ ಸುದ್ದಿಯಾಗಿ ಪ್ರಕಟಿಸಲಾಗುವುದು. ಅರ್ಜಿಗಳು / ನಾಮನಿರ್ದೇಶನಗಳನ್ನು ವರ್ಷದುದ್ದಕ್ಕೂ ಸ್ವೀಕರಿಸಲಾಗುತ್ತದೆ

3.2 ಶಿಕ್ಷಣ ತಜ್ಞರು, ವಿಜ್ಞಾನಿಗಳು, ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಕೈಗಾರಿಕೆ ಮತ್ತು ಕೃಷಿ–ಸಂಬಂಧಿತ ಕಾರ್ಮಿಕರು ಮತ್ತು ಜನಸಾಮಾನ್ಯರು ತಮ್ಮ ನಾವೀನ್ಯತೆಯ ಹಕ್ಕುಸಾಧನೆಗಳನ್ನು ವರ್ಷದುದ್ದಕ್ಕೂ ಕಳುಹಿಸಬಹುದು

3.3 ಅಕಾಡೆಮಿಯ ಸಂಪನ್ಮೂಲ ಕ್ರೋಢೀಕರಣ ಸಮಿತಿಯು ತ್ರೈಮಾಸಿಕ ಆಧಾರದ ಮೇಲೆ ಪ್ರವೇಶಗಳನ್ನು ಪರಿಶೀಲಿಸುತ್ತದೆ ಮತ್ತು ಮೇಲೆ ಸೂಚಿಸಿದಂತೆ ಪರಿಷ್ಕರಣೆ, ಸ್ಕೇಲ್ ಅಪ್, ವಾಣಿಜ್ಯೀಕರಣ, ಆರ್ಥಿಕ ನೆರವು ಇತ್ಯಾದಿಗಳಿಗೆ ಮುಂದಿನ ಕ್ರಮವನ್ನು ಶಿಫಾರಸು ಮಾಡುತ್ತದೆ

3.4 ಕೆಎಸ್‌ಟಿಎಯಿಂದ ಅಗತ್ಯ–ಆಧಾರಿತ, ಸೀಮಿತ ಹಣಕಾಸಿನ ನೆರವು ಅಸ್ತಿತ್ವದಲ್ಲಿರುವ ನಿಬಂಧನೆಗಳ ಪ್ರಕಾರ ನಿರ್ದಿಷ್ಟ ಉದ್ದೇಶಕ್ಕಾಗಿ ಹಣವನ್ನು ಬಳಸುವುದು; ತಾಂತ್ರಿಕ ಮತ್ತು ಆರ್ಥಿಕ ಪ್ರಗತಿಯ ವರದಿ; ಸರಿಯಾದ ಐಪಿ ನಿಬಂಧನೆಗಳಿಗೆ ಸಂಬಂಧಿಸಿದಂತೆ ಒಪ್ಪಂದ; ಮತ್ತು ಎಂಒಎಗಳು (ಮೆಮೊರಾಂಡಮ್ ಆಫ್ ಅಗ್ರೀಮೆಂಟ್) ಮುಂತಾದ ನಿಯಮಗಳನ್ನು ಆಧರಿಸಿರುತ್ತದೆ.

3.5 ಕಾರ್ಯಾಗಾರಗಳು ಮತ್ತು ನಾವೀನ್ಯತೆ–ಸಂಬಂಧಿತ ಸಭೆಗಳನ್ನು ಕೆಎಸ್‌ಟಿಎಯ ನಿಬಂಧನೆಗಳ ಪ್ರಕಾರ ಆಯೋಜಿಸಲಾಗುತ್ತದೆ

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**(ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ)**

## ಪರಿಷ್ಕರಣೆ / ಸ್ಕೇಲ್ ಅಪ್ / ಬೌದ್ಧಿಕ ಆಸ್ತಿ ಸಂರಕ್ಷಣೆ / ವಾಣಿಜ್ಯೀಕರಣಕ್ಕಾಗಿ ನಾವೀನ್ಯತಾ ವೇದಿಕೆಗೆ ಅರ್ಜಿ ನಮೂನೆ

(ಅರ್ಜಿ ಅಥವಾ ಒಬ್ಬ ಶ್ರೇಷ್ಠ ವ್ಯಕ್ತಿಯಿಂದ ನಾಮನಿರ್ದೇಶನ)

1. ಪ್ರಸ್ತಾಪಿಸುವವರ ಹೆಸರು:
2. ವಿಳಾಸ:
   ಇಮೇಲ್
   ದೂರವಾಣಿ ಸಂಖ್ಯೆ.
   ಫ್ಯಾಕ್ಸ್
3. ನಾವೀನ್ಯತೆಯ ಶೀರ್ಷಿಕೆ (ಮಾದರಿ ಮತ್ತು ವಿನ್ಯಾಸ):
4. ಕೆಲಸದ ಉದ್ದೇಶಗಳು:
5. ನವೀನ ಮಾದರಿ / ಅಭಿವೃದ್ಧಿಪಡಿಸಲಾದ ವಿನ್ಯಾಸದ ವಿವರಗಳು:
6. ಯೋಜನೆಗಾಗಿ ಯಾವುದೇ ಅನುದಾನವನ್ನು ಪಡೆಯಲಾಗಿದೆಯೇ? ಒಂದುವೇಳೆ ಪಡೆದಿದ್ದರೆ, ಏಜೆನ್ಸಿಯ ಹೆಸರು:
7. ಆಹ್ವಾನಿಸಿದಾಗಲೆಲ್ಲಾ ನೀವು ಮೂಲಮಾದರಿಯನ್ನು ಪ್ರದರ್ಶಿಸಬಹುದೇ?:
8. ನಾವೀನ್ಯತೆಯು ಜನಸಾಮಾನ್ಯರಿಗೆ ಮತ್ತು ಒಟ್ಟಾರೆಯಾಗು ಸಮಾಜಕ್ಕೆ ಹೇಗೆ ಸಹಾಯ ಮಾಡುತ್ತದೆ?:
9. ಈ ನಾವೀನ್ಯತೆಗಾಗಿ ನೀವು ಯಾವುದೇ ಪ್ರಶಸ್ತಿಯನ್ನು ಪಡೆದಿದ್ದೀರಾ?:
10. ಪರಿಷ್ಕರಣೆ / ಸ್ಕೇಲ್ ಅಪ್ / ಬೌದ್ಧಿಕ ಆಸ್ತಿ ಸಂರಕ್ಷಣೆ / ವಾಣಿಜ್ಯೀಕರಣಕ್ಕಾಗಿ ಮುಂದಿನ ಕ್ರಿಯಾ ಯೋಜನೆ ಏನು?:
11. ಸಂಸ್ಥೆಯ ಹೆಸರು ಮತ್ತು ವಿಳಾಸ ಹಾಗೂ ಒಪ್ಪಿಗೆಯೊಂದಿಗೆ, ಮೇಲಿನವುಗಳಿಗೆ ಎಲ್ಲಿ ಮಾರ್ಗದರ್ಶನ ಅಗತ್ಯವಿದೆಯೋ ಆ ಸಂಸ್ಥೆ:
12. ಕಾರ್ಯಕ್ರಮದ ಸಂಕ್ಷಿಪ್ತ ಸಾರಾಂಶ (ಗರಿಷ್ಠ 250 ಪದಗಳು):
13. ಕೆಎಸ್ಟಿಎಯಿಂದಅಗತ್ಯವಿರುವವಾಸ್ತವಿಕನೆರವು:

**ಘೋಷಣೆ**

ಮೇಲೆ ನೀಡಲಾದ ಮಾಹಿತಿಯು ನನ್ನ ಜ್ಞಾನ ಮತ್ತು ನಂಬಿಕೆಗೆ ಅನುಗುಣವಾಗಿ ಸತ್ಯ, ಸಂಪೂರ್ಣ ಮತ್ತು ಸರಿಯಾಗಿದೆ ಎಂದು ನಾನು ಈ ಮೂಲಕ ಘೋಷಿಸುತ್ತೇನೆ. ಪಕ್ಷಪಾತ ತೋರಿಸಲು ಪ್ರಭಾವಬೀರುವ ಯಾವುದೇ ಪ್ರಯತ್ನವನ್ನು ಅನರ್ಹತೆ ಎಂದು ಪರಿಗಣಿಸಲಾಗುತ್ತದೆ ಮತ್ತು ಅಂತಹ ವ್ಯಕ್ತಿಯ ನವೀನ ಯೋಜನೆಯನ್ನು ಯಾವುದೇ ಮಾಹಿತಿಯಿಲ್ಲದೆ ತಿರಸ್ಕರಿಸಲಾಗುತ್ತದೆ ಎನ್ನುವುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ.

ಸ್ಥಳ:

ದಿನಾಂಕ:

(ಅರ್ಜಿದಾರರ ಹೆಸರು ಅಥವಾ ಪ್ರಸ್ತಾಪಿಸುವವರ ಹೆಸರು)

ಸಹಿ

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು

## XIV. ಪಿಎಂಇ ಮತ್ತು ಇಂಪ್ಯಾಕ್ಟ್ ಅಸೆಸ್ಮೆಂಟ್ ಅಧ್ಯಯನಗಳಿಗೆ ಮಾರ್ಗಸೂಚಿಗಳು

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗವಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ 2005ರಿಂದ ಕಾರ್ಯನಿರ್ವಹಿಸುತ್ತಿದ್ದು, ವಿಜ್ಞಾನ ಸಂವಹನ, ತಂತ್ರಜ್ಞಾನ ಪ್ರಸಾರ, ಸಾಮಾಜಿಕ ಲಾಭಕ್ಕಾಗಿ ನಾವೀನ್ಯತೆ ಮತ್ತು ಉದ್ಯಮಶೀಲತೆಗಳನ್ನು ಬೆಳೆಸುವುದು, ಪ್ರತಿಭೆಗಳನ್ನು ಗುರುತಿಸುವುದು ಮತ್ತು ಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಾಮರ್ಥ್ಯ ವೃದ್ಧಿ ಹಾಗೂ ರಾಜ್ಯಕ್ಕೆ ಎಸ್ಟಿಐ ಕಾರ್ಯನೀತಿ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮೂಲಕ ನಾಗರಿಕ ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಉದ್ದೇಶ ಹೊಂದಿದೆ.

ಕಳೆದ 15 ವರ್ಷಗಳಲ್ಲಿ, ಅಕಾಡೆಮಿಯು ವಿಜ್ಞಾನಿಗಳು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗಾಗಿ ಸಮ್ಮೇಳನಗಳು, ತರಬೇತಿ ಕಾರ್ಯಾಗಾರಗಳು, ಸರ್ಟಿಫಿಕೇಟ್ ಕೋರ್ಸ್‌ಗಳು, ಪ್ರಬಂಧ ಮತ್ತು ರಸಪ್ರಶ್ನೆ ಸ್ಪರ್ಧೆಗಳು, ಪ್ರಕಟಣೆಗಳು ಇತ್ಯಾದಿಗಳ ಮೂಲಕ ವಿಜ್ಞಾನ ಸಂವಹನ ಮತ್ತು ತಂತ್ರಜ್ಞಾನ ಪ್ರಸರಣ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. ಈ ಕಾರ್ಯಕ್ರಮಗಳ ಸಾಮಾಜಿಕ ಪ್ರಭಾವವನ್ನು ನಿರ್ಣಯಿಸಲು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಈಗ ಮತ್ತು ಪ್ರತಿ ಐದು ವರ್ಷಗಳ ನಂತರ ಪರಿಣಾಮದ ಮೌಲ್ಯಮಾಪನ ಅಧ್ಯಯನವನ್ನು ಕೈಗೊಳ್ಳಲು ಪ್ರಸ್ತಾಪಿಸಿದೆ. ಇದಲ್ಲದೆ, ಬದಲಾವಣೆಯ ಪ್ರಕ್ರಿಯೆಯಲ್ಲಿ, ಪ್ರಯಾರಿಟೈಸೇಶನ್, ಮಾನಿಟರಿಂಗ್ ಮತ್ತು ಎವ್ಯಾಲುಯೇಶನ್ ಯಾವುದೇ ಸಂಸ್ಥೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಿದೆ. ಸಾಂಸ್ಥಿಕೀಕರಿಸಿದಾಗ ಅದು ಪಾಲುದಾರರಿಗೆ ಸಂಭಾವ್ಯ ಪ್ರಯೋಜನಗಳನ್ನು ತೋರಿಸುತ್ತದೆ ಮತ್ತು ಸಾರ್ವಜನಿಕ ಭಾಗವಹಿಸುವಿಕೆಯನ್ನು ಹೆಚ್ಚಿಸುತ್ತದೆ.

**1. ಉದ್ದೇಶಗಳು**

1.1 ಔಟ್‌ಪುಟ್ ಮತ್ತು ಔಟ್‌ಕಮ್ ಸೇರಿದಂತೆ ಕೆಎಸ್‌ಟಿಎ ಕಾರ್ಯಕ್ರಮಗಳ ಪ್ರಭಾವವನ್ನು ನಿರ್ಣಯಿಸುವುದು

1.2 ಹೆಚ್ಚಿನ ಪ್ರಭಾವದ ಪ್ರದೇಶಗಳನ್ನು ಗುರುತಿಸುವುದು ಮತ್ತು ಹೊಸ ಸಾಧನಗಳನ್ನು ಸಂಯೋಜಿಸುವುದು

1.3 ಭವಿಷ್ಯದ ಕಾರ್ಯಕ್ರಮಗಳ ಪಿಎಂಇಗಾಗಿ ಒಂದು ಚೌಕಟ್ಟನ್ನು ಒದಗಿಸುವುದು

1.4 ಆಸಕ್ತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳಲ್ಲಿ ಪಿಎಂಇ ಮತ್ತು ಐಎ ಸಾಕ್ಷರತೆಯನ್ನು ಹರಡುವುದು

**2. ಪ್ರಕ್ರಿಯೆ**

2.1 ಸಾಮಾಜಿಕ ಸಮಸ್ಯೆಗಳು ಮತ್ತು ಚರ್ಚೆಗಳಿಗೆ ಉದ್ದೇಶಿಸಿರುವ ಪ್ರಮುಖ ಕಾರ್ಯಕ್ರಮಗಳನ್ನು ಗುರುತಿಸುವುದು

2.2 ಕಾರ್ಯಕ್ರಮಗಳಲ್ಲಿ ಪಾಲುದಾರರು ಮತ್ತು ಪಾಲ್ಗೊಳ್ಳುವವರನ್ನು ಪ್ರೊಫೈಲ್ ಮಾಡುವುದು

2.3 ಐಎ ಅಧ್ಯಯನಕ್ಕಾಗಿ ಮೂರನೇ ವ್ಯಕ್ತಿ / ತಜ್ಞರ ಮೌಲ್ಯಮಾಪನವನ್ನು ನಿಯೋಜಿಸುವುದು

2.4 ಮುಂಬರುವ ಚಟುವಟಿಕೆಗಳಿಗಾಗಿ ಪಿಎಂಇ ಚೌಕಟ್ಟನ್ನು ಸ್ಥಾಪಿಸುವುದು

3. ಆಡಳಿತ / ಹಣಕಾಸು

3.1 ಐಎ ಮತ್ತು ಪಿಎಂಇ ಪ್ರದೇಶದ ತಜ್ಞರು / ವೃತ್ತಿಪರರಿಂದ ಆಸಕ್ತಿಯ ಅಭಿವ್ಯಕ್ತಿಯನ್ನು ಆಹ್ವಾನಿಸುವ ಪ್ರಕಟಣೆಯನ್ನು ಕೆಎಸ್‌ಟಿಎ ವೆಬ್‌ಸೈಟ್‌ನಲ್ಲಿ ಸಂಕ್ಷಿಪ್ತ ಅರ್ಜಿ ನಮೂನೆಯೊಂದಿಗೆ ಪ್ರಕಟಿಸಲಾಗುವುದು

3.2 ಅಕಾಡೆಮಿಯ ಮಾನವ ಸಂಪನ್ಮೂಲ ಸಮಿತಿಯು ಮೌಲ್ಯಮಾಪನವನ್ನು ಕೈಗೊಳ್ಳುವ ಏಜೆನ್ಸಿ/ತಜ್ಞರ ಜೊತೆಗೆ, ಕಾಲಮಿತಿ ಮತ್ತು ಹಣಕಾಸಿನೊಂದಿಗೆ, ಪ್ರಕ್ರಿಯೆಯನ್ನು ಪರಿಶೀಲಿಸುತ್ತದೆ ಮತ್ತು ಅನುಮೋದಿಸುತ್ತದೆ.

3.3 ಅಗತ್ಯವಾದ ಲಾಜಿಸ್ಟಿಕ್ಸ್ ಮತ್ತು ಹಣಕಾಸು ಒದಗಿಸುವುದು; ಮೌಲ್ಯಮಾಪನಕ್ಕಾಗಿ ದಾಖಲೆಗಳು

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು

## XV. ವಿಜ್ಞಾನ ಪ್ರವಾಸೋದ್ಯಮಕ್ಕೆ ಮಾರ್ಗಸೂಚಿಗಳು

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗವಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ 2005ರಿಂದ ಕಾರ್ಯನಿರ್ವಹಿಸುತ್ತಿದ್ದು, ವಿಜ್ಞಾನ ಸಂವಹನ, ತಂತ್ರಜ್ಞಾನ ಪ್ರಸಾರ, ಸಾಮಾಜಿಕ ಲಾಭಕ್ಕಾಗಿ ನಾವೀನ್ಯತೆ ಮತ್ತು ಉದ್ಯಮಶೀಲತೆಗಳನ್ನು ಬೆಳೆಸುವುದು, ಪ್ರತಿಭೆಗಳನ್ನು ಗುರುತಿಸುವುದು ಮತ್ತು ಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಾಮರ್ಥ್ಯ ವೃದ್ಧಿ ಹಾಗೂ ರಾಜ್ಯಕ್ಕೆ ಎಸ್‌ಟಿಐ ಕಾರ್ಯನೀತಿ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮೂಲಕ ನಾಗರಿಕ ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಉದ್ದೇಶ ಹೊಂದಿದೆ.

ಕಲೆ ಮತ್ತು ಸಂಸ್ಕೃತಿ, ಸ್ಮಾರಕಗಳು, ಯಾತ್ರಾ ಕೇಂದ್ರಗಳು, ಕೃಷಿ, ಕೈಗಾರಿಕೆ, ಯುದ್ಧ ಸ್ಮಾರಕಗಳು ಮುಂತಾದ ವಿಭಿನ್ನ ರೀತಿಯ ಪ್ರವಾಸೋದ್ಯಮವು ಇತ್ತೀಚಿನ ವರ್ಷಗಳಲ್ಲಿ ಹೊರಹೊಮ್ಮುತ್ತಿದೆ. ವಿಜ್ಞಾನ ಉದ್ಯಾನಗಳು, ಸಂಸ್ಥೆಗಳು, ವಿಜ್ಞಾನ ದಂತಕಥೆಗಳಿಗೆ ಸಂಬಂಧಿಸಿದ ತಾಣಗಳು ಇತ್ಯಾದಿಗಳೊಂದಿಗೆ ವಿಜ್ಞಾನ ಪ್ರವಾಸೋದ್ಯಮವನ್ನು ಚರ್ಚಿಸಲಾಗುತ್ತಿದೆ, ಮತ್ತು ಈ ಕುರಿತು ವಿದೇಶಗಳಲ್ಲಿ ಪದವಿ ಕಾರ್ಯಕ್ರಮಗಳೂ ಇವೆ. ಕೈಗಾರಿಕೆಗಳೂ ಸೇರಿದಂತೆ ಕರ್ನಾಟಕವು 1950ರ ದಶಕದಿಂದಲೇ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿದೆ ಮತ್ತು ಬೆಂಗಳೂರು 'ವಿಜ್ಞಾನ ನಗರ'ವೆಂದು ಹೆಸರಾಗಿದೆ. ಈ ಅಂಶವನ್ನು ಪರಿಗಣಿಸಿ, ಸಂಸ್ಥೆಗಳು ಮತ್ತು ಉದ್ಯಮಗಳನ್ನು ನಡೆಸುವ ವಿಭಿನ್ನ ಪಾಲುದಾರರು ಮತ್ತು ಪ್ರವಾಸಿಗರಿಬ್ಬರಿಗೂ ಮುಂದಿನ ದಿನಗಳಲ್ಲಿ ಪ್ರಯೋಜನಕಾರಿಯಾಗುವಂತೆ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೃಷಿ, ಕೈಗಾರಿಕೆ ಮತ್ತು ಪ್ರವಾಸೋದ್ಯಮ ಇಲಾಖೆಗಳಿಗೆ ಮಾದರಿಯಾಗುವಂತೆ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ವಿಜ್ಞಾನ ಪ್ರವಾಸೋದ್ಯಮವನ್ನು ಹೊಸ ವೃತ್ತಿಯಾಗಿ ಪ್ರಸ್ತಾಪಿಸಿದೆ.

**1. ಉದ್ದೇಶಗಳು**

1.1 ವಿಜ್ಞಾನ ಪ್ರವಾಸೋದ್ಯಮವನ್ನು ಇನ್ಫೋಟೈನ್ಮೆಂಟ್‌ನ ಹೊಸ ಆಯಾಮವಾಗಿ ಅನ್ವೇಷಿಸುವುದು

1.2 ರಾಜ್ಯದಲ್ಲಿರುವ ಪಾರಂಪರಿಕ ಹಾಗೂ ಪ್ರಸ್ತುತ – ಎರಡೂ ಬಗೆಯ ವಿಜ್ಞಾನ ಮತ್ತು ತಂತ್ರಜ್ಞಾನ ತಾಣಗಳನ್ನು ದಾಖಲಿಸುವುದು

1.3 ರಾಜ್ಯದ ವಿವಿಧ ಭಾಗಗಳಲ್ಲಿ ವಿಜ್ಞಾನ ಪ್ರವಾಸೋದ್ಯಮ ಕ್ಯಾಪ್ಸುಲ್‌ಗಳನ್ನು ವಿನ್ಯಾಸಗೊಳಿಸುವುದು

1.4 ವಿಜ್ಞಾನ ಪ್ರವಾಸೋದ್ಯಮದಲ್ಲಿ ಅಲ್ಪ ಮತ್ತು ದೀರ್ಘಾವಧಿಯ ಸಾಮರ್ಥ್ಯವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವುದು

1.5 ಇನ್‌ಕ್ಯುಬೇಟರ್‌ಗಳು ಮತ್ತು ಸ್ಟಾರ್ಟ್ ಅಪ್‌ಗಳೊಂದಿಗೆ ವಿಜ್ಞಾನ ಪ್ರವಾಸೋದ್ಯಮದಲ್ಲಿ ಉದ್ಯಮಶೀಲತೆಯನ್ನು ಅಭಿವೃದ್ಧಿಪಡಿಸುವುದು

1.6 ವಿದ್ಯಾರ್ಥಿಗಳು ಮತ್ತು ಉದ್ಯಮಗಳಿಗೆ ಸಂಗತವಾದ ಸಾಹಿತ್ಯವನ್ನು ಪ್ರಕಟಿಸುವುದು

**2. ಪ್ರಕ್ರಿಯೆ**

2.1 ವಿಜ್ಞಾನ ಮತ್ತು ತಂತ್ರಜ್ಞಾನ, ಉನ್ನತ ಶಿಕ್ಷಣ, ಕೃಷಿ, ತೋಟಗಾರಿಕೆ, ರೇಷ್ಮೆ ಕೃಷಿ, ಹೈನುಗಾರಿಕೆ, ಮೀನುಗಾರಿಕೆ, ಅರಣ್ಯ, ಕೈಗಾರಿಕೆ, ವಿಶ್ವವಿದ್ಯಾಲಯಗಳು ಹಾಗೂ ಕಾರ್ಪೊರೇಟ್ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು ಮುಂತಾದ ವಿವಿಧ ವಿಭಾಗಗಳಲ್ಲಿ ಪ್ರವಾಸೋದ್ಯಮ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಘಟಕಗಳೊಂದಿಗೆ ವ್ಯವಹರಿಸುವ ಇಲಾಖೆಗಳು ಮತ್ತು ಏಜೆನ್ಸಿಗಳ ಜಾಲವನ್ನು ಸ್ಥಾಪಿಸುವುದು

2.2 ಪರಿಕಲ್ಪನೆಗಳು ಮತ್ತು ಕಾರ್ಯಗಳಿಗೆ ಸಂಬಂಧಿಸಿದಂತೆ ಪ್ರವಾಸೋದ್ಯಮ ಮತ್ತು ವಿಭಿನ್ನ ಕ್ಷೇತ್ರಗಳ ತಜ್ಞರೊಂದಿಗೆ ಸಮಾಲೋಚನೆ; ಪ್ರವಾಸೋದ್ಯಮದ ಉದ್ದೇಶಕ್ಕಾಗಿ ವಿವಿಧ ಕ್ಷೇತ್ರಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ಪಾಲುದಾರರ ಚರ್ಚೆಗಳು

2.3 ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಗ್ರಾಹಕೀಯಗೊಳಿಸಿದ ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ (ಅರಣ್ಯ ಚಾರಣವನ್ನು ಉದಾಹರಣೆಯಾಗಿ ತೆಗೆದುಕೊಂಡು) ಜಿಲ್ಲಾ ವಿಜ್ಞಾನ ಕೇಂದ್ರಗಳು, ಡಿಎಸ್‌ಟಿ, ಕರ್ನಾಟಕ ಸರ್ಕಾರದ ಜೊತೆಗೆ ನೆಟ್‌ವರ್ಕಿಂಗ್

2.4 ಗ್ರಾಮೀಣ ಯುವಕರಿಗೆ ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ವಿಜ್ಞಾನ ಪ್ರವಾಸೋದ್ಯಮದ ಅನಾವರಣ ಮತ್ತು ತರಬೇತಿ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸುವುದು

2.5 ವೃತ್ತಿಪರರ ನೆರವಿನೊಂದಿಗೆ, ಅಭ್ಯರ್ಥಿಗಳಿಗೆ ಮಾರ್ಗದರ್ಶನ ನೀಡಲು ಪಾಲುದಾರರ ಭಾಗವಹಿಸುವಿಕೆಯೊಂದಿಗೆ ಫಾರ್ಮ್‌ಗಳಲ್ಲಿ / ಸಂಸ್ಥೆಗಳಲ್ಲಿ ಇನ್‌ಕ್ಯುಬೇಟರ್‌ಗಳನ್ನು ಸ್ಥಾಪಿಸುವುದು

2.6 ವಿಜ್ಞಾನ ಪ್ರವಾಸಿ ಕೇಂದ್ರಗಳು ಮತ್ತು ಉದ್ಯಮಿಗಳನ್ನು ಗುರುತಿಸುವುದು

**3. ಆಡಳಿತ / ಹಣಕಾಸು**

3.1 ಮೇಲೆ ತಿಳಿಸಿದಂತೆ ಜಿಲ್ಲಾ ವಿಜ್ಞಾನ ಕೇಂದ್ರಗಳು ಮತ್ತು ಇತರ ಸಂಬಂಧಿತ ಇಲಾಖೆಗಳಿಂದ ಹಾಗೂ ಸಂಭಾವ್ಯ ಉದ್ಯಮಿಗಳಿಂದ ಪರಿಕಲ್ಪನೆಗಳನ್ನು ಆಮಂತ್ರಿಸುವ ಪ್ರಕಟಣೆಯನ್ನು ಪ್ರತಿವರ್ಷ ಜೂನ್ ತಿಂಗಳಲ್ಲಿ ಕೆಎಸ್ಟಿಎ ಜಾಲತಾಣದಲ್ಲಿ ಮತ್ತು ಪ್ರಮುಖ ಪತ್ರಿಕೆಗಳಲ್ಲಿ ಸುದ್ದಿಯಾಗಿ ಪ್ರಕಟಿಸಲಾಗುತ್ತದೆ. ಅರ್ಜಿಗಳು / ನಾಮನಿರ್ದೇಶನಗಳನ್ನು ವರ್ಷದುದ್ದಕ್ಕೂ ಸ್ವೀಕರಿಸಲಾಗುತ್ತದೆ

3.2 ವಿಜ್ಞಾನ ಪ್ರವಾಸೋದ್ಯಮದ ಕುರಿತು ಸ್ಟ್ರ್ಯಾಟಜಿ ಪೇಪರ್ ರೂಪಿಸಲು ತಜ್ಞರು ಮತ್ತು ಪಾಲುದಾರರ ಬ್ರೈನ್‌ಸ್ಟಾರ್ಮಿಂಗ್ ಸಮಾವೇಶವನ್ನು ಆಯೋಜಿಸುವುದು

3.3 ಪ್ರಸ್ತಾಪಿಸಲಾದ ಅಂಶಗಳಿಗೆ, ಸಾಮರ್ಥ್ಯ ವರ್ಧನೆಗೆ, ಕ್ಷೇತ್ರದಲ್ಲಿ ಪೈಲಟ್ ರನ್‌ಗಳಿಗೆ ಮತ್ತು ಸಂಬಂಧಿತ ಅಂಶಗಳಿಗೆ ಅಕಾಡೆಮಿಯ ಸಂಪನ್ಮೂಲ ಕ್ರೋಢೀಕರಣ ಸಮಿತಿಯು ಚೌಕಟ್ಟನ್ನು ರೂಪಿಸುತ್ತದೆ.

3.4 ಕೆಎಸ್‌ಟಿಎಯಿಂದ ಅಗತ್ಯ–ಆಧಾರಿತ, ಸೀಮಿತ ಹಣಕಾಸಿನ ನೆರವು ಅಸ್ತಿತ್ವದಲ್ಲಿರುವ ನಿಬಂಧನೆಗಳ ಪ್ರಕಾರ ಬ್ರೈನ್‌ಸ್ಟಾರ್ಮಿಂಗ್ ಸಮಾವೇಶದಂತಹ ನಿರ್ದಿಷ್ಟ ಉದ್ದೇಶಗಳಿಗೆ ಹಣವನ್ನು ಬಳಸುವುದು, ಸಂಪನ್ಮೂಲ ತಜ್ಞರನ್ನು ಒಳಗೊಂಡ ತರಬೇತಿ ಕಾರ್ಯಕ್ರಮಗಳು, ಮತ್ತು ಎಂಒಯುಗಳೊಂದಿಗೆ ವಿವಿಧ ಸಂಸ್ಥೆಗಳೊಂದಿಗೆ ಸಹಯೋಗ ಮುಂತಾದ ನಿಯಮಗಳನ್ನು ಆಧರಿಸಿರುತ್ತದೆ.

3.5 ಕಾರ್ಯಾಗಾರಗಳು ಮತ್ತು ಸಭೆಗಳನ್ನು ಕೆಎಸ್‌ಟಿಎಯ ನಿಬಂಧನೆಗಳ ಪ್ರಕಾರ ಆಯೋಜಿಸಲಾಗುತ್ತದೆ